AR
216

MADRAS GOVERNMENT ORIENTAL SERIES

No. CI.

ಸದ್ಗುರುರಹಸ್ಯಂ

SADGURU RAHASYAM

MADRAS GOVERNMENT ORIENTAL SERIES

PUBLISHED UNDER THE AUTHORITY
OF THE
GOVERNMENT OF MADRAS.

General Editor
T. CHANDRASEKHARAN, M.A., L.T.,
Curator, Government Oriental Manuscripts Library
Madras.

No. CI.

ಸದ್ಗುರುರಹಸ್ಯಂ

PRINTED AT
THE SREEVATHSA PRESS
ROYAPETTAH, MADRAS.

SADGURU RAHASYAM

OF

GURUBASAVA

CRITICALLY EDITED WITH INTRODUCTION

BY

M. MARIAPPA BHAT, M.A., L.T.
(*Head of the Kannada Dept. University of Madras.*)

GOVERNMENT ORIENTAL MANUSCRIPTS LIBRARY, MADRAS.

1951

[Price Rs. 2—4—0

Introduction

The Government of Madras took up for consideration the question of publication of the various manuscripts in different languages on subjects like Philosophy, Medicine, Science, etc., early in May, 1948. Important Manuscripts Libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this request. This list as well as a similar list of unpublished manuscripts in the Government Oriental Manuscripts Library, Madras, were carefully examined and a tentative selection of manuscripts suitable for publication was made. The Government in their Memorandum No. 34913/41-10, Education, dated 4-4-49, constituted an Expert Committee with the Curator of the Government Oriental Manuscripts Library, Madras, as the Secretary, for the final selection of manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pilli, M.A., B.L.,
2. ,, P. Sethu Pillai, B.A., B.L.,
3. ,, C. M. Ramachadra Chettiar, B.A., B.L.,
4. ,, R. Krishnamoorthy, (Kalki).
5. Dr. N. Venkataramanayya, M.A., Ph.D.,
6. Sri M. Ramanuja Rao Naidu, M.A.,
7. ,, V. Prabhakara Sastri.
8. ,, N. Venkata Rao, M.A.,
9. ,, H. Sesha Ayyangar.
10. ,, Masti Venkatesa Ayyangar, M.A.,
11. ,, M. Mariappa Bhat. M.A., L.T.,
12. Dr. C. Achyuta Menon, B.A., Ph.D.,
13. ,, C. Kunhan Raja, M.A., D.Phil.,
14. ,, A. Sankaran, M.A., Ph.D., L.T.,
15. Sri P. S. Rama Sastri.
16. ,, S. K. Ramanatha Sastri.
17. Dr. M. Abdul Haq, M.A., D.Phil., (Oxon).
18. Afzul-ul-Ulama Hakim Khader Ahamed.
19. Sri P. D. Joshi.
20. ,, S. Gopalan, B.A., B.L.,
21. ,, T. Chandrasekharan, M.A., L.T.,

With the exception of Sri Masti Venkatesa Ayyangar, and Dr. C. Kunhan Raja, the above members continued to be members of the Expert Committee for 1950-1951 also to which the following gentlemen were included in Govt. Memo. No. 7297-E/50-3, Edn., D/-19-5-'50 and Govt. Memo No. 15875-E/50-4. Edn., D/7-9-'50.

1. Dr. . Chidambaranatha Chettiar, M.A., Ph.D.,
2. Sri S. Govindarajulu, B.A., B.L., LL.B., Bar-at-law.
3. Capt. G. Srinivasamoorthy, B.A., B.L., M.B., AND C.M.,
4. Dr. Muhammad Hussain Nainar, M.A., Ph.D.,
5. Sri T. V. Subba Rao, B.A., B.L.,
6. Principal, College of Indian Medicine, Madras.

The members of the Committee formed into Sub-committees for the various languages, Sanskrit, Tamil, Telugu, Kannada, Malayalam, Marathi, and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government and they have decided to call these publications as the "MADRAS GOVERNMENT ORIENTAL SERIES" and appointed the Curator, Government Oriental Manuscripts Library, Madras, as the General Editor of the publications.

The following manuscripts were taken up for publication during 1949—50.

"A" FROM THE GOVERNMENT ORIENTAL MANUSCRIPTS LIBRARY, MADRAS.

TAMIL

1. Kappal Sāttiram.
2. Anubhava Vaidya Murai
3. Āttānakolāhalam.
4. Upadēs'a Kāṇḍam.
5. Cōlan Pūrva Paṭṭayam.
6. Konga Dēs'a Rājākkal.
7. Sivajnāna Dīpam.

TELUGU

1. Auṣadha Yōgamulu.
2. Uaidya Nighaṇṭu.
3. Dhanurvidyā Vilāsamu.
4. Yōga Dars'ana Viṣayamu.
5. Kadgha Lakṣaṇa S'irōmani.

SANSKRIT

1. Visanārāyaṇīyam. (Tantrasārasangraha)
2. Bhārgava Nāḍikā.
3. Hariharacaturangam.
4. Brahmasūtravṛtti-Mitākṣara.
5. Nyāyasidhānta Tattvāmṛtam.

MALAYALAM

1. Garbha Cikitsā.
2. (a) Vāstulakṣaṇam.
   (b) S'ilpaviṣayam.
3. Mahāsāram.
4. Kaṇakkusāram.
5. Kriyākramam.
6. Kaṇakkusāram-Bālaprabōdham.

KANNADA

1. Lōkōpakāram.
2. Raṭṭamatam.
3. As'vas'āstram.
4. Vividha Vaidya Viṣayagaḷu.
5. Saṅgītaratnākara.
6. Sūpas'āstra.

ISLAMIC LANGUAES

1. Jamil-Al-Ashya.
2. Tibb-E-Faridi.
3. Tahqiq-Al-Buhran.
4. Safinat-Al-Najat.

"B" FROM THE TANJORE MAHARAJA SERFOJI'S SARASVATHI MAHAL LIBRARY, TANJORE.

TAMIL

1. S'arabhēndravaidya Muṟai (Diabetics).
2. do (Eyes).
3. Agastiyar 200.
4. Koṅkaṇars'arakku Vaippu,
5. Tirucirrambalakkōvaiyār with Padavurai.

6. Kālacakram
7. Tālasamudram
8. Bharatanāṭyam
9. *(a)* Pāṇḍikēli Vilāsam Nāṭakam
   (b) Pūrūrava Cakravarti Nāṭakam
   (c) Madana Sundara Vilāsa Nāṭakam
   (d) Percy Macqueen's Collection in the Madras University Library on Folklore.
10. Rāmaiyan Ammānai
11. Tamil Pāṭalkaḷ including Paṭṭiṇattār Veṇbā and Vaṇṇaṅkaḷ.

TELUGU

1. Kāmandakanītisāramu
2. Tāladas'āprāṇapradīpikā
3. *(a)* Raghunātha Nāyaka Abhyudayamu
   (b) Rājagōpāla Vilāsamu
4. Rāmāyaṇamu by Kaṭṭa Varadarāju

MARATHI

1. Nāṭyas'āstra Saṅgraha
2. *(a)* Book of Knowledge
   (b) Folk Songs.
   (c) Dārā Darun Vēṇi Paddhati
   (d) As'vāsa Catula Dumani
3. *(a)* Pratāpasimhēndra Vijaya Prabandha
   (b) S'arabhēndra Tīrthāvaḷi
   (c) Lāvaṇi
4. Dēvēndra Kuravañji
5. Bhakta Vilāsa
6. S'lōka Baddha Rāmāyaṇa

SANSKRIT

1. As'vas'āstra with Tricolour Illustrations
2. Rājamṛgāṅka
3. Cikitisāmṛtasāgara
4. Āyurvēdamahōdadhi
5. Gīta Gōvinda Abhinaya

6. *(a)* Cōlacampū
   (b) Sāhēndra Vilāsa
7. Dharmakūtam-Sundara Kāṇḍa
8. Jātakasāra
9. Viṣṇutatvanirṇaya Vyākhyā
10. Saṅgīta Darpaṇa
11. Bījapallava

During 1950, only the Sub—committees for TAMIL, TELUGU and KANNADA met in the month of July 1950 at Madras.

The following books were taken up for publication in the various languages in 1950—51.

TAMIL

1. Daṭcanāyanār-Vaiddiya-Aṭṭavaṇai.
2. Vaiddiyak Kalañciyam
3. Anubavavaiddiyam. V. 3

TELUGU

1. Saivācārasaṅgrahamu.
2. Anubhava Vaidyamu.
3. Abhinayadarpaṇamu.

SANSKRIT

1. Ārōgyacintāmaṇi
2. Tatvasāra with Ratnasāriṇī
3. Sūtrārthāmṛta Laharī.
4. Ratnadīpikā and Ratnas'āstra.

MALAYALAM

1. As'vacikitsa.
2. Phalasārasamuccaya.

KANNADA

1. Vaidya Sāra Saṅgraha.

During 1951—52, only the Sub-committees for TAMIL, TELUGU and MALAYALAM met in the month of April 1951. The following books were taken up for publication in the various languages :—

TAMIL

1. Saptarṣiṇāḍi.
2. Karnāṭakarājākkal Savistara Caritram.
3. Bharata Siddāntam.
4. Pillaippinivākaṭam.
5. Anubava Vaidyam.
6. Maṭṭuvākaṭam.

TELUGU

1. Brahmavaidya Sudhārṇavamu
2. Rāgatālacintāmaṇi.
3. Vaidyacintāmaṇi.
4. Kumāramuni katha.
5. Kaṭamarāju katha.

SANSKRIT

1. Dēvakēralam.
2. Patanjala Yōgasūtra Bhāṣya Vivaraṇa by S'ankarācārya.

MALAYALAM

1. Kilivanḍusamvādam.
2. Advaita Vēdāntam.
3. Bārhaspatyasūtra with Malayalam commentary.
4. Karaṇapaddhati.
5. Yōgasāram.

KANNADA

1. Sadgururahsyam

PERSIAN

1. Shawakil-ul-Hur.

It is hoped that the publication of most of the important manuscripts will be completed within the next four years.

Some of the manuscripts taken up for publication are represented by single copies in the Library and consequently the mistakes that are found in them could not be corrected by comparing them with other copies. The Editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are found, they have been given in the foot-notes except in the case of a few books, in which the correct readings have been given in the foot-note or incorporated in the text itself.

The Government of Madras have to be thanked for financing the entire scheme of publication although there is a drive for economy in all the departments. My thanks are due to the members of the Expert Committee who spared no pains in selecting the manuscripts for publication. I have also to thank the various editors, who are experts in their own field, for readily consenting to edit the manuscripts and see them through the press. The various presses that have co-operated in printing the manuscripts in the best manner possible also deserve my thanks for the patience exhibited by them in carrying out the corrections made in the proofs.

The present work is based on a Palm-Leaf manuscript of the Library described under No. D. 565 of the Descriptive Catalogue of Kannada manuscripts Vol. IV.

There are two other copies D. 566 and D. 682 with which the present copy of this edition was collated. This book, written in Bhamini Satpadi metre, and dealing with the Virasaiva Philosophy, is in the form of conversation between a teacher and his pupil (ಗುರು ಶಿಷ್ಯ ಸಂವಾದ). The author Gurubasava belongs to the 15th century and he was a contemporary of Praudhadevaraya of Vijayanagara. This valuble work is expected to be received well by the followers of the Virasaiva system in particular and by the Kannada scholars in genaral.

Govt. Oriental MSS. Library, Madras, 1—9—51.

T. CHANDRASEKHARAN,
General Editor,
Madras Govt. Oriental Series.

FOREWORD

THE AUTHOR

SADGURU RAHASYA was composed by Guru Basava, one of the famous Veerasaiva teachers of the 15th century. From a reference in the Chennabasava Puranam (Sandhi 63-stanzas 15 and 16) it is found that he was a contemporary of King Praudha Deva Raya(1419-1446 A.D.) of Vijayanagar. Hence scholars opine that he must have lived round about 1430.*

So far nothing has been known about Guru Basava's nativity. But fortunately Telugu Literature comes to our rescue here.

Telugu poet Gangadhara, author of Chennamallesa Sataka observes that he is the disciple of Sri Guru Basava of " Vibhutipura ".

Another Telugu Poet, Kari Basava, author of a Saiva philosophical work, called " Jnana Sindhu " mentions that he is the disciple of Kottur Guru Basavarya (referred to as the Sivayoga Samrajya Simhasanastha). These observations lead us to the conclusion that Guru Basava must have lived and worked in Kotturu and Vibhutipura. It is evident that **Kotturu** is no other place than the Kottur situated in the District of Bellary.

THE WORK

The present work is one of the seven compositions familiarly known as " Sapta Kavyas" among the Veera Saivas. Elements of Veera Saiva philosophy are set forth in these works, mostly in the form of dialogues between Teacher and Pupil. The seven works, are called Siva Yoganga Bhushana, Kalyaneswara, Vrishabha Gite, Swarupamrita Avadhuta Gite, Mano Vijaya Kavya and Sadguru Rahasya. All of them are written in the popular Shatpadi metre. The language employed is very simple. It is creditable that Guru Basava has been able to state some of the great truths without importing difficult technical terminology. He is fully aware of the dictum " Illustrate things far with things near ". We find him drawing his figures of speech from common experience and employing appropriate proverbs to explain complex items. Hence even common people will find no difficulty in understanding the great truths propounded by him.

" SADGURU RAHASYA " means " Secret of good teacher ". Guru Basava styles himself as Desika, Desikottama, Guru, Guruttama etc. and in the course of the work tries to clear the common doubts,

*Lives of Kannada poets vol. II by R. Narasimhachar, pp. 74-75

arising in the mind of the disciple. The work is divided into nine chapters called " Upadesas " (advice). Briefly stated the purport of the work is as follows :— In the first *UPADESA*, Desikottama teaches the 'eligible disciple' who seeks shelter under him about 'Maya'(Illusion), 'tapatraya'(the three afflictions), 'hita'(good)-'ahita'(evil) and 'moksha'. In the second *UPADESA* he points out what distinguishes 'hita' from 'ahita' and how to get real experience. In the third *UPADESA* Guru Basava tries to disabuse the disciple of his attachment to body and its organs(dehendriyas)and explains to him the distinction between *JEEVA* (individual soul) and *PARATMAKA* (supreme self). In the fourth *UPADESA* Jeeva-traya (Naham, Koham Soham) triple aspects of soul are dwelt upon. In the fifth *UPADESA* it is said that " Vasanas" (residual impressions) are responsible for making " Sat " (reality) look like " Sat " (real) and " Asat " (unreal), " Chit " (consciousness) look like "Chit" (conscious) and "achit" (unconscious) and, "Sukha" (bliss) look like " Sukha " (happiness) and " Asukha " (misery). By suitable device, if " Vasana " is converted into " Nirvasana ", there would be " Sat-chit-ananda " alone left in the world. In the sevnth *UPADESA* the teacher instructs the pupil how he could hold the mind unmoving (Nischala). It is true knowledge alone that can accomplish the task of dispelling ignorance and not mere "yoganga vidhi"(path of mind control). In the seventh *UPADESA* chittu(mind), vritti(psychosis), and 'paravastu' (supreme reality) are defined and beautifully illustrated. In the eighth *UPADESA* 'swatmanirupana' (determination of the nature of one's self) is set forth. In the ninth and the last *UPADESA* when the disciple lapses into a feeling that he is different from his self, Guru Basava administers the proper dose of " ananya-bodha " and sets at nought all his doubts.

On the whole, the work is a simple but useful Hand book of Veerasaiva philosophy. It will be very appropriate if the other six of the Saptakavyas are published in the series.

I have to thank my friend Sri. N. Venkata Rao, M.A., Head of the Telugu Department, University of Madras who drew my attention to the reference of Guru Basava in Telugu Literature. Also I thank the Curator, Government Oriental Manuscripts Library for inviting me to edit this work and Sri. P. Subraya Bhat, Vidvan, Kannada Pandit of the Library who helped me in comparing the different readings. The cooperation of Sreevathsa Press is commendable.

Madras.
31-8 51.

M. MARIAPPA BHAT,
Editor and Head of the Dept. of Kannada,
University of Madras

ಮುನ್ನುಡಿ

ಸದ್ಗುರುರಹಸ್ಯವೆಂಬೀ ಗ್ರಂಥವನ್ನು ಮದ್ರಾಸು ಪ್ರಾಚ್ಯ ಹಸ್ತಲಿಖಿತ ಪುಸ್ತಕ ಭಂಡಾರದಲ್ಲಿರುವ ಮೂರು ತಾಳಪತ್ರ ಪ್ರತಿಗಳ ಸಹಾಯದಿಂದ ಪ್ರಕಟಿಸಲಾಗಿದೆ. ಅವುಗಳಲ್ಲಿ D. 565 ನಂಬರದ ಪ್ರತಿಯು ಸಂಪೂರ್ಣವಾಗಿದ್ದುದರಿಂದಲೂ ಕಡಿಮೆ ತಪ್ಪುಗಳಿದ್ದುದರಿಂದಲೂ ಪ್ರಸ್ತುತ ಗ್ರಂಥದ ಪ್ರತಿಯನ್ನು ತಯಾರಿಸುವುದರಲ್ಲಿ ಹೆಚ್ಚಿನ ಪ್ರಯೋಜನವಾಯಿತು. D. 56೮ ಮತ್ತು D. 6೩2 ಎಂಬ ಮಿಕ್ಕೆರಡು ಪ್ರತಿಗಳು ಕೆಲವು ಶುದ್ಧ ಪಾಠಗಳನ್ನು ಆಯ್ದುಕೊಳ್ಳಲು ಅನುಕೂಲವಾದುವು.

ಇದನ್ನು ಗುರುಬಸವನೆಂಬ ಪ್ರಸಿದ್ಧ ವೀರಶೈವಮತಾಚಾರ್ಯನು ರಚಿಸಿದನು. ವಿರೂಪಾಕ್ಷ ಪಂಡಿತಕೃತ ಚೆನ್ನಬಸವ ಪುರಾಣದ ೬೩ನೆಯ ಸಂಧಿಯೊಳಗಿನ ೧೫–೧೬ ಪದ್ಯಗಳಿಂದ ಇವನು ವಿಜಯನಗರದ ಪ್ರೌಢದೇವರಾಯನ ಸಮಕಾಲೀನನೆಂದು ತಿಳಿದು ಬರುತ್ತದೆ—

ಹರುಷದಿಂದವನೈದಿ **ಪ್ರೌಢದೇವೇಂದ್ರಂಗೆ** |
ವಿರಚಿಸಿದೊಡೆಲ್ಲವಂ ಕೇಳ್ದು ಬೇಗದೊಳವರ |
ಕರೆಸಿ ಭಯಭಕ್ತಿಯಿಂದೆರಗಿ **ಗುರುಬಸವೇಶನರಮನೆ**ಗೆ ಕಳುಹಲಾತ ||
ಪರಮಸಂತೋಷದಿಂ ಲಿಂಗಪೂಜೆಯ ಮಾಡು |
ತಿರೆ ನೋಡುತುಪಕರಣಮಂ ಬಿಸುಟು ದಂಡಿಗೆಯ |
ನಿರದೆ ನೆಲಕಪ್ಪಳಿಸೆ **ಗುರುಬಸವನಾ** ನಾಗಿದೇವರೊಡನಿಂತೆಂಬನು ||

ಏನ ಮಾಡಿತ್ತು ದಂಡಿಗೆ ನಿಮ್ಮನೆನೆ ನಿನ್ನ |
ಜಾನಮೆಲ್ಲಿತ್ತು ಲಿಂಗವಬಿಟ್ಟು ಬಯಲ ಸಂ |
ಧಾನವಲ್ಲದಲರ್ಪಿತಾವಧಾನವನರಿಯೆ ಕೇಳೆನುತ್ತೈಕ್ಯಪದವ ||
ಸ್ವಾನುಭಾವದೊಳರಿಪೆ **ಗುರುಬಸವದೇವರನು** |
ಮಾನವಿಲ್ಲದೆ ನಾಗಿದೇವಂಗೆ ನಮಿಸಿ ಸು |
ಮ್ಮಾನದಿಂದಾ ವಿರಕ್ತರ ಕೂಡಿ ತೋಂಟಕ್ಕೆ ಪೊರಮಡುವರುತ್ಸವದೊಳು ||

—(ಚೆನ್ನಬಸವಪುರಾಣ-ಪು. ೨೫೨-೫೮, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ.)

ಮೇಲೆ ಉದ್ಧರಿಸಿರುವ ಪದ್ಯಗಳ ಆಧಾರದಿಂದ ದಿವಂಗತ ಆರ್. ನರಸಿಂಹಾಚಾರ್ಯರು ಹೇಳುವಂತೆ ಈ ಪ್ರೌಢದೇವರಾಯನು ವಿಜಯನಗರವನ್ನಾಳಿದ ಇಮ್ಮಡಿ ಪ್ರೌಢದೇವರಾಯನೇ (ಕ್ರಿ. ಶ. ೧೪೧೯–೧೪೪೬) ಆಗಿರಬೇಕೆಂತಲೂ, ನಮ್ಮ ಕವಿ ಗುರುಬಸವನು ಸುಮಾರು ಕ್ರಿ. ಶ. ೧೪೩೦ರಲ್ಲಿದ್ದಿರಬೇಕೆಂತಲೂ ಅಭಿಪ್ರಾಯ ಪಡುವುದರಲ್ಲಿ ಯಾವ ಅಭ್ಯಂತರವೂ ಇರಲಾರದು.

ಈತನ ದೇಶವಾವುದೆಂಬುದಾಗಿ ಹೇಳುವುದು ಸ್ವಲ್ಪ ಕಷ್ಟವಾಗಿದೆ. ಆದರೆ ತೆಲುಗು ಸಾಹಿತ್ಯದಲ್ಲಿ ಇಬ್ಬರು ಶೈವಾಚಾರ ಕವಿಗಳು ಗುರುಬಸವನನ್ನು ತಮ್ಮ ಗುರುವಾಗಿ ಸ್ಮರಿಸಿರುವುದು ಕಂಡುಬರುತ್ತದೆ. ವಿಭೂತಿಪುರದ ಗಂಗಾಧರ ಕವಿಯು ತನ್ನ 'ಚೆನ್ನಮಲ್ಲೇಶ' ಶತಕದಲ್ಲಿ ಹೀಗೆ ಹೇಳಿರುತ್ತಾನೆ—

ವಿಖ್ಯಾತಿಕೆಕ್ಕಿನ **ವಿಭೂತಿಪುರಮುಂದು**
ಶ್ರೀಗುರು ಬಸವನ್ನ ಶಿಷ್ಯುಡೈನ
ಕವಿ ವರೇಣ್ಯುಡು **ಘನುಂಡು ಗಂಗಾಧರುಂಡು**
ವೆಲಯನೀ ಪದ್ಯ ಶತಕಂಬು ವಿನುತಿಸೇಯು.......

(ವಿಖ್ಯಾತವಾದ ವಿಭೂತಿಪುರದಲ್ಲಿ ಶ್ರೀ ಗುರುಬಸವನಿದ್ದಾಗ ಆತನ ಶಿಷ್ಯನಾದ ಕವಿವರೇಣ್ಯ ಗಂಗಾಧರನು ಈ ಪದ್ಯಶತಕವನ್ನು ಬರೆದನು.)

ಶತಕ ಕವಿಗಳ ಚರಿತ್ರೆಯನ್ನು ಬರೆದ ವಿದ್ವಾಂಸರು ಗಂಗಾಧರನ ಕಾಲವು ಸುಮಾರು ೧೨೫೦ ಎಂದು ಊಹಿಸಿರುವುದು ತಪ್ಪಾಗಿರಬೇಕು.* ಈ ಚೆನ್ನಮಲ್ಲೇಶ ಶತಕವು ವೀರಶೈವರಲ್ಲಿ ಬಹಳ ಜನಪ್ರಿಯವಾಗಿದ್ದು, ಶ್ರೀಶೈಲಗಿರಿಯನ್ನು ಏರುವ ಸಂದರ್ಭದಲ್ಲಿ ಭಕ್ತರು ಒಂದೊಂದು ಮೆಟ್ಟಲಿಗೆ ಒಂದೊಂದು ಪದ್ಯವನ್ನು ಹೇಳುವರಂತೆ. ಗಂಗಾಧರ ಕವಿಯು ಸ್ತುತಿಸುವ ಗುರುಬಸವನು ನಮ್ಮ ಗ್ರಂಥಕರ್ತನಾದರೆ, ಅವನ ದೇಶ ವಿಭೂತಿಪುರವೆಂದಂತಾಯಿತು. ಹಾಗೆಯೇ ತೆಲುಗಿನಲ್ಲಿ ಜ್ಞಾನಸಿಂಧುವೆಂಬ ಗುರುಶಿಷ್ಯ ಸಂವಾದ ರೂಪದಲ್ಲಿರುವ ವೀರಶೈವತತ್ತ್ವ ಪ್ರತಿಪಾದನಾ ಗ್ರಂಥವನ್ನು ರಚಿಸಿದ ಕರಿಬಸವ ಕವಿಯು ಗುರುಬಸವನನ್ನು ಹೀಗೆ ಸ್ತುತಿಸಿದ್ದಾನೆ—

ಇದಿ ವೀರಭದ್ರೇಶು ಹಿತ ಕೃಪಾಲಬ್ಧ
ಸದಮಲ ಸತ್ಕಾವ್ಯ ಸಂದರ್ಭ ಕುಶಲ
ಸವಿಶೇಷ **ಶಿವಭಕ್ತಜನ ಸಭಾಯುಕ್ತ**
ಶಿವಯೋಗ ಸಾಮ್ರಾಜ್ಯ ಸಿಂಹಾಸನಸ್ಥಂ
ಡರಯಂಗ ಚಿರ ಪುಣ್ಯುಡೈನಟ್ಟಿ **ಕೊಟ್ಟೂರು**
ಗುರುಬಸವಾರ್ಯುನಿ ಕೋಮಲಚರಣ
ಜಲಜಾತಗಂಧ ಪುಷ್ಪಂಧಯುಮಾನ
ಕಲಿತಮಾನಸ ವರಕವಿ **ಕರಿಬಸವ**
ವಿರಚಿತ ಜ್ಞಾನಸಿಂಧುವು ದನಿಯಂದು
ಗುರುಶಿಷ್ಯ ಸಂವಾದ ಗುರಿಯೈನ ಕಥಯು—

†ಮೇಲಿನ ತೆಲುಗು ಪದ್ಯದಲ್ಲಿ ಗುರುಬಸವನ ಊರು ಕೊಟ್ಟೂರು ಎಂದು ಸ್ಪಷ್ಟವಾಗಿ ಹೇಳಿದೆ. ಇಲ್ಲಿ ಗುರುಬಸವನನ್ನು "...........ಶಿವಭಕ್ತ ಜನಸಭಾಯುಕ್ತ ಶಿವಯೋಗ ಸಾಮ್ರಾಜ್ಯ ಸಿಂಹಾಸನಸ್ಥುಡು" ಇತ್ಯಾದಿಯಾಗಿ ಹೊಗಳಿರುವುದನ್ನು ಮತ್ತು ಗುರುಬಸವನ

---

* ಶತಕ ಕವುಲ ಚರಿತ್ರ (ವಂಗೂರಿ ಸುಬ್ಬರಾವ್, III ಭಾಗ) ಪುಟ 298-ಆಂಧ್ರ ಗ್ರಂಥಮಾಲೆ.

† ತೆಲುಗು ಸಾಹಿತ್ಯದೊಳಗಣ ಈ ವಿಚಾರವನ್ನು ನನಗೆ ಸೂಚಿಸಿದ ನನ್ನ ಸಹೋದ್ಯೋಗಿ ಹಾಗೂ ತೆಲುಗು ಶಾಖಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ವೆಂಕಟರಾಯರಿಗೆ ಕೃತಜ್ಞತೆಗಳು.

ಪ್ರಸಿದ್ಧ ಸಪ್ತಕಾವ್ಯಗಳಲ್ಲೊಂದಾದ ಮನೋವಿಜಯ ಕಾವ್ಯದ ಅಂತ್ಯ ಗದ್ಯದಲ್ಲಿ "ಭಕ್ತಜನ ಮನೋಲ್ಲಾಸ.... ಯೋಗಿಜನಸೇವಿತ ಚರಣಾರವಿಂದ.... ವೀರಶೈವಮತ ಸ್ಥಾಪನಾಚಾರ್ಯನಪ್ಪ...." ಎಂಬುದಾಗಿ ಬಂದಿರುವುದನ್ನು ನೋಡಿದರೆ ಇವುಗಳಲ್ಲಿ ಬಿರುದುಗಳ ಸಾಮ್ಯವಿದೆ. ಬಹಳಮಟ್ಟಿಗೆ ಮಾತ್ರವಲ್ಲ, ಇಬ್ಬರೂ ಗುರುಶಿಷ್ಯ ಸಂವಾದ ರೂಪದಲ್ಲಿ ಸಾದೃಶ್ಯವಿರುವ ವಿಷಯ ಪ್ರತಿಪಾದನೆ ಮಾಡುತ್ತಾರೆ. ಆದುದರಿಂದ ಸದ್ಗುರುರಹಸ್ಯಕಾರನ ವರ್ಚಸ್ಸು ಕರಿಬಸವನಮೇಲೆ ಬಿದ್ದಿದೆ ಎಂದು ಹೇಳುವುದು ಸಯುಕ್ತಿಕವಾಗುವುದು. ಹಾಗಿದ್ದರೆ ಗುರುಬಸವನ ದೇಶ ಕೊಟ್ಟೂರು ಎಂದಂತಾಯಿತು. ಈ ಕೊಟ್ಟೂರು ಬಳ್ಳಾರಿ ಜಿಲ್ಲೆಯಲ್ಲಿರುವ ಕೊಟ್ಟೂರೇ ಆಗಿರಬೇಕು. ಆಗ ವೀರಶೈವಮತಾಚಾರ್ಯರಾದ ಗುರುಬಸವರು ಇಬ್ಬರಿದ್ದರೇ (ವಿಭೂತಿಪುರದ ಗುರುಬಸವನೊಬ್ಬ, ಕೊಟ್ಟೂರ ಗುರುಬಸವನೊಬ್ಬ) ಎಂಬ ಸಂದೇಹವು ಬರುವುದು. ಆದರೆ ಕನ್ನಡದಲ್ಲಿ ಗುರುಬಸವನೆಂಬ ಹೆಸರಿನಲ್ಲಿ ಏಕಕರ್ತೃಕವಾದ ಕೃತಿಗಳು ಮಾತ್ರ ದೊರೆಯುವುದರಿಂದ ಒಬ್ಬನೇ ಪ್ರಸಿದ್ಧ ಗುರುಬಸವನಿದ್ದನೆಂದೂ, ಆತನ ಕಾರ್ಯಕ್ಷೇತ್ರ ಕೊಟ್ಟೂರು ಮತ್ತು ವಿಭೂತಿಪುರವಾಗಿದ್ದಿರಬೇಕೆಂದೂ ಪ್ರಕೃತ ನಿರ್ಣಯಿಸುವುದರಲ್ಲಿ ಯಾವ ತಪ್ಪೂ ಇರಲಾರದು.

" ವೀರಶೈವ ಮತಸ್ಥಾಪನಾಚಾರ್ಯ " ಎಂಬ ಕನ್ನಡ ಬಿರುದು ಮತ್ತು "ಶಿವಯೋಗ ಸಾಮ್ರಾಜ್ಯ ಸಿಂಹಾಸನಸ್ಥುಂಡು" ಎಂಬ ತೆಲುಗು ಬಿರುದು– ಇವುಗಳನ್ನು ಗಮನಿಸಿದರೆ, ಗುರುಬಸವನು ಹದಿನೈದನೆಯ ಶತಮಾನದ ಮಧ್ಯಕಾಲದಲ್ಲಿ ಕರ್ಣಾಟಕ–ಆಂಧ್ರರಲ್ಲಿ ಬಹಳ ಪ್ರಸಿದ್ಧನಾಗಿದ್ದಿರಬೇಕೆಂದು ಹೇಳಬಹುದು. ಕನ್ನಡ ಭಾಷೆಯಲ್ಲಿ ಶಿವಯೋಗಾಂಗ ವಿಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ, ಮನೋವಿಜಯಕಾವ್ಯ ಎಂಬ ಕೃತಿಗಳನ್ನು ಬರೆದಿರುವನು. ಇವು ವೀರಶೈವ ತತ್ವ ನೀತಿಗಳನ್ನು ಬಹಳ ಸುಲಭವಾಗಿ ಗುರುಶಿಷ್ಯಸಂವಾದ ರೂಪದಲ್ಲಿ ಪ್ರತಿಪಾದಿಸುವುವು. ಇವು ಸಪ್ತಕಾವ್ಯವೆಂದು ಸುಪ್ರಸಿದ್ಧವಾಗಿವೆ. ತೆಲುಗು ಭಾಷೆಯಲ್ಲಿ ಗ್ರಂಥವನ್ನು ರಚಿಸಿರುವನೊ ಎಂಬುದು ತಿಳಿಯದು. ಈತನ ಶಿಷ್ಯಕೋಟಿಯಲ್ಲಿ ಕೆಲವರು ತೆಲುಗರಾಗಿದ್ದರು. ಅವರಿಗೆ ಚೆನ್ನಾಗಿ ಕನ್ನಡ ಗೊತ್ತಿದ್ದಿತೆಂಬುದು ಸ್ಪಷ್ಟವಾಗಿದೆ.

ಕೃತಿ ಪರಿಚಯ

ಗುರುಬಸವನ ಶೈಲಿ ಬಹಳ ಲಲಿತವಾಗಿದೆ. ಅಂದು ಜನತೆಯಲ್ಲಿ ಪ್ರಿಯವಾಗಿದ್ದ ವಿವಿಧ ಷಟ್ಪದಿಗಳಲ್ಲಿ ತನ್ನ ಸಪ್ತಕಾವ್ಯವನ್ನು ಕಟ್ಟಿದನು. ದಕ್ಷಿಣಾದಿ ಸಂಗೀತಕ್ಕೆ ಹಾಡಲು ಅನುಕೂಲವಾಗುವಂತೆ ಅವುಗಳಿಗೆ ರಾಗ ಹಾಕಿ ಕೊಟ್ಟಿದ್ದಂತೆ ಕಾಣುತ್ತದೆ.* ತತ್ತ್ವ ಬೋಧಕ ಕೃತಿಗಳಾದರೂ ಪಾರಿಭಾಷಿಕ ಶಬ್ದಗಳ ಗಡಣದಿಂದ ಬಿಡುಗಡೆಯಾಗಿ ಸುಲಭವಾದ ನಡುಗನ್ನಡ ಭಾಷೆಯಲ್ಲಿ ರಚಿತವಾಗಿವೆ. ಆತನ ಏಳು ಗ್ರಂಥಗಳ ಸೂಕ್ಷ್ಮ ಪರಿಚಯವನ್ನು ಕೆಳಗೆ ಕೊಟ್ಟಿರುತ್ತದೆ.

---

* ಸದ್ಗುರು ರಹಸ್ಯದಲ್ಲಿ :— ರಾಗ - ಧನ್ಯಾಸಿ, ಶ್ರೀರಾಗ, ಚೌಳಿ, ದೇಶಿ, ಶಂಕರಾಭರಣ, ಮುಖಾರಿ, ಭೈರವಿ, ವಸಂತ ಭೈರವಿ, ಶುದ್ಧ ಭೈರವಿ ಎಂಬೀ ಒಂಬತ್ತು ಬಗೆಯ ರಾಗಗಳಲ್ಲಿ ಒಂಭತ್ತು ಉಪದೇಶಗಳು ಹೇಳಲ್ಪಟ್ಟಿವೆ.

೧. ಶಿವಯೋಗಾಂಗ ವಿಭೂಷಣ

ಇದನ್ನು ಪರಿವರ್ಧಿನೀ ಷಟ್ಪದಿಯಲ್ಲಿ ರಚಿಸಿದ್ದಾನೆ. ಇದರಲ್ಲಿ ಆರು ಸಂಧಿಗಳೂ ಇನ್ನೂರ ಎಪ್ಪತ್ತೆಂಟು ಪದ್ಯಗಳೂ ಇರುತ್ತವೆ. ಈ ಗ್ರಂಥದಲ್ಲಿ ಹೇಳಿರುವ ಅಂಶಗಳು—

ಸತ್ಯವಿರತಿಗತಲಾಲಸ ನಿಶ್ಚಲ
ಯುಕ್ತಿ ಮನೋಮತನಿರಸನವೆಚ್ಚಳಿ
ನಿತ್ಯ ಸ್ವಪ್ರತ್ಯಕ್ಷತೆ ಸಂತೃಪ್ತಿಗಳೆ ಯಮಾದಿಗಳು ||
ಅತ್ಯುತ್ಸಾಹದೊಳಿವನನುದಿನ ನಿಜ
ಭಕ್ತಿಸಹಿತ ಭೂಷಿಸಿ ಶಿವನೊಳು ಸಂ
ವ್ಯಕ್ತದಲೇ ಬೆರಸುವ ಕಾರಣವಿದು ಯೋಗಾಂಗ ವಿಭೂಷಣವು ||

ನಿಜಯೋಗಿಯ ಲಕ್ಷಣವನ್ನು ಎಷ್ಟು ಸುಲಭವಾಗಿ ತಿಳಿಸಿದ್ದಾನೆ—

ಹಸಿಯದೆ ಹುಸಿಯದೆ ಕುಸಿಯದೆ ನೆಸೆಯದೆ
ಹಸಗೆಡದಖಿಳರೊಳಗೆ ಕಾರುಣ್ಯಂ
ಮಸುಳಿಸದುದ್ರೇಕಿಸದೆ ವೃಥಾ ದೈನ್ಯದಿ ವಿಷಯಂಗಳೊಳು ||
ಪಸರಿಸಿ ಹರಿದಾಡದೆ ಲೌಕಿಕರಿಂ
ವಸನಾಗಿರದೆ ಮನಸ್ಸಂಸಾರದ
ಬೆಸುಗೆಯಱದು ಸುಱಯುತ್ತಿಹನಿಳೆಯೊಳಗೆಂದನು ದೇಶಿಕನು ||

ಈ ಕೃತಿಗಳ ಪದ್ಯಗಳೆಲ್ಲಾ ಹೆಚ್ಚಾಗಿ – ಎಂದನು ದೇಶಿಕನು, ಗುರೂತ್ತಮನು, ಒರೆದನು ದೇಶಿಕೋತ್ತಮನು ಎಂಬುದಾಗಿ ಅಂತ್ಯವಾಗುವುವು. ದೇಶಿಕನೆಂದರೆ ಬೋಧಕ, ಉಪದೇಶ ಕೊಡುವವ, ಗುರು ಎಂದರ್ಥ.

೨. ಕಲ್ಯಾಣೇಶ್ವರ

ಇದರಲ್ಲಿ ನಂದಿನಿ ವಿಚಿತ್ರಕನೆಂಬ ಗಣಧರನಿಗೆ ಸಾರಿದ ತತ್ತ್ವಬೋಧೆಯನ್ನು ದೇಶಿಕನು (ಗುರುಬಸವನು) ತನ್ನ ಸಚ್ಛಿಷ್ಯನಿಗೆ ಅರುಹಿದಂತೆ ಹೇಳಲಾಗಿದೆ. ಇದರೊಳಗೆ ೧೦೨ ಪರಿವರ್ಧಿನೀ ಷಟ್ಪದಿ ಪದ್ಯಗಳಿವೆ. ಕಲ್ಯಾಣೇಶ್ವರನೆನಿಸಿದ ಬಸವನ ಭಕ್ತನಾದ ಕವಿಯು ಈ ಕೃತಿಗೆ " ಕಲ್ಯಾಣೇಶ್ವರ " ಎಂಬುದಾಗಿ ನಾಮಕರಣ ಮಾಡಿದಂತೆ ಕಾಣುತ್ತದೆ. ಸಾಮಾನ್ಯಜನರಿಗೂ ಮುಂದಟ್ಟಾಗುವಂತೆ ರಚಿತವಾಗಿದೆ. " ನಿರುಪಮ ಸುಖ " ದಲ್ಲಿರುವ ಪರಿಯೆಂತೆಂಬುದನ್ನು ಎಷ್ಟು ಲಲಿತವಾಗಿ ತಿಳಿಸುತ್ತಾನೆ—

ಆಡುತಲನುಭವದೊಳು ಗುರುವಚನವ
ಪಾಡುತ ಸುಮನೋವೃಷ್ಟಿಯೊಳೊಲವಿಂ
ನೋಡುತ ಲಿಂಗವ ಚಿತ್ತಾಂತರ್ಗತವಹ ಬಹುಬಾಧೆಗಳಂ ||
ಝಾಡಿಸಿ ಸತ್ಯಾನಂದಾಂಬುಧಿ ತುಳು
ಕಾಡುತ ನಿಜವಿಶ್ರಾಂತಿಯೊಳೀ ಪರಿ
ರೂಢಿಯೊಳಗೆ **ನಿರುಪಮಸುಖ**ದಿಂದುಹುದೆಂದನು ದೇಶಿಕನು ||

೩. ಸ್ವರೂಪಾಮೃತ

ಶರೀರ ಆತ್ಮರ ಸ್ವರೂಪವನ್ನು ಜನಸಾಮಾನ್ಯರು ಸುಲಭವಾಗಿ ಗ್ರಹಿಸಿಕೊಳ್ಳುವಂತೆ ೭೭ ಭಾಮಿನಿ ಷಟ್ಪದಿ ಪದ್ಯಗಳನ್ನೊಳಕೊಂಡ ಈ ಪುಟ್ಟ ಗ್ರಂಥದಲ್ಲಿ ಹೇಳಲಾಗಿದೆ. ನಿತ್ಯ ಜೀವನದಿಂದ ಆಯ್ದುಕೊಂಡ ಮನೋಹರವಾದ ರೂಪಕಗಳ ಮೂಲಕ ವಿಷಯ, ಇಂದ್ರಿಯ, ಶರೀರ, ವ್ಯಸನ, ಕರ್ಮ, ಫಲ, ಮನಸ್ಸು ಮೊದಲಾದ ಗಹನ ವಿಚಾರಗಳನ್ನು ಗುರುಬಸವನು ಹೇಳುವ ತೆರನನ್ನು ಪರಿಶೀಲಿಸಿರಿ—

ವಿಷಯ ತಳಿರಿಂ ತಳಿತು ಕೊರ್ವಿದ
ದಶವಿಧೇಂದ್ರಿಯ ಶಾಖೆಗಳನೆ
ಣ್ದೆಸೆಯೊಳಿಟ್ಟುದ್ದಾನಮಾಗಿ ಶರೀರ ಭೂರುಹವು ||
ವ್ಯಸನ ಪುಷ್ಪದಿ ಕರ್ಮಫಲದಿಂ
ದೆಸೆದಿರಲು ತತ್ಫಲವನುಲ್ಲಾ
ಲಸದೆ ಮಾನಸವಕ್ಕಿ ವಿಸಟಂಬರಿದು ತಿನುತಿಹುದು ||

೪ ವೃಷಭಗೀತೆ

ಇದು ವೃಷಭ (ಬಸವ) ಸ್ತುತಿ ಪದ್ಯಗಳಿಂದ ಹಾಗೂ ವೀರಶೈವ ಧರ್ಮಬೋಧಕ ಪದ್ಯಗಳಿಂದ ಕೂಡಿದೆ. ಬಸವಣ್ಣನವರು ಅಂತರಂಗಶುದ್ಧಿ ಬಹಿರಂಗಶುದ್ಧಿಗಳನ್ನು ಹೇಳುವಲ್ಲಿ ಸಾರಿದ "ಇದಿರ ಹಳಿಯಲುಬೇಡ" ಮೊದಲಾದ ಮಹತ್ವದ ಅನುಭವವು ಇಲ್ಲಿ ಸ್ಮರಣೆಗೆ ಬರುವುದು—

ಪಳಿಯದಿಹುದೆ ಧರ್ಮ ತನುವ
ಕೆಳೆಯದಿಹುದೆ ಸಿದ್ಧಿ ಚಿತ್ತ
ವಲುಗದಿಹುದೆ ಮುಕ್ತಿ ಮಱೆದು ನುಡಿದ ವಕ್ಕಣೆ ||
ಹೊಳೆಯದಿಹುದೆ ಸತ್ಯ ರೋಷ
ದಳೆಯದಿಹುದೆ ಶಾಂತಿ ಕಪಟ
ಮೊಳೆಯದಿಹುದೆ **ಸೌಖ್ಯವಿದ**ನು ತಿಳಿಯಲವ ಕೃತಾರ್ಥನು ||

ಶೀಲವನ್ನು ಸಂಪಾದಿಸಿಕೊಳ್ಳಲು, ಆಚರಣೆಯನ್ನು ಸರಿಯಾಗಿಸಲು ಇಂಥ ಸೂಕ್ತಿಗಳು – ಅನುಭವದ ಅಮೃತಬಿಂದುಗಳು – ಎಷ್ಟು ಉಪಯೋಗವಾಗುವುವೆಂಬುದು ವಿಶದವಾಗಿದೆ. ಈ ಗ್ರಂಥದಲ್ಲಿ ೧೦೧ ಭೋಗ ಷಟ್ಪದಿ ಪದ್ಯಗಳಿವೆ.

೫. ಅವಧೂತಗೀತೆಯಲ್ಲಿ ೧೦೧ ಹಾಡುಗಳಿವೆ.

ಇದರಲ್ಲಿ ವೈರಾಗ್ಯ ವಿಚಾರ ಹೇಳಿದೆ. ಸಂಸಾರದ ಗುಟ್ಟನ್ನು ಯುಕ್ತ ಉದಾಹರಣೆಗಳಿಂದ ತಿಳಿಸಲಾಗಿದೆ. ಅವಧೂತ ಲಕ್ಷಣವು ಹೇಳಲ್ಪಟ್ಟಿದೆ.

೬. ಮನೋವಿಜಯ ಕಾವ್ಯ

ಇದರಲ್ಲಿ ೯ ಪ್ರಕರಣಗಳೂ ೩೫೫ ಪದ್ಯಗಳೂ ಇವೆ. ಕುಸುಮ ಷಟ್ಪದಿಯಲ್ಲಿದೆ. ಈ ಕಾವ್ಯದಲ್ಲಿ ಸುವಿವೇಕನೆಂಬ ಜಿಜ್ಞಾಸು ನಿಜಗುರುವಿನ ಸಹಾಯದಿಂದ ನಿಜವನ್ನು

ತಿಳಿದುಕೊಂಡ ವಿಚಾರವನ್ನು ವಿವರವಾಗಿ ಹೇಳಲಾಗಿದೆ. ಈ ಕೃತಿಯು "ಗುರುಕೃಪೆಯ ನಿಜಾನುಭವದ ಆದ್ಯರ ಅನುಮತಕ್ಕೊಳಗಾದ ಮತ್ತು ವೇದಾಗಮ ಉಪನಿಷತ್ತುಗಳಿಗೊಳಗಾದ ಸರ್ವಸಮ್ಮತ ಸಂಗ್ರಹ" ಎಂಬ ಪ್ರಶಸ್ತಿಗೆ ಅರ್ಹವಾಗಿದೆ. ಇದು ನಿಜವನ್ನು ಅರಿತುಕೊಂಡು ಮನಸ್ಸನ್ನು ಹತೋಟಿಯಲ್ಲಿಡಲು ಸಹಾಯವಾಗುವ ಕಾರಣ ಇದಕ್ಕೆ "ಮನೋವಿಜಯ ಕಾವ್ಯ" ಎಂಬ ಹೆಸರು ಉಚಿತವಾಗಿದೆ. ಗ್ರಂಥಾಂತ್ಯದ ಗದ್ಯ ಹೀಗಿದೆ—

"ಶ್ರೀಮತ್ಪರಮಾನಂದ ನಿತ್ಯನಿರ್ಮಲ ನಿರಘ ನಿರ್ಗುಣ ನಿರಾವರಣ ಸಕಲ ಜಗದ್ಭರಿತ ಭಕ್ತಜನ ಮನೋಲ್ಲಾಸ ಶಿವಯೋಗಿಜನಸೇವಿತ ಚರಣಾರವಿಂದ ಷಟ್ಸ್ಥಲ ಜ್ಞಾನಪ್ರಭಾ ಪುಂಜರಂಜಿತಾಂತರಂಗ ವೀರಶೈವಮತ ಸ್ಥಾಪನಾಚರ್ಯನಪ್ಪ ಶ್ರೀಮದ್ಗುರು ಬಸವೇಶ್ವರಂ ಸಕಲಭಕ್ತಜನ ಹಿತಾರ್ಥಮಾಗಿ ಸುಜ್ಞಾನಿಗಳಿಗಾನಂದಮಪ್ಪ.................. ನಿರೂಪಿಸಿದ ಮನೋವಿಜಯವೆಂಬ ಪ್ರಕರಣಂ ಸಮಾಪ್ತಂ."

ಸಪ್ತಕಾವ್ಯಗಳಲ್ಲಿ ಈ ಮನೋವಿಜಯ ಕಾವ್ಯವೇ ಎಲ್ಲ ದೃಷ್ಟಿಯಿಂದಲೂ ಹೆಚ್ಚು ಹಿರಿದಾದುದು.

ಭ್ರಾಂತಿ ಸಂಶಯಗಳಿಗೆ ಗುರುಬಸವನು ಕೊಟ್ಟ ಉದಾಹರಣೆಗಳನ್ನು ಗಮನಿಸಿರಿ—

ಚಿಪ್ಪಿನೊಡಕಂ ಬೆಳ್ಳಿ
ಯಪ್ಪುದೆಂದದ ಪಿಡಿಯ
ಲಪ್ಪುದೇ **ಭ್ರಾಂತಿ**ಯಾ ಪುತ್ತಿನೆಡೆಯೊಳ್ ||
ಇರ್ಪ ಸರವಿಯೆ ಸರ್ಪ
ನಪ್ಪುದೆಂದಂಜಿಯಿಂ
ತಿರ್ಪುದೇ **ಸಂಶಯ**ವಿದೆಂದಱುವುದು ||

ಪರಮಾತ್ಮನಿರವನ್ನು ತಿಳಿಸಿದ ಪರಿಯನ್ನು ನೋಡಿರಿ—

ನಳಿನ ಮಿತ್ರನ ಕಿರಣ
ತಳಿಗೆಯೊಳ್ ಬೆಳಗಲದು
ತೊಳಗದೇ ಶತಗುಣೋತ್ತರಮದಾಗಿ ||
ಪಳಿವುಂಟೆ ರವಿಗೆ ಸಂ
ಚಳ ತಳಿಗೆಯಿಂದೈಸೆ
ತಿಳಿವುದಾ ಪರಿಯ ಪರಮಾತ್ಮನಿರವಂ ||

೮. ಸದ್ಗುರು ರಹಸ್ಯ

ಈಗ ಸಂಪಾದಿಸಲ್ಪಟ್ಟ ಸದ್ಗುರು ರಹಸ್ಯದಲ್ಲಿ ಒಂಬತ್ತು ಉಪದೇಶಗಳೂ ಇನ್ನೂರಮೂವತ್ತೇಳು ಪದ್ಯಗಳೂ ಇವೆ. ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಪ್ರತಿಯೊಂದು

ಉಪದೇಶದ ಮೊದಲಿನಲ್ಲಿ ಆಯಾ ಉಪದೇಶದ ಸೂಚನೆಯನ್ನು ಕೊಟ್ಟಿದೆ. ನಿತ್ಯಾನಿತ್ಯ ವಿಚಾರವೆಂಬ **ಪ್ರಥಮೋಪದೇಶ**ದಲ್ಲಿ "ಪರಿಭವಂಗಳಿಗಂಜಿ ಶರಣುವೊಕ್ಕಂಗೆ ದೇಶಿಕೋತ್ತಮನು ಮುದದಿಂದ ಒರೆದ ನಿಜತತ್ತ್ವಬೋಧೆಯನ್ನು" ಹೇಳಿದೆ. ಮೊದಲಿನ ಐದು ಪದ್ಯಗಳಲ್ಲಿ ಬಸವೇಶ್ವರರ ವಿವಿಧ ಗುಣಾವಳಿಗಳನ್ನು ಸ್ಮರಿಸಿ ಸ್ತುತಿಸಲಾಗಿದೆ. ಮತ್ತೆ "ಅದ್ವಯನಪ್ಪ ಪರಮನ ಮುಚ್ಚಿ ಮುಸುಕಿದ ಮಾಯೆಯನ್ನು ಹೋಗಲಾಡಿಸಿ ನಿಜವಪ್ಪ ಮತವನ್ನು ಸ್ವಚ್ಛವಾಗಿ ಮುಮುಕ್ಷುಜನಗಳಿಗೆ" ಹೇಳುವನು. ಸದ್ಗುರು ರಹಸ್ಯದ ವೈಶಿಷ್ಟ್ಯವು ಇದೆನ್ನುವನು—

ವೇದದಂತುಟಿದಲ್ಲ ಶಾಸ್ತ್ರದ
ಹೋದ ಹೊಲಬಲ್ಲೆಲೆ ಪುರಾಣದ
ಗಾದೆಗಳ ಜಂಜಡದ ಜಾಡ್ಯದ ಜಿನುಗು ತಾನಲ್ಲ ||
ಆದರಿಸಿ ಕೇಳುವಗೆ ಪರಮಪ
ಮಾಧಿ ಶಾಂಭವ ಸತ್ಯ ಸಮ್ಯ
ಗ್ಬೋಧ ಲೀಲಾಲೋಲ ಶೀಲಾನ್ವಯರಹಸ್ಯವಿದು ||

ಗುರುಮತಾರ್ಥವನ್ನು ತಿಳಿದು ಆಚರಿಸುವವನ ಮನಸ್ಸು ಹೇಗೆ ಮಹದೊಳಗೆ ಲಯವಾಗಿ ಆತನು ಮೋಕ್ಷವನ್ನು ಪಡೆಯುವನೆಂಬುದನ್ನು ಹೇಳಿದೆ. ಮಾಯೆ, ತಾಪತ್ರಯಗಳ ವಿಚಾರವಾಗಿ ಶಿಷ್ಯನಿಗುಂಟಾದ ಸಂದೇಹವನ್ನು ಸದ್ಗುರುವು ನಿವಾರಣೆ ಮಾಡುತ್ತಾನೆ. ಹಿತಾಹಿತಗಳ ವಿಚಾರ ಹೀಗೆ ಹೇಳುತ್ತಾನೆ: "ನಿನಗೆ ತೋರುವವೆಲ್ಲವು ಅಹಿತಂ, ನಿನಗೆ ತೋರದ ನೀನೆ ಹಿತವೆಂದು ಅನಿತ ನಿನ್ನಂ ನೀನೆ ತಿಳಿಯಬೇಕೆಲೆ ಮಗನೆ." ಈ ಗುರೂಪದೇಶವನ್ನು ಪಾತ್ರಾಪಾತ್ರವನ್ನರಿತು ಬೋಧಿಸಬೇಕೆಂದು ಹೇಳುವನು. ಪಾತ್ರರಾರು ಅಪಾತ್ರರಾರೆಂಬುದನ್ನು ವಿವರವಾಗಿ ತಿಳಿಸಿರುವನು.

ಎರಡನೆಯ ಉಪದೇಶದಲ್ಲಿ ಯಾವುದು ಹಿತ ಯಾವುದು ಅಹಿತವೆಂಬುದನ್ನು ಸದ್ಗುರುನಾಥನು ಶಿಷ್ಯನಿಗೆ ತಿಳಿಸುವನು. ಹೇಗೆ ಲಕ್ಷ್ಯದಲ್ಲಿ ನೆನಹನ್ನು ವೇದಿಸುತ್ತ ಯಾವಾಗಲೂ ಅನುಭವವನ್ನು ಪಡೆಯುತ್ತಿರಬೇಕೆಂಬುದನ್ನು ವಿಶದಗೊಳಿಸುವನು. ಮಾಯೆ, ಮೋಹ, ಇಂದ್ರಿಯ ಸುಖ, ಕರ್ಮಕಪಟ ಮತ್ತು ತಥ್ಯಗಳ ರೂಪರೇಷೆಗಳನ್ನು ತಿಳಿಸುವನು.

ಕರ್ಮಕಪಟವು ಹೇಗೆ ನರಕಕ್ಕೆಳೆಯುವ ಹಿತಶತ್ರುವೆಂಬುದನ್ನು ಹೀಗೆ ಸಾರುತ್ತಾನೆ-

ಕರ್ಮಕಪಟವ ನೆಮ್ಮಿ ಪರಮನ
ಮರ್ಮವಱಯದೆ ವಾಗ್ವಿಲಾಸದಿ
ಬೊಮ್ಮವಾರ್ತೆಯ ನುಡಿದು ಶಿಶ್ನೋದರ ಪರಾಯಣದ ||
ಧರ್ಮದಲಿ ನೀ ನಡದ ಹಮ್ಮಿನ
ಬಿಮ್ಮು ಮಿಗೆ ತಲೆಗೇಱ ಮಗನೇ
ಘಮ್ಮನಿಳಿಯಲುಬೇಡ ನಿರಯದೊಳೆಂದ ದೇಶಿಕನು ||

ನಿರಸನವೆಂಬ **ತೃತೀಯೋಪದೇಶ**ದಲ್ಲಿ "ದೇಹೇಂದ್ರಿಯಂಗಳ ಮಮತೆಯಂ ಹೋಗಲಾಡಿಸಿ ಜೀವನ ಭೇದವನ್ನು ಶಿಷ್ಯೋತ್ತಮನಿಗೆ ಸೂಚಿಸಿದನು." ಕೆಳಗಿನ ಪದ್ಯವು ಅದನ್ನು ಸ್ಪಷ್ಟಪಡಿಸುವಂತಿದೆ—

"ಪೊರೆದಹಂಕೃತಿಯಿಂದ ಭರದೊಳ್
ತಿರುಗುತಿಹನೇ **ಜೀವ**— ಇದರೊಳ್
ಬೆರಸದಿಹ **ನೀನೇ ಪರಾತ್ಮಕನೆಂದ** ದೇಶಿಕನು"

—(ಪು. 15, ಪ. ೬.)

ಪಂಚಭೂತಗಳಿಂದ ಶರೀರವು ಹೇಗುಂಟಾಯಿತೆಂಬುದು ಬಹಳ ಸುಲಭವಾಗಿ ಹೇಳಲ್ಪಟ್ಟಿದೆ (ಪು. 16–ಪ. ೧೧) : ಮತ್ತೆ ಕರಣಂಗಳು ನಿರಾತ್ಮಕವೆಂಬುದನ್ನು ಸಯುಕ್ತಿಕವಾಗಿ ಪ್ರತಿಪಾದಿಸುವನು. "ಸೋಹಂ" ಎಂಬುದು ಮಾತ್ರ ಸತ್ಯವೆಂಬುದನ್ನು ಸಾಧಿಸುತ್ತಾನೆ.

ಜೀವತ್ರಯಭೇದವೆಂಬ **ನಾಲ್ಕನೆಯ ಉಪದೇಶ**ದಲ್ಲಿ "ನಾಹಂ, ಕೋಹಂ, ಸೋಹಂ" ಎಂಬೀ ಜೀವ ಮೂಱು ಭೇದವನ್ನು ಗುರುಬಸವನು ಶಿಷ್ಯನಿಗೆ ಬೋಧಿಸುವನು. 'ನಾಹಂ' ಎಂಬವನು ಸ್ವಪ್ನಕಲ್ಪಿತನೆಂಬುದನ್ನು ವಿವರಿಸಿದುದು ಬಹಳ ಯುಕ್ತಿಯುಕ್ತವಾಗಿದೆ—

ಮಸಿಯ ಹಿಡಿದವನಂತೆ ಪಾಪಿಯ
ಶಿಶುವನೆತ್ತಿದನಂತೆ ಮೋಹಿಸಿ
ವಿಷಮಯಾನ್ನವನುಂಬನಂತೀ ದೇಹ ತಾನೆಂದು ||
ವಿಷಯದೊಳ್ಕುಕ್ಕುರಿಸಿ ಮುದದಿಂ
ನೆಸೆದು ನಾನಾ ಭವ ಭಯಂಗಳ
ಮುಸುಳಿ ಬರುತಿಪ್ಪವನು ತಾನೇ ಸ್ವಪ್ನಕಲ್ಪಿತನು ||

—(ಪು. 24 ಪ. ೧೦)

ವಾಸನೋದ್ರೇಕ ನಿರಸನಂ ಎಂಬ **ಪಂಚಮೋಪದೇಶ**ದಲ್ಲಿ ವಾಸನೆಯನ್ನು ನಿರ್ವಾಸನೆಯನ್ನಾಗಿಸುವ ವಿಧಾನವನ್ನು ಹೇಳಿದೆ. ಹದನನರಿದು ಅನುಭಾವಿಗಳು ವಾಸನೆಯ ಮೂಲಕ್ಕೆ ಕುಠಾರವಿಟ್ಟು ಜಾಣರೆನಿಸಿಕೊಳ್ಳುವರಂತೆ. ವಾಸನೆಯ ದೆಸೆಯಿಂದ ಸತ್ – ಸತ್ ಮತ್ತು ಅಸತ್ ಆಗುವುದು, ಚಿತ್ – ಚಿತ್ ಮತ್ತು ಅಚಿತ್ ಆಗುವುದು, ನಿತ್ಯಸುಖವು – ಸುಖ ಮತ್ತು ಅಸುಖವಾಗುವುದು. ಯುಕ್ತಿಯಿಂದ ಆ ವಾಸನೆಯನ್ನು ಕಿತ್ತೆತ್ತಿ ಬಿಸುಟರೆ, ಈ ಜಗತ್ತು "ಸತ್–ಚಿತ್–ಆನಂದ" (ಸಚ್ಚಿದಾನಂದ) ರಸವಾಗುವುದೆಂದು ದೇಶಿಕನು ಹೇಳಿದ ರೀತಿ ಮುಂದಟ್ಟಾಗುವಂತಿದೆ.

ಮನೋನಿರೂಪಣವೆಂಬ **ಆರನೆಯ** ಉಪದೇಶದಲ್ಲಿ ಭವಪಾಶವನ್ನು ಬಗೆಹರಿಸಿ ಮನಸ್ಸನ್ನು ನಿಶ್ಚಲವಾದ ನೆಲೆಯಲ್ಲಿರಿಸಿದುದನ್ನು ಹೇಳಿದೆ. ಮನದ ಸಂಚಲದಿಂದ ಸಂಸೃತಿಯುಂಟಾಗುವುದೆಂದೂ ಆ ಮನದ ಸಂಚಲವಳಿಯಲು ಸಂಸೃತಿಯ ಸಡಗರವು

ಎಳ್ಳಷ್ಟೂ ತೋರದೆಂದೂ ಹೇಳುವನು. (ಪು. 32-ಪ. ೩.) ಮುಂದಿನ ಳನೆಯ ಪದ್ಯದಲ್ಲಿ ಮುಮುಕ್ಷು ಲಕ್ಷಣವು ಹೇಳಲ್ಪಟ್ಟಿದೆ. ತಿಳಿವಿನಿಂದಲೇ ಮೂಢ ಮನಸ್ಸನ್ನು ಸರಿಪಡಿಸಿ ನೆಲೆಗೊಳಿಸಬೇಕೇ ವಿನಾ ಯೋಗಾಂಗ ವಿಧಿಯಿಂದ ತಲೆಯನ್ನು ತಾಟಿಸಿಕೊಂಡರೆ ಫಲವಿಲ್ಲ. ಹಾಗೆ ಮಾಡಿದರೆ ಅದು ಕೃತ್ರಿಮದ ಸರ್ಪವನ್ನು ತೊಲಗಿಸಲು ದುಂದುಭಿಯನ್ನು ಹೊಡೆದಂತೆ ಎಂದು ಬಹಳ ಮನೋಜ್ಞವಾಗಿ ಹೇಳಿದ್ದಾನೆ. (ಪು. 34 ಪ. ೧೨.) ಮುಂದೆ ೨೮ನೆಯ ಪದ್ಯದಲ್ಲಿ " ಉಳುಮೆ, ತೋಱಿಕೆ, ಸತ್, ಪ್ರಿಯ–ಇವುಗಳನ್ನು ಬಳಸಿಕೊಂಡಿರುವ ನಾಮರೂಪವನ್ನು ತಿಳಿದು, ಮಾಯಾಂಶಗಳನ್ನುಳಿದು ಗುರುಮತದಿಂದ ಒಳಗೆ ಸಚ್ಚಿದಾನಂದವನ್ನು ಅಳವಡಿಸಿಕೊಂಡು ಮನಸನ್ನು ಸಂಚಲಿಸದಂತೆ ಮಾಡುವುದು" ಎಂಬ ಉತ್ತಮ ಉಪದೇಶವಿದೆ.

ವಸ್ತುನಿರ್ದೇಶವೆಂಬ **ಏಳನೆಯ** ಉಪದೇಶದಲ್ಲಿ ಚಿತ್ತಿನಲ್ಲಿ ಪ್ರತಿಬಿಂಬಿಸಿರುವ ವೃತ್ತಿಯ ಪ್ರಕಾರವನ್ನು ಹೇಳಿ, ವಸ್ತುನಿರ್ದೇಶವನ್ನು ಶಿಷ್ಯನಿಗೆ ತಿಳಿಸಿದ್ದಾನೆ. ವೃತ್ತಿ ಚಿತ್ತುಗಳೆಂದು ತಮ್ಮೊಳಗೆ ಎರಡು ತೆರನಂತೆ. ವೃತ್ತಿ ಎಂದರೆ ಉಪಾಧಿ; ಚಿತ್ತುವೆಂದರೆ ಪರಬ್ರಹ್ಮ. ವೃತ್ತಿ ನಿಮಿಷದಲ್ಲಿ ಜನಿಸಬಹುದು, ಅಳಿಯಬಹುದು. ಆದರೆ ವೃತ್ತಿಯಲ್ಲಿ ಪ್ರತಿಬಿಂಬಿಸಿರುವ ಚಿತ್ತು ಮಾತ್ರ ನಿಶ್ಚಲ. ಮುಂದೆ ವಸ್ತುನಿರ್ದೇಶವನ್ನು ಹೇಳುವಲ್ಲಿ ತನುಗಳ ದೆಸೆಯಿಂದ ವಿಶ್ವದಲ್ಲಿ ಉಚ್ಚನೀಚಗಳಾದುವೆಂತಲೂ ತುಚ್ಛವಾಗಿರುವ ಆ ತನುವಳಿಯಲು ಪರವಸ್ತುವಾದ ಬ್ರಹ್ಮವು ಅಖಂಡವಾಗಿರುವುದೆನ್ನುವನು. ಬೊಮ್ಮವು ಎಂದಿನ ಪರಿಯಲ್ಲೇ ಇರುವುದು. ಇದರ ಮರ್ಮವನ್ನರಿಯದ ಮೂಢರು ಮಾತ್ರ " ಬ್ರಹ್ಮಹುಟ್ಟಿತು ಬ್ರಹ್ಮಹೊಂದಿತು " ಎಂಬರೆಂದು ಗುರುಬಸವನ ಅಭಿಪ್ರಾಯ.

ಸ್ವಾತ್ಮನಿರೂಪಣವೆಂಬ **ಎಂಟನೆಯ** ಉಪದೇಶದಲ್ಲಿ ದುಷ್ಟಸ್ವಭಾವವನ್ನು ಹೋಗಲಾಡಿಸಿ, ತನ್ನ ನಿಜಸ್ವರೂಪವನ್ನು ಹೇಳಿ, ಶಿಷ್ಯನನ್ನು ಪರಮಸುಖಸ್ವರೂಪನನ್ನಾಗಿ ಮಾಡಿದಂತೆ ತಿಳಿಸಿರುತ್ತದೆ.

ಕೊನೆಯದಾದ **ಒಂಭತ್ತನೆಯ** ಉಪದೇಶದಲ್ಲಿ ಶಿಷ್ಯನಿಗೆ ವಿಸ್ಮೃತಿಯಿಂದ ತಾನು ತನ್ನಿಂದ ಅನ್ಯನೆಂಬ ಭಾವನೆಯುಂಟಾಗಲು, ದೇಶಿಕನು ಅವನಿಗೆ " ಅನನ್ಯಬೋಧೆ" ಯಿಂದ ಎಲ್ಲವನ್ನೂ ತಿಳಿಸಿದನು. ಹುಸಿ, ಮದ, ಆಸೆ, ಜಡ, ತಾಮಸ, ವಿಷಯ ಮುಂತಾದವುಗಳಿಂದ ತೀವಿರುವ ಜಗವು ಬ್ರಹ್ಮಾಕಾರವೆಂದು ಭಾವಿಸುವುದು ಮಸಿಯ ಕಾವಲಿಯನ್ನು ವೃಥಾ ಶಶಿಯೆಂದಂತಲ್ಲವೇ ಎಂಬುದಾಗಿ ಶಿಷ್ಯನು ಪ್ರಶ್ನಿಸುವನು. ಅದಕ್ಕೆ ಗುರುವು ಪಿತ್ತಬಾಧೆಯಿರುವವನು ಎತ್ತೆತ್ತ ನೋಡಿದರೂ ಅತ್ತತ್ತ ಪಿತ್ತಚ್ಛಾಯೆಯೇ ಅವನ ಕಣ್ಣಿಗೆ ಗೋಚರಿಸುವಂತೆ ನಿನ್ನ ಹೇಳಿಕೆ ಎಂದುದು ಬಹಳ ಸಯುಕ್ತಿಕವಾಗಿದೆ. ಪುಟ 53. ಪದ್ಯ ೧೦ರಲ್ಲಿ ಪರವಸ್ತು ವಿಶ್ವವನ್ನು ಬಿಟ್ಟಿಲ್ಲ ಎಂಬುದಾಗಿ ಹೇಳಿದಲ್ಲಿ ಪ್ರಸಿದ್ಧ ಉದಾಹರಣೆಗಳನ್ನು ಕೊಡುತ್ತಾನೆ—

ಅನಲಕಾಷ್ಠವನನಿಲ ಶುಷಿರವ
ನಿನನಹವ ವನಕಣವ ಜೀವಂ
ತನುವನುರು ದೀಪತ್ರವರ್ತಿಯನರ್ಥವಕ್ಷರವ ||

ಇನಿತನಗಲಿರವಂತುಟಾ ಪರಿ
ತನಯ ಕೇಳ್ಪರವಸ್ತು ವಿಶ್ವವ
ನನುವಿಡಿದು ಕುಳಕದೊಳು ನಟಿಸಿಹುದೆಂದ ದೇಶಿಕನು ||

ಮಾತ್ರವಲ್ಲ, ಬಹಳ ದುಷ್ಕರವಾದ ಕರ್ಮೇಂದ್ರಿಯಗಳೂ ಶಿಷ್ಟವಾದ ಬುದ್ಧೀಂದ್ರಿಯಗಳೂ ಹದವಾಗಿ ಬೆರಸಿ, " ಪರವಸ್ತು " ಜಗದಲ್ಲಿ " ಅಖಂಡೈಕರಸದಿಂದ" ನಿಂದಿರುವುದು ನಿಜವೆಂದು ಬೋಧಿಸುತ್ತಾ ಶಿಷ್ಯನ ಸಂದೇಹಗಳನ್ನು ಪರಿಹಾರಮಾಡುವನು.

ಭಾಷೆ, ಶೈಲಿಗಳ ವಿಚಾರ

ಹದಿನೈದನೆಯ ಶತಮಾನದಲ್ಲಿ ರೂಢಿಯಲ್ಲಿದ್ದ ನಡುಗನ್ನಡ ಭಾಷೆಯು ಈ ಕೃತಿಯಲ್ಲಿ ಉಪಯೋಗವಾಗಿರುವುದು ಸ್ವಾಭಾವಿಕ. 'ಱ' ಕಾರವು ಬಳಸಲ್ಪಟ್ಟಿದೆ. 'ೞ' ಕಾರವು ಇರುವುದಿಲ್ಲ. ದೇಶ್ಯಶಬ್ದಗಳ 'ಪ' ಕಾರವೆಲ್ಲ ಪ್ರಾಯಿಕವಾಗಿ 'ಹ' ಕಾರವಾದುದರಲ್ಲಿ ಆಶ್ಚರ್ಯವಿಲ್ಲ. ಅಹಗೆ, ಇಹಿಗೆ, ಎಹಗೆ, ಎನಿಸುತಿಹ, ಅಹ, ಆಹುದು – ಎಂಬೀ ಶಬ್ದರೂಪಗಳನ್ನು ಕಾಣಬಹುದು. ತತ್ತ್ವಬೋಧಕ ಗ್ರಂಥವಾದರೂ ಪಾರಿಭಾಷಿಕ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸದೆ, ಜನಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆ ತರ್ಕ ಶುದ್ಧವಾಗಿ ಬರೆಯಲ್ಪಟ್ಟಿದೆ. ಶೈಲಿಯು ಸತ್ವಯುತವಾಗಿದೆ. ಕಾವ್ಯವು ನಿರರ್ಗಳವಾಗಿ ಸಾಗುತ್ತದೆ.

ಈ ಕೃತಿಯಲ್ಲಿರುವ ಇನ್ನೊಂದು ಮುಖ್ಯಗುಣವೆಂದರೆ ಉಚಿತವಾದ ನಾಣ್ಣುಡಿಗಳನ್ನು ಪಯೋಗಿಸಿದುದು. ಕೆಲವನ್ನು ಕೆಳಗೆ ಕೊಟ್ಟಿದೆ—

ಬಸುಱ ಕಿಚ್ಚಿಗೆ ತುಷವ ಮೆಲಿದಂತೆ (4–೧೬); ಹಂದೆಯಂ ಹಾವಡರಿದಂತೆ (10-೧೪); ಕಯ್ಯಲಿಹ ಪಿಂಡವನು ಬಿಟ್ಟೊಣಕಯ್ಯ ನಕ್ಕುವಂತೆ (1–೧೯); ಮರ್ಕಟ ಕೀಲ ಕಿತ್ತಂತೆ (20–೩೦); ಸಾವಕುದುರೆಗೆ ಹುಲ್ಲನಡುಕಿದಂತೆ (20–೩); ಮಳಲೊಳೆಣ್ಣೆಯ ಪಡೆವೆನೆಂಬವ (20–೩೨); ಪಾಪಿಯ ಶಿಶುವನೆತ್ತಿದನಂತೆ (24–೧೦); ಕರ ಕಂಕಣಕೆ ಕನ್ನಡಿ ಏತಕ್ಕೆ (30–೧೩); ರಜಕೀ ಶೋಕದೊಲು (36–೨೧); ಬಡವನ ಮಗಳನು ಪೃಥ್ವೀಶ್ವರನು ತಂದಂತೆ (36–೨೪); ಗೋಸ್ತಂಭದೊಳು ಸಿಕ್ಕಿದ ಕಾಕನಂತುಟು (37–೨೯) – ಹಾಗೆಯೇ ಕೆಲವು ನೀತಿಯ ಮಾತುಗಳು ಮತ್ತು ಸಿದ್ಧಾಂತಗಳು ಸಂದರ್ಭೋಚಿತವಾಗಿ ಬಂದಿವೆ— ಕರ್ಪುರದ ಹೆಣ್ಣಾಗ್ನಿ ಪುರುಷನನಪ್ಪಿದಾಕ್ಷಣ ನೋಡಲೊಡಲುಂ ಸೊಪ್ಪಡಗಿ ಸಂದಳಿದು ನಿರ್ವಯಲಪ್ಪ ತೆಱನಂತೆ (೨–೯); ಹುಲ್ಲಂ ಹಿಡಿದು ಸಾರಿದೆ ತನುವಿದಂ ಕೈವಿಡಿಯದಿರು (೧–೬); ಎಲೆ ಮರುಳೆ ಕೃತ್ರಿಮದ ಸರ್ಪನ ತೊಲಗಿಸಲು ದುಂದುಭಿಯ ಹೊಯ್ದರೆ ಹೊಳಕಲಹುದೇ ? (34–೧೨); ಗುಮ್ಮನೆಂದರೆ ಬಾಲಕನು ತಾ ಹಮ್ಮಯಿಸಿ ಕೆಡುವಂತೆ (34–೧೪); ಚೋರ ಮುನ್ನುಂಟಾಗಿ ಕೊರಡಂ ಚೋರನೆಂಬರು (35–೧೬); ಅರಸು ಮುನಿದಾಳಿಂಗೆ, ನಾಡೆಲ್ಲರು ಮುನಿದ ಬಡವೊಕ್ಕಲಿಂಗೆ, ಪುರುಷ ಮುನಿದ ಕಳತ್ರಕೆ ಅಕ್ಕಟ ಬೇಱೆ ಗತಿಯುಂಟೆ (37–೨೫); ಮಸಿಯ ಕಾವ

ಲೆಯಂ ವೃಥಾ ಶಶಿಯೆನಲು ಶಶಿಯಹುದೆ (5।–೩೧); ಎಲ್ಲಿ ತೆರೆಯಿಹುದಲ್ಲಿ ಜಲಮಯ, ಎಲ್ಲಿ ಘಟವಿಹುದಲ್ಲಿ ಮೃಣ್ಮಯ, ಎಲ್ಲಿ ಕಟಕವದಲ್ಲಿ ಕಾಂಚನ (5ʾ–೯).

ಇಂಥ ಸೂಕ್ತಿಗಳು ಕಾವ್ಯದುದ್ದಕ್ಕೂ ಇವೆ.

ಲೌಕಿಕದ ಮಧ್ಯದಲ್ಲಿ ಪಾರಲೌಕಿಕವನ್ನು ಸುಲಭವಾಗಿ ಒಂದಿಷ್ಟಾದರೂ ಅರಿದುಕೊಳ್ಳಲು ಸದ್ಗುರು ರಹಸ್ಯವು ಸಹಾಯಕವಾಗುವುದೆಂದು ನಂಬಲಾಗಿದೆ. ಹೀಗೆಯೇ ಗುರುಬಸವನ ಉಳಿದ ಆರು ಕೃತಿಗಳನ್ನು ಪ್ರಕಾಶಪಡಿಸಲು ಅಧಿಕಾರಿಗಳು ಸಹಕಾರಿಗಳಾಗುವರೆಂದು ನಿರೀಕ್ಷೆಯಿದೆ. ಇದನ್ನು ಸಂಪಾದಿಸಲು ನನಗೆ ಅವಕಾಶವನ್ನಿತ್ತುದಕ್ಕೆ ಮದ್ರಾಸು ಸರಕಾರದ ಹಸ್ತಲಿಖಿತ ಪುಸ್ತಕ ಭಂಡಾರದ ಕ್ಯೂರೇಟರಿಗೂ ಮದ್ರಾಸು ಸರಕಾರಕ್ಕೂ ನನ್ನ ಕೃತಜ್ಞತೆಗಳು. ಈ ಸಂಪಾದನಾ ಕಾರ್ಯದಲ್ಲಿ ನೆರವಾದ ಪುಸ್ತಕ ಭಂಡಾರದ ಪಂಡಿತರಾದ ಮಿತ್ರ ಶ್ರೀ ಪಿ. ಸುಬ್ರಾಯ ಭಟ್ಟ, ವಿದ್ವಾನ್ ಅವರಿಗೂ ವಂದನೆಗಳು. ಅಚ್ಚಿನ ಕೆಲಸವನ್ನು ದಕ್ಷತೆಯಿಂದ ನೆರವೇರಿಸಿದ ಶ್ರೀವತ್ಸ ಮುದ್ರಣಾಲಯದವರ ಕಾರ್ಯವು ಸ್ತುತ್ಯ.

ಮದ್ರಾಸು
31–8–1951

ಎಂ. ಮರಿಯಪ್ಪ ಭಟ್ಟ,
ಸಂಪಾದಕ.

ತಿದ್ದುಪಡಿ

ಪುಟ	ಪದ್ಯ	ಅಶುದ್ಧ	ಶುದ್ಧ
1	೨	ಸತ್ಯದಂತುಟು ವಾದಿಯು	ಸತ್ಯದಂತುಟುಪಾಧಿಯಂ

ಸದ್ಗುರುರಹಸ್ಯಂ

ಪ್ರಥಮೋಪದೇಶಂ

[ರಾಗ–ಧನ್ಯಾಸಿ–ಪಲ್ಲವಿ]

ಭಾ॥ ಷ॥ ಪರಿಭವಂಗಳಿಗಂಜಿ ಭರದಿಂ ।
ಶರಣುವೊಕ್ಕಂಗೊಲಿದು ಮುದದಿಂ ।
ದೊರೆದನಾ ನಿಜತತ್ವಬೋಧೆಯ ದೇಶಿಕೋತ್ತಮನು ॥ ಪದ ॥

ಶ್ರೀ ಪರಮಪಾವನ ಕಳಾಚಿ ।
ದ್ರೂಪ ಚಿತ್ಪರಿಪೂರ್ಣ ಮಹಿಮಾ ।
ಳಾಪನಮಳಾನಂದ ವೃಂದೋಲ್ಲಾಸ ನಿಜತತ್ವ– ॥
ದೀಪ ಮಾಯಾಲೋಪನಖಿಲ ।
ವ್ಯಾಪಕಾಂಗ ವಿಶಿಷ್ಟ ಪರಮ ಪ ।
ರಾಪರಾನ್ವಯ ಸಾಕ್ಷಿ ಗುರುಬಸವಂಗೆ ಶರಣೆಂಬೆ ॥ ೧ ॥

ಘಟವನಳಿದಾಕಾಶದಂತುಟು ।
ಪಟವನಳಿದಿಹ ಚಿತ್ರದಂತುಟು ।
ಸಟೆಯನಳಿದುರುಸತ್ಯದಂಟು ವಾದಿಯಂ ಪಱಿದು ॥
ನಟಿಸಿ ತೋಱುವ ದೀಪದಂತುಟು ।
ಕುಟಿಲ ಮಾಯೆಯಿನಳಿದು ನಿಜದೊಳ್ ।
ಸ್ಫುಟಿಸಿದಮಲಬ್ರಹ್ಮ ಗುರು ಬಸವಂಗೆ ಶರಣೆಂಬೆ ॥ ೨ ॥

ನೋಡಬಾರದ ಮುಕುರ ಮೋಹಿಸಿ ।
ಸೂಡಬಾರದ ಪುಷ್ಪ ಮನಮಾ ।
ತಾಡಬಾರದ ಮಂತ್ರ ಮಱಿದಱದಾದಡೇನೊಂದಾ ॥
ಬೇಡಬಾರದ ದಾನಿ ಸಲೆ ಕೊಂ ।
ಡಾಡಬಾರದ ಕೀರ್ತಿ ರತಿಯಿಂ ।
ಕೂಡಬಾರದ ಸುಲಭ ಗುರು ಬಸವಂಗೆ ಶರಣೆಂಬೆ ॥ ೩ ॥

ಪರಮಪದ ಪರತತ್ವ ಪರಶಿವ ।
ಪರಮ ಸುಖ ಪರಬೊಮ್ಮ ಪರಮೇ ।
ಶ್ವರ ಪರಾಂತ ಪರಾಪರಾನ್ವಯಪಾರ ಪರಮಾರ್ಥಾ ॥
ಪರಮಚರಿತ ಪರೇಶ ಪಾರಗ ।
ಪರಮಪಾವನ ಪರಮಕಾರಣ ।
ಪರಮಸಂವಿತ್ಪರಮ ಗುರು ಬಸವಂಗೆ ಶರಣೆಂಬೆ ॥ ೪ ॥

ತಾನೆ ಪುರುಷಂ ಪ್ರಕೃತಿರೂಪಂ |
ತಾನೆ ಶಿಷ್ಯಾಚಾರ್ಯರೂಪಂ |
ತಾನೆ ಪಿತೃ ಪುತ್ರಸ್ವರೂಪಂ ತಾನೆ ದಿಕ್ ದೃಶ್ಯಂ ||
ತಾನೆ ಜಾಗ್ರಸುಷುಪ್ತಿ ರೂಪಂ |
ತಾನೆ ಮಾಯಾ ಮಾಯ ರೂಪಂ |
ತಾನೆಯಾಗಿಹ ಪೂರ್ಣಗುರ ಬಸವಂಗೆ ಶರಣೆಂಬೆ || ೫ ||

ಸಚ್ಚಿದನ್ವಯನಪ್ಪ ಪರಮನ |
ಮುಚ್ಚಿ ಮುಸುಕಿದ ಮಾಯೆಯಂ ನೆರೆ |
ಬಿಚ್ಚಿ ಬಿಸುಟೊದವಿರ್ದ ಸರ್ವಭ್ರಮೆಯ ಬಱಿಕೆಯ್ದು ||
ಚಿಚ್ಚಮತ್ಕಾರದೊಳು ನಿಜದೊ |
ಳ್ಪೆಚ್ಚುತಾ ನಿಜವಪ್ಪ ಘುತಮಂ |
ಸ್ವಚ್ಛವಾಗಿಯೆ ಪೇಳ್ವೆನಮಲಮುಕ್ಷುಜನಗಳಿಗೆ || ೬ ||

ವೇದದಂತುಟದಲ್ಲ ಶಾಸ್ತ್ರದ |
ಹೋದ ಹೊಲಬಲ್ಲೆಲೆ ಪುರಾಣದ |
ಗಾದೆಗಳ ಜಂಜಡದ ಜಾಡ್ಯದ ಜಿನುಗು ತಾನಲ್ಲ ||
ಆದರಸಿ ಕೇಳುವಗೆ ಪರಮ ಸ |
ಮಾಧಿ ಶಾಂಬವ ಸತ್ಯ ಸಮು |
ಗ್ಬೋಧ ಲೀಲಾಲೋಲ ಶೀಲಾನ್ವಯ ರಹಸ್ಯವಿದು || ೭ ||

ಹುಟ್ಟಿದರೆ ಸಾವಳಿದು ಸತ್ತೊಡೆ |
ಹುಟ್ಟಳಿದು ಹೊಱಗಾಗಿ ಭವವಂ |
ಪಟ್ಟಪಱಿಯನು ಮಾಡುತಿಹ ಬೋಧೆಯನು ಬೋಧಿಸದೆ ||
ಹುಟ್ಟಿದರೆ ಸಾವುತ್ತ ಸತ್ತರೆ |
ಹುಟ್ಟುತಿಹ ದುರ್ಮತವನುಸುರ್ವೀ |
ಕಷ್ಟವೃತ್ತಿಯ ಪೇಳದೇ ಸದ್ಗುರು ರಹಸ್ಯದೊಳು || ೮ ||

ಕರ್ಪುರದ ಹೆಣ್ಣಗ್ನಿಪುರುಷನ |
ನಪ್ಪಿದಾಕ್ಷಣ ನೋಡಲೊಡಲುಂ |
ಸೊಪ್ಪಡಗಿ ಸಂದಳಿದು ನಿರ್ವಯಲಪ್ಪ ತೆಱನಂತೆ ||
ತಪ್ಪದೀ ಸದ್ಗುರು ರಹಸ್ಯದೊ |
ಳಿಪ್ಪ ಸುಕೃತಾರ್ಥವನು ವೇದಿಸು |
ತಿಪ್ಪವರ ತನುವಳಿದು ಮನ ಮಹದೊಳಗೆ ಲಯವಹುದು || ೯ ||

ಎನಿತು ತೋಱುವ ತೋಱಿಕೆಯ ತ |
ನ್ನನುಭವದಿ ಹುಸಿಯೆನುತ ಮನದಿಂ |
ಮನನದಿಂ ಮನನೀಯದಿಂದೀ ಗುರುಮತಾರ್ಥವನು ||
ಅನುಗೊಳಿಸಿ ಕಲಿತವನು ಮೋಕ್ಷಾಂ |
ಗನೆಯ ಪಾಣಿಗ್ರಹಣಕನುವಾ |
ದನು ಕಣಾ ದಿಟನಂಬು ನೀಡಿದೆ ಕೈಯ್ಯ ಜಗವಱಿಯೆ || ೧೦ ||

ಆವನಾನೊರ್ವನು ಭವಂಗಳ |
ಬೇವಸಕ್ಕೊಳಗಾಗಿ ಜನ್ಮಕೆ |
ಹೇವರಿಸುತೀ ಕರ್ಮಬಂಧವನಾರ ಮುಖದಿಂದ ||
ಆವದಿನದೊಳ್ಬಿಟ್ಟು ಸುಖದೊ |
ಳ್ತೀವಿ ಕೊಂಡೆಂದಿಹೆನೊ ಶಿವೆ ಯೆಂ |
ದೀ ವಿಚಾರವ ತಾಳ್ದು ತನ್ನೊಳ್ತಾನೆ ಚಿಂತಿಸಿದ || ೧೧ ||

ಅಮಿತದೇಹೋತ್ಪಾದಿ ಕರಣ |
ಭ್ರಮಣ ತಪತ್ರಯಗಳಿಂ ವಿ |
ಶ್ರಮಿಸೆ ತೆಱಹಂ ಕಾಣದಳಲುತ ಬಳಲುತ್ತೈತಂದು ||
ಶಮದಮಾದಿ ಗುಣಂಗಳಂ ಮಿಗೆ |
ಮಮಕರಿಸಿ ಕೊಂಡೈದೆ ಮೋಕ್ಷ |
ಕ್ರಮವ ಬೆಸುಗೊಳುತಿರ್ದನೊರ್ವಂ ದೇಶಿಕೋತ್ತಮನು || ೧೨ ||

ಚಿಕ್ಕಿತಹ ಮಾರ್ಗದೊಳು ಬಹು ಜ |
ನ್ಮಕ್ಕೆ ಸಾಧನವಹ ಭವಂಗಳ |
ನೊಕ್ಕಲಿಕ್ಕುವ ಭೇದವನು ಕೃಪೆಯಿಂದಲೆನ್ನೊಳಗೆ ||
ಮಿಕ್ಕು ಬೆರಸಲ್ಬೇಕೆನುತ ಮೈ |
ಯಿಕ್ಕಿ ಬಿನ್ನೈಸಿದರೆ ಶಿಷ್ಯಂ |
ಗಕ್ಕಱಿಂ ಬೆಸಸಿದನು ಸದ್ಗುರುನಾಥನುಚಿತದಲಿ || ೧೩ ||

ಮಿಸುಕಲೀಯದೆ ಮನವ ಬಿಂದುವ |
ನೊಸರಲೀಯದೆ ನಾಸಿಕಾಸ್ಯದಿ |
ನುಸುಳಲೀಯದೆ ವಾಯುವಂ ಸಂಯೋಗಮಂ ಮಾಡಿ ||
ಕುಸುಮ ಗಂಧ ಸುನಾಳಮಂ ಭೇ |
ದಿಸೆಯೆ ವೇದಾಚಕ್ರಮಂ ಲಂ |
ಘಿಸೆಯೆ ನೀ ಸುಖಿಯಪ್ಪುನೆನುತಿಂತೆಂದ ದೇಶಿಕನು || ೧೪ ||

ಬಿಡದೆ ಶುದ್ಧಸ್ಫಟಿಕದಂಡವ |
ನಡರಿ ಪರ್ವಿದ ಪವಳಲತೆಯಂ |
ತಿಡಿದ ನಾಡೀವೃಂದದೊಳಗಣ ಬಿಂದುದಂಡವನು ||
ಜಡಿದು ಪವನನ ಕುಂಡಲಾಗ್ನಿಯ |
ತೊಡರಿ ನಡದುಗ್ಗಡಿಸುತಲಿಂ |
ಬಿಡದೆ ಚಿದ್ಗಗನಾಂತಗತವಹುದೆಂದ ದೇಶಿಕನು || ೧೫ ||

ಹುಸಿದಿಟದ ಮಧ್ಯದೊಳು ಹುಟ್ಟಿದ |
ವಿಷಮವಹ ಮಾಯೆಯನು ಗೆಲುವಡೆ |
ಬಸುಱ ಕಿಚ್ಚಿಗೆ ತುಷವ ಮೆಲಿದಂತೆಲೆಲೆ ಸದ್ಗುರುವೆ ||
ಉಸುರ ಹಿಡಿದುಬ್ಬರಿಸುತುಬ್ಬಿಸಿ |
ಕುಸಿದು ನೆಸೆಯಲ್ಕದಱ ದೆಸೆಯಿಂ |
ಮಸುಳಿಸುವುದೇಮಾಯೆ ಪೇಳೆಂದನು ಗುರೂತ್ತಮನು || ೧೬ ||

ಎಂದಮಾತನು ಕೇಳಿ ನಸುನಗು |
ತಂದು ಬಳಿಕಾ ದೇಶಿಕೇಂದ್ರನು |
ಕಂದನಂ ಬೋಳೈಸಿ ತಲೆದಡವುತ್ತಲೆಲೆ ಮಗನೆ ||
ಕಂದದಿರು ಕುಂದದಿರು ನಿನಗಿ |
ನ್ನೊಂದು ಭೇದವ ಪೇಳಿ ಸುಖದೊಳ |
ಗೊಂದಿಸುವೆನೆಂದೆನುತಲಿಂತೆಂದನು ಕುಮಾರಂಗೆ || ೧೭ ||

ಮಕರಿಸದೆ ಮಾಯಾಪ್ರಪಂಚದೊ |
ಳಖಿಳನಿಷ್ಕಾಚಾರಶೀಲ |
ಪ್ರಕಟಿತರ್ಗತಿಹಿತವನೀವೆನೆನುತ್ತ ಪೂರ್ವದೊಳು ||
ಅಕುಟಿಲಾದ್ವಯನನಘನೆನಿಸುವ |
ಸುಕರವಹ ಪರಶಿವನು ತಾನೇ |
ಸಕಳ ನಿಃಕಳವಾದನೀ ಪರಿ ತನ್ನ ಲೀಲೆಯಲಿ || ೧೮ ||

ಆ ಸದಾಶಿವವಿಗ್ರಹವ ನೀ |
ಲೇಸೆನಿಪ ನಾನಾವಿಧಾನವಿ |
ಶೇಷದಿಂದಲುಪಾಸ್ತಿಯಂ ಮಾಡುತ್ತ ತದ್ಧ್ಯಾನ ||
ಸೂಸದಂತಿರೆ ನಿಂದು ಸಗುಣ ನಿ |
ವಾಸಿಯಾಗಿರೆ ನಿನಗೆ ಕೇಳ್ನಿಜ |
ವಾಸವಹುದೈ ಮುಂದೆ ಸುರಪುರವೆಂದ ದೇಶಿಕನು || ೧೯ ||

ಏನುವಲ್ಲದ ರೂಪನೊಂದನು |
ಮಾನದಿಂದಿರಿಟ್ಟು ತತ್ಸಂ |
ಧಾನವನು ಮಾಡಲ್ಕೆ ತತ್ತತ್ಕರ್ಮಫಲದಿಂದ ||
ಏನಹರೊ ಬಳಿಕಾರು ಬಲ್ಲರು |
ನಾನಿದಕ್ಕಾಱೆನು ಸದಾಸ |
ತ್ಯಾನುಭವಸಂಪೂರ್ಣ ಸದ್ಗುರುನಾಥ ಕೇಳೆಂದ || ೨೦ ||

ಬಲ್ಲಹನೆ ಕೇಳಿಹಪರದ್ವಯ |
ದಲ್ಲಿ ಸುಖವಿಲ್ಲೆಂದು ನಾನವ |
ನೆಲ್ಲವಂ ಪರಿಹರಿಸಿ ಪುಣ್ಯಾಧೀನದಿಂ ಬರಲು ||
ಭುಲ್ಲವಿಸಿ ನೀವೀಗ ಕರ್ಮದ |
ಮಲ್ಲಣೆಯ ಕಡುಗಡಲ ಬಿಱುಹೊ |
ಯ್ಯಲ್ಲಿಗೆನ್ನನು ಸಲಿಸುವರೆ ಗುರುನಾಥ ಕೇಳೆಂದ || ೨೧ ||

ಮತ್ತೆ ಕೇಳಾರಯ್ಯ ಬಂದವ |
ರತ್ತ ತೆಱದಿಂದಿಹಪರದ ತಾ |
ಪತ್ರಯಗಳಿಂ ನೊಂದು ನಿಂದುರಿವುತ್ತ ಬಂದವಗೆ ||
ಸತ್ಯಬೋಧೆಯ ಪೇಳದೋದೀ |
ಕೃತ್ರಿಮದ ಕರ್ಮದೊಳು ಹೊಗಿಸಿ ನಿ |
ರರ್ಥಕೆನ್ನನು ಕೆಡಿಸುವರೆ ಗುರುನಾಥ ಕೇಳೆಂದ || ೨೨ ||

ಹೃದಯದೊಳು ಯಜ್ಞದೊಳು ಜಲ ಶಿಲೆ |
ಮೃದಿಗಳೊಳು ಪರಿಪೂರ್ಣವ ಶಿವನಂ |
ಪುದಿದು ಕೈತವದಿಂ ವೃಥಾ ವಿಚ್ಛಿನ್ನವಂ ಮಾಳ್ಪ ||
ಹದನ ಪಸರಿಸಬೇಡವೆನಗ |
ಗ್ಗದ ಸಮಗ್ರ ವಿಶಿಷ್ಟ ಬೋಧಾ |
ಭ್ಯುದಯಮಂ ಪೇಳೆನಲಿಕೆಂತೆಂದನು ಕುಮಾರಂಗೆ || ೨೩ ||

ಅಹುದಹುದು ಸಂಸ್ಕಾರದುದ್ಯಮ |
ವಿಹಿಗಿರಲು ಬೇಡಾ ಸುವಾಸನೆ |
ಗ್ರಹತೆ ಶಮೆದಮೆ ನಿಯತವಾಯ್ತೀತಂಗೆ ನಾವಿನ್ನು ||
ಅಹಿತವಹ ಸಂಸಾರವಂ ನಿ |
ರ್ವಹಿಸಬೇಕೆಂದೆನುತ ಗುರುಸು |
ಪ್ರಹಸಿತಾನನನಾಗುತಿಂತೆಂದನು ಕುಮಾರಂಗೆ || ೨೪ ||

ಆದಂದಿದನಾರೈದು ನೀ ಕೇ |
ಳಾದಿಯಲಿ ಗುರು ಸಂಪ್ರದಾಯದ |
ಬೋಧೆಯದು ಪೇಳ್ವರು ಮುಮುಕ್ಷುಗಳಿಂಗೆ ದೇಶಿಕರು ||
ಆದರಿಸಲಾ ಭೇದವೆನ್ನೊಳು |
ವೇದಿಸಿಯೆ ನಿಂದನಿತ ನಿನ್ನೊಳ |
ಗೋದಿ ಪೇಳುವೆನೆನುಲಿಂತೆಂದನು ಕುಮಾರಂಗೆ || ೨೫ ||

ತನಯ ಕೇಳು ಹಿತಾಹಿತವ ಚಿಂ |
ತನೆಯ ಮಾಡಲುಬೇಕು ಮೊದಲೆಂ |
ದೆನಲಿಕಾ ಹಿತವಹಿತವೇನೆಂದೆನಲು ನಸುನಗುತ ||
ನಿನಗೆ ತೋಱುವವೆಲ್ಲವಹಿತಂ |
ನಿನಗೆ ತೋಱದ ನೀನೆ ಹಿತವೆಂ |
ದನಿತ ನಿನ್ನಂ ತಿಳಿಯಬೇಕೆಲೆ ಮಗದೆ ಕೇಳೆಂದ || ೨೬ ||

ಆತ್ಮವಿತ್ ಶೊಕಾಂತ ರತಿಯೆಂ |
ದಾತ್ಮನಂ ತಿಳಿಯೆಂದುದೀ ಶ್ರುತಿ |
ಆತ್ಮನಂ ತಿಳಿಯಲ್ಕೆ ಲೋಕೋತ್ತಾರವಹುದೆಂದು ||
ಆತ್ಮನಿಂ ವಿಧಿಸಿಪ್ಪ ಕಾರಣ |
ಆತ್ಮನಂ ನೀ ತಿಳಿವುದೆಂದು ನಿ |
ಜಾತ್ಮಜಂಗೊರೆದನು ಸರಾಗದಿ ದೇಶಿಕೋತ್ತಮನು || ೨೭ ||

ಕರ್ಮವಿದನತಿಗಳೆದು ಕೇಳ್ವರ |
ಬೊಮ್ಮವೊಂದನೆ ತಿಳಿಯಲದರಿಂ |
ದಿಮ್ಮಿತಹ ಫಲವೇನೆನಲು ವಿಜ್ಞಾನಮಾನಂದ ||
ಬ್ರಹ್ಮವೆಂಬೀ ಶ್ರುತಿಮತದಿ ಪರ |
ಬೊಮ್ಮವನು ತಿಳಿದವನು ತಾನೇ |
ಬ್ರಹ್ಮವಪ್ಪನು ತಪ್ಪದೆಲೆ ಸಚ್ಛಿಷ್ಯ ಕೇಳೆಂದ || ೨೮ ||

ತರಳ ಕೇಳೀ ಗುರುರಹಸ್ಯವ |
ಹರಹದಿರು ಸರ್ವತ್ರಲಥವಾ |
ಹರಹಿದಡೆ ನರಪಶುಗಳೇಂ ಶಿವಶರಣರಂದದಲಿ ||
ಅಱಿವರೇ ಹೇಳೆಲೆಲೆ ಮತ್ತೆಯು |
ಕಱುಬಿಸಲ್ಬೇಡವರ ಪರತಾ |
ತ್ಪರಿಯವೆಂತಂತುಸುರ್ವುದೈ ಸಚ್ಛಿಷ್ಯ ಕೇಳೆಂದ || ೨೯ ||

ಲಲಿತಮಣಿಮಯಮಂಟಪಕೆ ಹೊಂ |
ಗಳಸವಿಡಲದು ವಿಳಸವಲ್ಲದೆ |
ಹುಲುಕುಟೀರಕೆ ಯೋಗ್ಯವೆಂತಾ ಪರಿಯೊಳೀ ಮತವು ||
ಹೊಲಬಿಗಂಗನುಬಂಧವಲ್ಲದೆ |
ನಿಲವಿನಿಂ ಸಂಸಾರಸೊಕ್ಕಿಂ |
ದುಲಿವ ಪಾತಕಗೇತಕ್ಕೆ ಸಚ್ಛಿಷ್ಯ ಕೇಳೆಂದ || ೩೦ ||

ಶುಂಠರಿಗೆ ಸುರೆಯಂ ಸದಾ ಬಿಡ |
ದೀಂಟುವಗೆ ವಿಶ್ವಾಸಹೀನಗೆ |
ಕಂಟಕಗೆ ಕಪಟಿಗೆ ವೃಥಾ ಶ್ರಮಗೊಂಡು ಪರಸತಿಗೆ ||
ಬೇಂಟಗೊಂಬಗೆ ಗುರುಹಿರಿಯರೊಳು |
ಟೆಂಠಣಿಪ ಕಡುಪಾತಕಂಗಿದ |
ನಂಟಿಸದಿರೆಲೆ ಮಗನೆ ಮಱೆದೀ ಗುರುರಹಸ್ಯವನು || ೩೧ ||

ಸತ್ಯರಿಗೆ ಸದ್ಭಕ್ತರಿಗೆ ಸವಿ |
ರಕ್ತರಿಗೆ ಸಮಚಿತ್ತರಿಗೆ ನಿಜ |
ವಿತ್ತುಗಳಿಗೆ ಸದಾ ವಿವೇಕಾನ್ವಿತ ಮಹಾತ್ಮರಿಗೆ ||
ನಿತ್ಯರಿಗೆ ಸತ್ಪಾತ್ರರಿಗೆ ನಿಜ |
ಮುಕ್ತರಿಗೆ ಸಂಸಾರ ಪಾಶವ |
ಕಿತ್ತುಬಿಸುಟರ್ಗೊರವುದೀ ಸದ್ಗುರುರಹಸ್ಯವನು || ೩೨ ||

ಕಂ|| ಎನಲಾವಾಕ್ಯವ ತನ್ನಯ |
ಮನದೊಳು ಮಮಕರಿಸಿ ಭಕ್ತಿಪೂರ್ವಕದಿಂದಂ |
ವಿನಯ ಪರನಾಗಿ ನುತಿಸಿದ |
ನನಘನನದ್ವಯ ಸುಖಾತ್ಮನಂ ದೇಶಿಕನು || ೩೩ ||

ಇತಿ ಸದ್ಗುರುರಹಸ್ಯೇ

ನಿತ್ಯಾನಿತ್ಯ ವಿಚಾರೋನಾಮ

ಪ್ರಥಮೋಪದೇಶಂ ಪೀಠಿಕಾಧ್ಯಾಯಂ

ಶ್ರೀ :: ಶ್ರೀ

ದ್ವಿತೀಯೋಪದೇಶಂ

ಶ್ರೀ ಗುರು ಸಿದ್ಧಲಿಂಗಾಯ ನಮಃ

[ರಾಗ-ಶ್ರೀರಾಗ—ಪಲ್ಲವಿ]

ಭಾ|| ಷ|| ಹಿತವಿದಹಿತವಿದೆಂದು ಶಿಷ್ಯನ |
ಮತಿಗೆ ಮಂಗಲವಾಗಿ ಹೇಳಿದ |
ನತಿಶಯೋಕ್ತಿಗಳಿಂದ ಸದ್ಗುರುನಾಥನುಚಿತದಲಿ || ಪದ ||

ಮಱೆವವರ್ತನು ಹೇಹಮಯಮಂ |
ತಱಿವವರ್ವಿಷಯಾಘವನಮಂ |
ಜಱೆವವರ್ಭವ ಬಂದಕಾಸ್ಪದಮಪ್ಪ ಸಂತತಿಯ ||
ಅಱೆವವರ್ನಿಜತತ್ವವೊಂದಂ |
ಹಱಿವವರ್ದೃಗ್ದೃಶ್ಯ ರಜ್ಜಾ |
ತೆಱಹುಗುಡದಾಲಿಸುವುದೈ ಸದ್ಗುರುರಹಸ್ಯಮನು || ೧ ||

ನಿನಗೆ ಪೇಳ್ವೀ ಗುರುರಹಸ್ಯದ |
ಘನವನಱಿವಡೆ ಮೊದಲು ಕೇಳಿಲೆ |
ತನಯ ನಿಶ್ಚಲನೆಂದವೇ ಸಾಧನಸಮಗ್ರಗಳ ||
ಮನದೊಳಳವಡಿಸುತ್ತ ಮೆಲ್ಲನೆ |
ನೆನಹು ನಿಜ ಲಕ್ಷ್ಯದೊಳು ವೇದಿಸು
ತನವರತಲನುಭವಿಸುತಿರುತಿಹುದೆಂದ ದೇಶಿಕನು || ೨ ||

ಅಕ್ಷಯನೆ ಕೇಳ್ನೀವು ಪೇಳ್ವೀ |
ಲಕ್ಷ್ಯವನು ನಾನೇನ ಬಲ್ಲೆನು |
ಲಕ್ಷಿಸಿಯೆ ಲಕ್ಷ್ಯವನು ಲಕ್ಷಣವಾಗಿ ನೀವೆನ್ನ ||
ಶಿಕ್ಷಿಸಿಯೆ ಸತ್ಕರುಣದಿಂದ ನಿ |
ರೀಕ್ಷಿಸಲು ಬೇಕೆನಲು ಶಿಷ್ಯಂ |
ಗಾಕ್ಷಣದೊಳಾ ಲಕ್ಷ್ಯದನುಸಂ ಬೆಸಸಲನುವಾದ || ೩ ||

ತಪ್ತಕಾಂಚನನಿಭದ ಭೂಮಿಯೊ |
ಳಿತ್ತನೋಡಿದಡತ್ತ ನಭವಂ |
ಹೊತ್ತ ಕೋಟಿ ರವಿಪ್ರಕಾಶ ಸ್ತಂಭದಿಂಬುಗಳ ||
ಸುತ್ತಿದನ್ಯೋನ್ಯಪ್ರಕಾಶದ |
ವೊತ್ತದೊಳ್ಕುದದಿಂದ ಸುಳಿದಾ |
ಡುತ್ತಲಿರುತಿಹುದೆಂದು ಪೇಳಿದ ದೇಶಿಕೋತ್ತಮನು || ೪ ||

ಕೃತಕವನು ನೀ ಮಾಡಿ ಲಕ್ಷ್ಯವ |
ನತಿಗಳಯದಿರು ಮಗನೆ ಎನ್ನಿಂ |
ಹಿತವರುಂಟೇ ಸತ್ಯಬೋಧೆಯ ಪೇಳ್ವರೀ ಕ್ರಮದಿಂ ||
ಕ್ಷಿತಿಯೊಳದುಕಾರಣದಿ ನಿರ್ಮಳ |
ಮತಿಯನಂಗೀಕರಿಸಿ ಲಕ್ಷ್ಯವ |
ರತಿಸುತಿಹುದಾವಾಗಲೆಂದನು ದೇಶಿಕೋತ್ತಮನು || ೫ ||

ಕೆಡದಿರೆಲವೋ ಮಗನೆ ಹುಲ್ಲಂ |
ಹಿಡಿದು ಸಾರಿದೆ ತನುವಿದಂ ಕೈ |
ವಿಡಿಯದಿರು ನೆನಹಿಂದ ಮೆಲ್ಲನನನ್ಯಲಕ್ಷ್ಯವನು ||
ತುಡುಕುತಿಹುದೆಡೆಗೆಟ್ಟುದೊಡೆಮುರಿ |
ದಡರಿ ಹಠದಿಂದಡಿಗಡಿಗೆ ಬೆಂ |
ಬಿಡದೆ ಪಡಿತಳಿಸುತ್ತಲಿರುತಿಹುದೆಂದ ದೇಶಿಕನು || ೬ ||

ಹೂಸಿ ಹುಂಡನ ಮಾಡಿ ಕಂಗೆ |
ಟ್ಟೋಸರಿಸದಸ್ರಾಂತ ಲಕ್ಷ್ಯವ |
ನಾಸುರತೆಯಿಂ ತೊಡರಿ ಬಿಡದಂತಡಗದನ್ಯೋನ್ಯ ||
ವಾಸಿಯಾಗಿರುತಿರಲು ಮುಂದಕೆ |
ನೀ ಸಹಸ್ರಾದಿತ್ಯಕಿರಣೋ |
ಲ್ಲಾಸಲಹರಿಯೊಳೊಂದಿ ಸುಖವಿಹುದೆಂದ ದೇಶಿಕನು || ೭ ||

ಜೋಡಿಸುತ ನೆನಹಂ ಸಮೇಳವ |
ಮಾಡುತಲಿ ನಿಜಲಕ್ಷ್ಯದೊಳ್ಮುಳು |
ಗಾಡುತಲಿ ತೇಂಕಾಡುತೊಲಿದಾಸ್ತಿಕ್ಯಬುದ್ಧಿಯೊಳು ||
ಕೂಡೆ ಕೂಡೆಡವಱಿಯದೊಯ್ಯನೆ |
ನೀಡಿ ಸಿಲುಕುತಲಲ್ಲಿಯೇ ನೀ |
ಗೂಡುಗೊಂಡಿಹುದೆಂದು ಪೇಳಿದ ದೇಶಿಕೋತ್ತಮನು || ೮ ||

ತರಹರಿಸಿ ತಾರ್ಕಣಿಸಿ ನೆನಹಂ |
ಹುರಿಗೊಳಿಸಿ ಮುಂಕೊಳಿಸಿ ಲಕ್ಷ್ಯವ |
ನೆಱದು ನೆಱೆಯದೆ ಧಾವರಿಸುತಾವೇಶವೆಗ್ಗಳಿಸಿ ||
ಪರವಶದಿ ಹೊರೆಯೇರಿ ಮಿಗೆ ಸಂ |
ಹರಿಸಲಱಿಯದೆ ನಿನ್ನ ನೀ ಸ |
ತ್ಕರಿಸಿಕೊಳುತಿಹುದೆಂದು ಪೇಳಿದ ದೇಶಿಕೋತ್ತಮನು || ೯ ||

ಇರುತಿರಲು ದೇಹೇಂದ್ರಿಯಂತಃ |
ಕರಣ ಶಕ್ತಿಗಳಾಕ್ಷಣದಿ ವಿ |
ಸ್ತರಿಸಲಱಿಯದೆ ಕೆಡುವವದಱಿಂ ಪುಣ್ಯಪಾಪಗಳು ||
ದೊರಕವದಿಱಿಂದಿರದೆ ಜೀವಂ |
ಸರಿವನದುಕಾರಣದಿ ನೀ ತಾ |
ತ್ವರಿಯದಿಂ ಲಕ್ಷ್ಯದೊಳು ಬೆರಸಿಹುದೆಂದ ದೇಶಿಕನು || ೧೦ ||

ಕಾಯ ಸುಖವನು ಬಯಸಿ ಬಱಿದೇ |
ಸಾಯಸಕ್ಕೊಳಗಾಗಕಟ ನಿ |
ರ್ದಾಯದಲಿ ಸತ್ತರೆ ವೃಥಾ ಮುಂದಣ ಭವಾಂತರದಿ ||
ನಾಯಹರೊ ನರಿಯಹರೊ ಕರ್ಮದ |
ದಾಯವದನಿನ್ನಾರು ಬಲ್ಲರು |
ಸಾಯದಿರು ನಿಜತತ್ವವಱಿಯದೆ ಮಗನೆ ಕೇಳೆಂದ || ೧೧ ||

ಕಾಯವೆಂಬುದು ತಾನೆ ಗಗನ |
ಚ್ಛಾಯೆಯದಱ ವಿವೇಕವೇ ತಾ |
ಮಾಯೆಯದಱ ಸ್ಥಿತಿಗತಿಯ ನೋಡಲು ಕೃತಾಂತಕನ ||
ಬಾಯ ಬಾರಿಯ ತುತ್ತೆನಿಪ್ಪಾ |
ವಾಯುವಹ ತನುವಿಡಿದು ನೀ ನಿ |
ರ್ದಾಯದಲಿ ಕೆಡಬೇಡವೆಲೆ ಸಚ್ಛಿಷ್ಯ ಕೇಳೆಂದ || ೧೨ ||

ತಥ್ಯವನು ಕೇಳ್ಮಗನೆ ಯೋನಿಗೆ |
ಬಿತ್ತದಿರು ಬಿಂದುವನು ತುಂದಕೆ |
ತುತ್ತಬೇಡೇನೊಂದನತಿಮಱೆದೊಱಗದಿರು ಬಱಿದೆ ||
ಹೊತ್ತುಹೋಕರೊಳಾಡದಿರು ನೀ |
ಹೊತ್ತಿಗೊಂದನೆ ನೆನೆಯದಿರು ನೀ |
ಸತ್ಯವಂ ಬೆಂಬಿಡದಿರೆಂದನು ದೇಶಿಕೋತ್ತಮನು || ೧೩ ||

ನೊಂದು ತಾಪತ್ರಯಗಳಿಂದವೆ |
ಮುಂದುಗೆಟ್ಟಿಹ ಜಗವ ಕಾಣುತ |
ಹಂದೆಯಂ ಹಾವಡರಿದಂತವಿವೇಕದಿಂ ತನ್ನ ||
ಬೆಂದತುಂದ ನಿಮಿತ್ತ ಪೆಱರಂ |
ಕೊಂದುಕೂಗಿ ನಿರರ್ಥ ನಿರಯದೊ |
ಳೊಂದ ಬೇಡೆಂದೈದೆ ಪೇಳಿದ ದೇಶಿಕೋತ್ತಮನು || ೧೪ ||

ಹೆಂಗಳಿಗೆ ಹೊಂಗಳಿಗೆ ಮನತಂ |
ದಂಗಜನ ಹೂಗಣೆಯ ಕೂರಲ |
ಗಿಂಗಕಟ ಗುರಿಯಾಗಿ ಝೊಂಪಿಸಿ ಮೋಹ ಮೂವಡಿಸಿ ||
ಕಂಗಳಿಂಪಿಗೆ ಸಿಲುಕಿ ಯಾಜನ |
ಜಂಗುಳಿಗಳಂತೆಲೆಲೆ ಭವದೊಳ್ |
ಭಂಗ ಬಡೆಯದಿರೆಂದು ಪೇಳಿದ ದೇಶಿಕೋತ್ತಮನು || ೧೫ ||

ಶ್ರೋತ್ರ ಸುಖವನು ಕೇಳಿ ನಿಲ್ಲದೆ |
ನೇತ್ರಸುಖವನು ಕಂಡು ಬಳಿಕಲಿ |
ಪಾತ್ರದಿಂ ಸ್ಪರುಶನವ ಮಾಡುವೆನೆಂದು ತವಕಿಸುತ ||
ಮೂತ್ರನಾಳಕೆ ಮುಂದುಗೆಟ್ಟಣು |
ಮಾತ್ರ ಬಿಂದುವ ಕೆಡಹಿ ವೀಣಾ |
ಸೂತ್ರವಿಧಿಯಂತಾಗ ಬೇಡೆಂದೊರೆದ ದೇಶಿಕನು || ೧೬ ||

ಮೆಲುವೆ ಮನದಣೆವನ್ನ ರಂಭಾ |
ಫಲವನೆಂದಿಚ್ಛಯಿಸಿ ತುಂದದ |
ಬಳಸನಱಿಯದೆ ತುಂಬಿ ತೂತಲ ಜೀರ್ಣವೆಡೆಗೊಂಡು ||
ಬಳಲುತಿಹ ಕಾಲದಲಿ ಫಲವಂ |
ಮುಳಿದುಪದ್ರಾಂತದಲಿ ಮತ್ತವ |
ನೆಳಸಿ ಸವೆಯದಿರೆಂದು ಪೇಳಿದ ದೇಶಿಕೋತ್ತಮನು || ೧೭ ||

ವೇಷವನು ಹಲ್ಲಣಿಸಿ ನಾನಾ |
ದೇಶದೇಶವ ತೊಳಲಿ ತತ್ತ |
ದ್ಭಾಷೆಗಳ ಕಲಿಕಲಿತು ಹಿರಿಯತನಕ್ಕಹಂಕರಿಸಿ ||
ರೋಷಹರುಷವನಿಂಬುಗೊಂಡೊಡ |
ಲಾಸೆಯೊಂದು ವಿನಾಶವಾಗದೆ |
ಮೋಸವಾಗದಿರೆಂದು ಪೇಳಿದ ದೇಶಿಕೋತ್ತಮನು || ೧೮ ||

ಮೈಯೊಳಿಹ ಪರವಸ್ತುವಂ ನೀ |
ನೊಯ್ಯನೀಕ್ಷಿಸಿ ಕಾಣಲಱಿಯದೆ |
ಸಂಯಮ ಶ್ರಮದಿಂದ ಲೋಕವ ತಿರುಗಿ ನೆಱೆ ಬಳಲಿ ||
ಕಯ್ಯಲಿಹ ಪಿಂಡವನು ಬಿಟ್ಟೊಣ |
ಗಯ್ಯ ನಕ್ಕುವೆನೆಂದು ಬಱಿದೇ |
ಮಯ್ಯನಗಿಯದಿರೆಂದು ಪೇಳಿದ ದೇಶಿಕೋತ್ತಮನು || ೧೯ ||

ಸಮುಚಿತಾಸ್ಥಾನದೊಳು ಬೈತಿ |
ಟ್ಟಮಿತಸುಖಮಂ ಪಡೆಯಲಱಿಯದೆ |
ಶ್ರಮದೊಳನ್ನವ ಹೊತ್ತು ಬಳಲುವವೊಲು ವೃಥಾಧ್ವಯದಿಂ ||
ಭ್ರಮಿಸಿ ನಿಜಸುಖವಿಮುಖ ಮತಿಯಿಂ |
ಸಮಹಿತಾನಂದದೊಳು ನೀ ವಿ |
ಶ್ರಮಿಸಲಱಿಯದೆ ಕೆಡದಿರೆಂದನು ದೇಶಿಕೋತ್ತಮನು || ೨೦ ||

ಆವುದೊಂದು ಕುಲಾಶ್ರಮದ ಕ |
ರ್ಮಾವಲಂಬವು ಬಂಧವೆಂದದ |
ಹೇವರಿಸಿ ನೀ ಬಿಟ್ಟು ಲೌಕಿಕಕಂಜಿ ಮಮಕರಿಸಿ ||
ಗಾವಿಲರ ತೆಱನಂತೆ ಬಱಿದೇ |
ಜೀವಸಕ್ಕೊಳಗಾಗಿ ಭವದೊಳ್ |
ತೀವಬೇಡೆಂದೊರೆದು ಪೇಳಿದ ದೇಶಿಕೋತ್ತಮನು || ೨೧ ||

ಪರಮ ನಿಜತತ್ವದೊಳಗೈಕ್ಯದಿ |
ನೆರೆವ ಚಿತ್ಪರಿಪೂರಿತಾಂಗರ |
ಪರಿಯನಱಿಯದೆ ಬಱಿದೆ ಬಾಹ್ಯಕಳಗೆಡೆದು ಬೂತಿಕ್ಕಿ ||
ಹಿರಿಯರಿವರುಣಲಹುದೆ ಮೂತ್ರಿಸ |
ಲಹುದೆ ಮಲವನು ಬಿಡಬಹುದೆಯೆಂ |
ದಿರದೆ ನಿಂದಿಸಿ ಕೆಡದಿರೆಂದನು ದೇಶಿಕೋತ್ತಮನು || ೨೨ ||

ಪಸಿವಡಸಿ ಕೂಳ್ನೀರನುಂಡುಂ |
ಡೊಸರುತಿಹ ಬಿಂದುವಿನ ದೆಸೆಯಿಂ |
ನುಸುಳಿ ವಿಸಟಂಬರಿದು ವಿಷಯ ಸಮೂಹ ವೀಥಿಯೊಳು ||
ಮುಸುಳಿಸುತ್ತಿಹ ದುರ್ಮನದ ಮಾ |
ಮುಸಕಮಂ ಮಮಕರಿಸಿ ನೀ ದು |
ರ್ವ್ಯಸನಿಯಾಗದಿರೆಂದು ಪೇಳಿದ ದೇಶಿಕೋತ್ತಮನು || ೨೩ ||

ಒಡನೆ ಬಹ ಕೃತ ದುಷ್ಕೃತಂಗಳ |
ಗಡಣಗೊಳ್ಳದೆ ಸತಿಸುತರ್ನೆಲ |
ನೊಡವೆ ಗೃಹಚರಿಗಾನೆನಗವರು ಗತಿಯೆಂದು ||
ಬಿಡದೆ ನಂಬಿ ವೃಥಾಯ ಕಾಲನ |
ಹಿಡಿಯ ಗಾಯವ ಮಱೆದು ಜೀವವ |
ಬಿಡದಿರೆಂದನು ದೇಶಿಕೋತ್ತಮನೊಲಿದು ಶಿಷ್ಯಂಗೆ || ೨೪ ||

ಕರ್ಮಕಪಟವನೆಮ್ಮಿ ಪರಮನ |
ಮರ್ಮವಱಿಯದೆ ವಾಗ್ವಿಲಾಸದಿ |
ಬೊಮ್ಮವಾರ್ತೆಯನುಡಿದು ಶಿಶ್ನೋದರಪರಾಯಣದ ||
ಧರ್ಮದಲಿ ನೀ ನಡದ ಹಮ್ಮಿನ |
ಬಿಮ್ಮು ಮಿಗೆ ತಲೆಗೇಱಿ ಮಗನೇ |
ಘಮ್ಮನಿಳಿಯಲುಬೇಡ ನಿರಯದೊಳೆಂದ ದೇಶಿಕನು || ೨೫ ||

ಪೇಳಿದಂತುಟನೈದೆ ತನ್ನ ವಿ |
ಶಾಲಮತಿಯೊಳಗಳವಡಿಸಿ ಸ |
ಲ್ಲೀಲೆಯಿಂ ಸಂಭ್ರಮಿಸಿ ಕೈಮುಗಿದುಚಿತವಚನದಲಿ ||
ಮೋಲನಱುಹಿಸಿ ಎನ್ನ ಜನ್ಮದ |
ಕೋಳಮಂ ಹೋಳಿದನೆನುತ ಸ |
ಲ್ಲೀಲೆ ಸದ್ಭಾವದಲಿ ನುತಿಸಿದ ದೇಶಿಕೋತ್ತಮನು || ೨೬ ||

ಇತಿ ಸದ್ಗುರುರಹಸ್ಯೇ

ನಿತ್ಯಾನಿತ್ಯ ವಿಚಾರೋನಾಮ

ದ್ವಿತೀಯೋಪದೇಶಂ ಮಂಗಳಂ

ಶ್ರೀ ಶ್ರೀ

ತೃತೀಯೋಪದೇಶಂ

ಗುರು ಸಿದ್ಧಲಿಂಗಾಯ ನಮಃ

[ರಾಗ–ಚೌಳಿ–ಪಲ್ಲವ].

ನಿಮಿಷದಿಂ ದೇಹೇಂದ್ರಿಯಂಗಳ |
ಮಮತೆಯಂ ಬಱಿಕೈದು ಶಿಷ್ಯೋ |
ತ್ತಮಗೆ ಜೀವನ ಭೇದವಂ ಸೂಚಿಸಿದ ದೇಶಿಕನು || ಪದ ||

ಬೇಸರದೆ ಬೆಂಬಿಡದೆ ಕಂಗೆ |
ಟ್ಟೋಸರಿಸದೊಲು ಸೊಗಡು ಮಾಡದೆ |
ಮೋಸ ಹೋಗದೆ ವಾಸಿವುಡುಗದೆ ಭಾಷೆಕವಲಿಡದೆ ||
ಕ್ಲೇಶಗೊಳ್ಳದೆ ನಿಂದು ಸತತೋ |
ಲ್ಲಾಸವಹ ನಿರ್ವಾಣದೇಳ್ಗೆಯ |
ಮಿಾಸಲಳಿಯದೆ ಕೇಳ್ಪುದೀ ಸದ್ಗುರು ರಹಸ್ಯವನು || ೧ ||

ಸ್ವಾನುಭವಸಿದ್ಧಾಂತದನುಸಂ |
ಧಾನವಱಿಯದೆ ಶಾಸ್ತ್ರಜಾಲವಿ |
ಧಾನಮಾನ ಕುತರ್ಕ ಕರ್ಕಶ ಮತಗಿತಂಗಳನು ||
ಏನನೋದಿದರೇನ ಕೇಳಿದ |
ರೇನ ಮಾಡಿದರೇನು ಭವದ |
ಧ್ಯಾನವಾದರೆ ಬೆನ್ನ ಬಿಡದವಗೆಂದ ದೇಶಿಕನು || ೨ ||

ಭೇದಿಸಲ್ಕಾ ಸ್ವಾನುಭವ ಸಿ |
ದ್ಧೋದಯದ ಸನ್ಮಾರ್ಗಕನುಗುಣ |
ವಾದ ಸದ್ವಾಕ್ಯಂಗಳಿಂ ಕೃಪೆಯಿಂದ ನೀವೆನ್ನ ||
ಬೋಧಿಸಲ್ವೇಕೆಂದು ಮಿಗೆ ಸಂ |
ವಾದಿಸುವ ಸಚ್ಛಿಷ್ಯಗಭಿಮುಖ |
ವಾದನಾಕ್ಷಣ ದೇಶಿಕಂ ಬೋಧಿಸುವ ಭರದಿಂದ || ೩ ||

ಆಧರಿಸಲೀ ಜೀವಪರಮನ |
ಭೇದವಂ ಭೇದಿಸಿಯೆ ಕರ್ಮವ |
ಮೋದಲೊಲ್ಲದೆ ದೇಶಗಾದೆಯ ಬೋಧೆಗಳ ಕೇಳಿ ||
ಕಾದಿ ಬೂದಿಯ ಹಾಯ್ದುಕೊಂಡು ವಿ |
ವಾದವೇ ಒಡಲಾಗಿ ಭವದೊಳ್ |
ಬಾಧೆ ಬಡುವುದಱಿಂದಲೇಂ ಫಲ ಕೇಳು ಸಚ್ಛಿಷ್ಯ || ೪ ||

ಆವ ಸುಕೃತದ ಫಲವೊ ಪೂರ್ವದೊ |
ಳಾವ ಸುವ್ರತವಂ ಬಿಡದೆ ಸಂ |
ಸೇವಿಸಿದೆ ನೋಡಿರವದಲ್ಲದಿರಲ್ ನಿಜೇಷ್ಟವನು ||
ತೀವಿ ತೆಕ್ಕನೆ ಕೊಡುವ ದೇವರ |
ದೇವನಂ ನಾನಿಂದು ಕಂಡೆನು |
ಪಾವನಾತ್ಮಕನಾದೆನೆನುತಿಂತೆಂದ ದೇಶಿಕಗೆ || ೫ ||

ಗುರುವೆ ಬಿನ್ನಪ ಜೀವ ಪರಮಾ |
ತ್ಮರ ಮಹತ್ವವನೇನ ಬಲ್ಲೆನು |
ಕರುಣಿ ನೀನೇ ಕರುಣಿಸೆಂದೆನಲಿರದೆ ಭರದಿಂದ ||
ಪೊರದಹಂಕೃತಿಯಿಂದ ಭರದೊಳ್ |
ತಿರುಗುತಿಹನೇ ಜೀವಯಿದರೊಳ್ |
ಬೆರಸದಿಹ ನೀನೇ ಪರಾತ್ಮಕನೆಂದ ದೇಶಿಕನು || ೬ ||

ಏನನೆಂಬೆನು ಗುರುವೆ ಕರ್ಮದ |
ಕಾನನದೊಳೆಡೆಗೆಟ್ಟು ದುಃಖದಿ |
ಹಾನಿಯಾಗಿ ವಿವೇಕ ವಿಸ್ಮೃತಿಯಿಂದ ಜಡನಾದ |
ನಾನಗಡ ಪರಬೊಮ್ಮವಹುದಿಹು |
ದೀನಿರಾಯಸದಿಂದ ತಿಳಿವಡೆ |
ನೀನೆ ಗತಿಯೆಂದೆಂಬೆನೇ ಗುರುನಾಥ ಹೇಳೆಂದ || ೭ ||

ತಿಳಿಯಬೇಕ್ಕೆ ಮೊದಲು ಭೂತಂ |
ಗಳಧರಾದಿವಿಶೇಷದಿಂದಲಿ |
ಬಳಿಕ ನಿನ್ನ ಮಹತ್ವವೇ ನಿನ್ನಲ್ಲಿ ನಿಶ್ಚಯಿದಿಂ ||
ಹೊಳೆವುತಿಹುದದಱಿಂದ ನಿನ್ನಂ |
ಘೞಿಲನಱಿಯಲು ಬಹುದೆ ಕೇಳೆಂ |
ದೊಲಿದು ನಿಜತನಯಂಗೆ ಪೇಳಿದ ದೇಶಿಕೋತ್ತಮನು || ೮ ||

ಎಲ್ಲಿ ಧರೆ ಜಲವೆಲ್ಲಿ ಪಾವಕ |
ನೆಲ್ಲಿ ಮಾರುತನೆಲ್ಲಿ ನಭವಿಹು |
ದೆಲ್ಲಿ ದೇಹದೊಳೆಲೆ ಮಹಾತ್ಮನೆ ಬೆಸಸೆನಲ್ ಕೃಪೆಯಿಂ ||
ಎಲ್ಲಿ ಕಠಿಣರಸೋಷ್ಣ ಸಂಚಲ |
ವೆಲ್ಲಿ ಶೂನ್ಯಂ ವರ್ತಿಸುವುದದ |
ಱಲ್ಲಿ ಕೇಳ್ ಕ್ರಮದಿಂದ ಭೂಮ್ಯಾದಿಗಳು ನೆಲಸಿಹವು || ೯ ||

ಅಱಿಯಬಾರದು ನೀವು ಪೇಳಿದ |
ಕುಱುಹುಗಳ ನಿರ್ಧರಿಸಲೆಲೆ ಸ |
ದ್ಗುರುವೆ ನಿಶ್ಚಯದಿಂದ ನೀವೇ ಪೇಳಿ ನಿಮ್ಮವನ ||
ಮಱವಿಯನು ನೀಗಾಡಲೊಲ್ಲದೆ |
ಬಱಿದೆ ನಾನೆನ್ನ ಜ್ಞಭಾವದೊ |
ಳಱಿದೆನೆಂದರೆ ಸಾಧ್ಯವೇ ಗುರುನಾಥ ಹೇಳೆಂದ || ೧೦ ||

ಧರಣಿಯೆನಲಸ್ತ್ಯಾದಿಗಳು ಪು |
ಷ್ಕರವೆನಲು ಶ್ಲೇಷ್ಮಾದಿಗಳು ಕೇ |
ಳ್ನಿರುತ ವೈಶ್ವಾನರನೆನಲ್ಪಸಿವಾದಿಯಾದ್ಯೈದೂ ||
ಮರುತನೆನೆ ಚಲನಾದಿಗಳು ಸುರ |
ಸರಣಿಯೆನೆ ಕಾಮಾದಿಗಳು ನಿ |
ರ್ಧರಿಸಲಂತೀ ದೇಹ ಜಡಮಯವೆಂದ ದೇಶಿಕನು || ೧೧ ||

ದೇಹವಿದು ಜಡನೆಂದು ನೀವೆನ |
ಗೂಹಿಸಿದಿರಕ್ಕಕ್ಕ ದಿಟದಿಟ |
ದೇಹವೇ ಜಡನಾಗುತಿರೆ ಸುಖದುಃಖವೃತ್ತಿಗಳ ||
ಗ್ರಾಹಕತ್ವದ ಚಾತುರೀಯದ |
ಸಾಹಸಂ ತಾನೆಲ್ಲಿಯದು ನಿ |
ರ್ಮೋಹರೂಪನೆ ಬೆಸಸೆನಲ್ಕಿಂತೆಂದ ದೇಶಿಕನು || ೧೨ ||

ಕುಡುಹು ಸುಟ್ಟುದು ಕಾಲನೆಂಬೀ |
ಜಡಮತಿಯ ತೆಱನಂತೆ ತನ್ನಂ |
ಗಡಣಗೊಳ್ಳದೆ ದೇಹವೇ ಚೈತನ್ಯವೆಂದಿರದೆ ||
ಕೆಡುವ ದುಷ್ಟ ವಿವೇಕಿ ನಿನ್ನೊಳು |
ನುಡಿದು ಹೇಳುವೆನೆನಲು ಕೇಳೆ |
ನ್ನೊಡೆಯ ಸದ್ಗುರುನಾಥ ಮನವೊಲಿದೆನ್ನ ಬಿನ್ನಪವ || ೧೩ ||

ನಾನು ಹ್ರಸ್ವನು ನಾನು ದೀರ್ಘನು |
ನಾನು ಕೃಷ್ಣನು ನಾನು ಗೌರನು |
ನಾನು ಬಡವಾದೆಂ ವೃಥಾಮದೊಳೆಂಬುದೀ ದೇಹ ||
ತಾನೆಯಲ್ಲದೆ ಬೇಱೆ ಮತ್ತಿ |
ನ್ನೇನುವನು ನಾ ಕಾಣೆನೆಲೆ ಸು |
ಜ್ಞಾನ ರೂಪನೆ ಬೆಸಸೆನಲ್ಕಿಂತೆಂದ ದೇಶಿಕನು || ೧೪ ||

ಸುಪ್ತಿ ಮೂರ್ಛಾದಿಯೊಳು ಚೇತನ |
ವೆತ್ತು ದೇಹವಿದಕಟ ಮರುಳೇ |
ನಿತ್ಯ ಕೃತ್ಯವ ಮಾಡದೇಕಂತಾಗಿದೇಹವಿದು ||
ಭಿತ್ತಿಯಂತೆ ನಿರಾತ್ಮಕತ್ವದ |
ಕೃತ್ಯದಿಂ ಘಟಪಟಗಳಂತೆ ನಿ |
ರಸ್ತವಾಗಿಹುದೆಂದು ತಿಳುಹಿದ ದೇಶಿಕೋತ್ತಮನು || ೧೫ ||

ಧಿಟ್ಟನಿವನೆಂದೆನ್ನದಿರಿ ನಾ |
ಮುಟ್ಟೆ ಬಿನ್ನಯಿಸಿದರೆ ಘಟವೇಂ |
ಸೃಷ್ಟಿಸಿದ ತೆಱನಲ್ಲದಕಟ ಶರೀರದಂದದಲಿ ||
ಮುಟ್ಟೆ ಬೆಳೆವುದು ಲೋಕದೊಳು ನಾ |
ಹುಟ್ಟಿದಂದಿಂದಱಿಯೆನೆನಗಿದ |
ಬಟ್ಟಬಯಲಾಗಱುಹಬೇಕೆಂದನು ಗುರೂತ್ತಮಗೆ || ೧೬ ||

ಎಲೆ ಕುಮಾರಕ ತಿಳಿದು ಕೇಳ್ವಿಡೆ |
ಯೊಳಗೆ ಸಗಣವ ಹಾಯ್ಕುತಿರಲದು |
ಬೆಳೆವುದೆಂತಾ ಪರಿಯೊಳೀ ತನುವೆಂಬ ತಿಪ್ಪೆಯೊಳು ||
ತಳಿಯೆ ಕೂಳ್ನೀರೆಂಬ ಕಸವಂ |
ಬೆಳೆಯಿತೆಂದರೆ ವಸ್ತುವೇ ನಿ |
ನ್ನುಳಿವ ಮಱೆದೆಯೆಲಾಯೆನಲ್ಕಿಂತೆಂದ ದೇಶಿಕನು || ೧೭ ||

ಭೂತವೈದೊಂದಾದ ದೇಹವು |
ಚೇತನಾತ್ಮಕವಾದರೇನೆಲೆ |
ತಾತ ಕೇಳ್ವಾತೇಂದ್ರಿಯಂತಃಕರಣ ತತ್ವಗಳ ||
ವ್ರಾತವೇಂಜಡನಪ್ಪವೇ ಚಿ |
ಜ್ಯೋತಿರೂಪನೆ ಬೆಸಸೆನಲ್ಸಂ |
ಪ್ರೀತಿಯಿಂ ನಿಜತನಯನೊಳಗಿಂತೆಂದ ದೇಶಿಕನು || ೧೮ ||

ಧರಣಿ ಜಲವಹ್ನ್ಯನಿಲಗಗನ |
ಸ್ಫುರಣೆಯಂಶಂಗಳ ಪರಸ್ಪರ |
ವೆರಕೆಯಂ ವಾತೇಂದ್ರಿಯಂತಃಕರಣ ತತ್ವಗಳ ||
ವಿರಚಿಸಿದರವು ತಾವಚೇತನ |
ತರವಲ್ತೆ ಪ್ರತ್ಯಕ್ಷವೆಂದೆನು |
ತೊರೆದನಾಹಾ ದೇಶಿಕೋತ್ತಮನಮಲಶಿಷ್ಯಂಗೆ || ೧೯ ||

ನೀಕರಿಸದೇಂ ಭೌತಿಕಂಗಳ |
ನೀಕ್ರಮದೊಳೀ ಪ್ರಾಣವಾಯುವ |
ನೇಕತೆಱದಿಂ ದೇಹಕದು ಚೇತನವಲಾಯೆನುತ ||
ಸಾಕುತಾ ಸಂಚಲಿಪ ಮೂಗಿನ |
ಮೂಕುತಿಯ ಕದ್ದೊಯ್ವ ಕಳ್ಳನ |
ನೇಕೆ ತಿಳಿಯದು ಮಗನೆ ಪೇಳೆಂದೊರೆದ ದೇಶಿಕನು || ೨೦ ||

ಮತ್ತೆ ಕೇಳ್ವು ್ರತಿವಾತದೊಳ್ಕ್ರಮು |
ವೆತ್ತ ಜಾವದ ಪೆಣೆಲೆಯಂತುಱಿ |
ತೆತ್ತಿಸಿದ ಸೂತ್ರಾನುರೂಪಿನ ಬೊಂಬೆಯಂದಲಿ ||
ಯುಕ್ತಿಯಿಂ ಪ್ರಾಣಾದಿಗಳು ನಿಜ |
ಕರ್ತೃವಂ ಲಕ್ಷಿಸುವ ದೆಸೆಯಿಂ |
ವ್ಯರ್ಥ ಕೇಳ್ ಪ್ರಾಣಾದಿವಾಯುಗಳಾತ್ಮನಲ್ಲೆಂದ || ೨೧ ||

ಆವ ಘಟದಿಂ ನಿನಗೆ ಮಾರುತ |
ತೀವಿ ನಡದೂದೆಂದು ಕೇಳಲು |
ಭಾವಿಸಿಯೆ ನಾನೋಡಿ ಪೇಳುವೆನೆಂಬ ಬಣಿತೆಯೊಳು ||
ಕೋವಿದನು ಬೇಱೊಬ್ಬನುಂಟೆಂ |
ದೇ ವಿಚಾರಿಸಿ ತಿಳಿವುತಿರಲಿ |
ನ್ನಾವನೈ ಪ್ರಾಣಾದಿ ವಾಯುಗಳಾತ್ಮನಲ್ಲೆಂದ || ೨೨ ||

ವಚನ ಮೊದಲಹ ವಿಷಯಕುಳದೊಳ್ |
ಪ್ರಚುರವಹ ಕರ್ಮೇಂದ್ರಿಯಂಗಳ |
ನಿಚಯವೀತನುವಿಂಗೆ ಕಾರಣವಪ್ಪ ವಸ್ತುವಲ ||
ಅಚಲಮಹಿಮನೆ ಪೇಳೆನಲು ಕೇಳ್ |
ಶುಚಿಹೃದಯ ಕರ್ಮಾಕ್ಷಗಳು ನಿ |
ನ್ನ ಚಿತವೆಂತಂತಾಗಿ ಕರ್ಮಾಕ್ಷಗಳನಾತ್ಮಗಳು || ೨೩ ||

ನಿನ್ನನತಿಗಳದೀಪದಂಗಳು |
ನಿನ್ನನತಿಗಳದೀ ಕರಂಗಳು |
ನಿನ್ನನತಿಗಳದೀಗಳೀ ವಾಕ್ ವಾಯು ಗುಹ್ಯಗಳು ||
ತನ್ನ ತನ್ನಯ ವಿಷಯ ಕುಳದೊಳು |
ನಿನ್ನನುಳಿದಾಚರಿಸಬಲ್ಲವೆ |
ವರ್ಣಿಸಲ್ಕಿಂತಾಗಿ ಕರ್ಮಾಕ್ಷಗಳನಾತ್ಮಕವು || ೨೪ ||

ಶಬ್ದಮೊದಲಹ ವಿಷಯಗಳನಱಿ |
ದುದ್ಧರಿಪ ಬುದ್ಧೀಂದ್ರಿಯಂಗಳ |
ನಿರ್ಧರಿಸಲೀ ತನುವಿಗವು ಕಾರಣವಲಾ ಎನಲು ||
ಶುದ್ಧವಹ ದೆಸೆಯಿಂದ ಸರಳಂ |
ತಿದ್ದುತಿರೆ ಲಕ್ಷ್ನಾಕ್ಷದಿಂ ಕೆಲ |
ಶುದ್ಧಿಗೇಳದು ಕರ್ಣವೇನ್ ಗುಣ ಪೇಳು ಸಚ್ಛಿಷ್ಯ || ೨೫ ||

ಆವ ವಿಷಯವ ಕುಱಿತು ಪರಮನ |
ದಾವಯಿಂದ್ರಿಯದೊಳ್ಪ್ರವೇಶಿಸಿ |
ತೀವಿಕೊಂಡಿರುತಿರಲು ಬಳಿಕುಳಿದಿಂದ್ರಿಯಾದಿಗಳು ||
ತಾವೆ ತಮ್ಮಯ ವಿಷಯದೊಳ್ಸಂ |
ಭಾವಿಸಿದ ಕಾರಣದಿ ಕೇಳಿ |
ನ್ನಾವ ಪರಿಯಿಂದಿಂದ್ರಿಯಂಗಳನಾತ್ಮನುಯವೆಂದ || ೨೬ ||

ತಂದೆ ಬೆಸಸೈ ಸಂಶಯಾದಿಗ |
ಳಿಂದ ವರ್ತಿಸುತಿಹಪರಂಗಳ |
ನೊಂದಿಸುವ ಕರಣಂಗಳೇ ಕಾರಣವಲಾ ಎನಲು ||
ಕಂದ ಕೇಳ್ ಕ್ರಮದಿಂದಲವು ಮಿಗೆ |
ಬಂದವಂ ಹೋದವನು ವಿಕ್ರಮ |
ದಿಂದಲಱಿವಂತಾಗಿ ಕರಣಂಗಳು ನಿರಾತ್ಮಕವು || ೨೭ ||

ಚೆಕ್ಕು ಬೇಂಟೆಯನಾಡುತಿರಲದ |
ಮಿಕ್ಕು ನೋಡುತ್ತಿಪ್ಪ ನರನಾ |
ಚೆಕ್ಕಹನೊ ಮೇಣ್ ಸಾಕ್ಷಿಯಹನೋ ದಿಟ ವಿಚಾರಿಸಲು ||
ಚಿಕ್ಕವನೆ ನೋಡಾ ಪರಿಯಲಂ |
ತಃಕರಣ ವಿಷಯಕ್ಕೆ ತಿಳಿಯಲ್ |
ದೃಕ್ಕಲ್ಲೈ ಪರಮಾರ್ಥದಿಂ ನೀನೆಂದ ದೇಶಿಕನು || ೨೮ ||

ಇಂತು ದೇಹಾಕ್ಷಾದಿಗಳಿಗೋ |
ರಂತೆ ನೀನನ್ಯೋನ್ಯನೆಂದರೆ |
ಮುಂತೆ ಪಿಂತೆ ವಿಚಾರವೇನುವ ಕಾಣದಳವಳಿದು ||
ಚಿಂತಿಸಲ್ತೊಡಗಿದನು ಬಳಿಕೊಲಿ |
ದಂತೆ ತನುವಾನೆಂದು ಭವದೊಳ್ |
ಭ್ರಾಂತುಗೊಂಡೆನಲಾ ಶಿವಾ ಯೆಂದೆನುತ ಹಳವಿಸಿದ || ೨೯ ||

ಅಕ್ಕಟೀ ದೇಹೋಹಮೆಂಬೀ |
ಕಕ್ಕುಲಿತೆ ಕೈಸಾರಿ ಕರ್ಮಕೆ |
ಸಿಕ್ಕಿದೆನಲಾ ಸೊಕ್ಕಿ ಮರ್ಕಟ ಕೀಲ ಕಿತ್ತಂತೆ ||
ಮಿಕ್ಕವರಿದು ವೃಥಾ ಭವಂಗಳ |
ತುಕ್ಕುತೆನ್ನ ಮಹತ್ವವೆಲ್ಲವ |
ಮುಕ್ಕಿಗಳದೆನಲಾ ಶಿವಾಯೆಂದೆನುತ ಹಳವಿಸಿದ || ೩೦ ||

ಸಾವ ಕುದುರೆಗೆ ಹುಲ್ಲನಡುಕಿದ |
ಧಾವತಿಯೆ ತಲೆಗಟ್ಟಿಹೋದಂ |
ತಾ ವಿಚಾರತೆಯಂತೆ ವಾಯದ ದೇಹವನು ನಾನು ||
ಓವಿ ನೆಱೆ ಮಮಕರಿಸಿ ನಾನಾ |
ಬೇವಸಕ್ಕೊಳಗಾಗಿಯಕಟ ದು |
ರ್ಭಾವಿಯಾದೆನೆಲಾ ಶಿವಾಯೆಂದೆನುತ ಹಳವಿಸಿದ || ೩೧ ||

ಮಳಲೊಳೆಣ್ಣೆಯ ಪಡೆವೆನೆಂಬವ |
ಬಳಲಿ ಬಱದಪ್ಪಂತವಿದ್ಯೆಯ |
ಹೊಳಹೆನಿಪ್ಪೀ ದೇಹದೊಳ್ಪಲವಱಸುತಿಪ್ಪೆನ್ನ ||
ತಿಳಿಹಿ ತನುವಾನಲ್ಲವೆಂಬುದ |
ಘಳಿಲನೊರೆದಿರಿ ಗುರುವೆ ಕೇಳ್ಕೀ |
ವಲದೊಳಾನಾರೆಂಬುದಂ ಕೃಪೆ ಮಾಡಬೇಕೆಂದ || ೩೨ ||

ಎಂದ ಮಾತನು ಕೇಳಿ ಹರುಷದೊ |
ಳಂದು ಬಳಿಕಾ ಶಿಷ್ಯನೊಳಗಿಂ |
ತೆಂದು ಚಿತ್ತಯಿಸಿದನು ಕೆಲ ಕೆಲ ವಿಷಯಗೋಚರರು ||
ಮಂದ ಮತಿಯಿಂ ತಮ್ಮಮಱೆದೀ |
ಬೆಂದ ತನುವಾನೆಂದಕಟ ಭವ |
ಬಂಧನಕ್ಕೊಳಗಾದರೆಂದನು ದೇಶಿಕೋತ್ತಮನು || ೩೩ ||

ಅದು ನಿಮಿತ್ತದಿ ಸೋಹಮೆಂದೆಂ |
ಬುದು ವಿಚಾರಿಸೆ ಸತ್ಯವಲ್ಲದೆ |
ತುದಿಗೆ ತನುವಾನೆಂಬುದಿದು ತಾ ಸತ್ಯವಲ್ಲೆಂಬ ||
ಹದನನಱಿದು ಮಮತ್ವವೆಲ್ಲವ |
ಕೆದಱಿ ಕೆಡಿಸುತ ತನ್ನನೇ ಶೀ |
ಘ್ರದಲಿ ತಿಳಿದುದು ಪಾರಮಾರ್ಥಿಕವೆಂದ ದೇಶಿಕನು || ೩೪ ||

ಮೋಹ ರಹಿತನೆ ಕೇಳು ನಾನೀ |
ದೇಹವಲ್ಲೆಂದೆನಲು ಮತ್ತೀ |
ದೇಹದೊಳ್ವ್ಯಾಪಿಸಿಯೆ ವಿಹರಿಸುತಿರ್ದುತತ್ತ್ವಸುವ ||
ನಾಹಮೆಂಬವನಾರು ಬಳಿಕಲಿ |
ಕೋಹಮೆಂಬವನಾರು ತುದಿಯಲಿ |
ಸೋಹಮೆಂಬವನಾವನೈ ಗುರನಾಥ ಹೇಳೆಂದ || ೩೫ ||

ಎಂದಡೀ ಜೀವತ್ರಯಗಳನು |
ಬಂಧವಱಿಯಲು ಬೇಹುದದಱಿಂ |
ದಂದವಾಯಿತು ನೀನು ಕೇಳ್ವೀ ಪ್ರಶ್ನೆಯಾಳಾಪ ||
ಮುಂದೆ ಪೇಳುವೆವೆಂದು ಮುದದಿಂ |
ಕಂದನಂ ಬೋಳೈಸಿ ಸದ್ಗುರು |
ವಂದು ಬಳಿಕಲಿ ತನ್ನೊಳಗೆ ತಾನೊಂದಿ ಸುಖಮಿರ್ದ || ೩೬ ||

ಬದುಕಿದೆಂ ಬದುಕಿದೆನು ನಗುರೋ |
ರಧಿಕವೆಂಬೀ ಶ್ರುತಿಮತವೆ ತ |
ಪ್ಪದು ಗೃಹಾಧಿಪನಂತೆ ತನಗಿದಿರಿಲ್ಲವಪ್ಪುದಱಿಂ ||
ಮುದದಿ ಮುಖ್ಯ ಪ್ರೀತಿಯಿಂ ಸ |
ರ್ವದೊಳು ಮಾಳ್ಪುದು ಸಹಜ ನಿಮಗೆಂ |
ದೊದವಿ ನುತಿಸಿದನಮಮ ಶಿಷ್ಯನು ದೇಶಿಕೋತ್ತಮನ || ೩೭ ||

ಇತಿ ಸದ್ಗುರುರಹಸ್ಯೇ
ಚತುರ್ವಿಂಶಕ ನಿರಸನನಾಮ
ತೃತೀಯೋಪದೇಶಂ ಮಂಗಳಂ
ಶ್ರೀ ಶ್ರೀ

ಚತುರ್ಥೋಪದೇಶಂ

ಶ್ರೀ ಗುರುವೇ ಗತಿ

[ರಾಗ–ದೇಶಿ–ಝಲ್ಲವಿ].

ಸಾದರದಿ ಜೀವತ್ರಯಂಗಳ |
ಭೇದಮಂ ಸ್ಫುಟವಾಗಿ ಮುದದಿಂ |
ಬೋಧಿಸಿದನಾ ದೇಶಿಕೋತ್ತಮನನಘ ಶಿಷ್ಯಂಗೆ || ಪದ ||

ಮಚ್ಚರದ ಕೆಚ್ಚಾಗಿ ಮದದೊ |
ಳ್ಪೆಚ್ಚು ಮೋಹದಿ ಮುಚ್ಚಿ ಲೋಭದಿ |
ಹೆಚ್ಚಿ ರೋಷದಿ ಮುಚ್ಚಿ ಕಾಮದೊಳ್ಕೈದ ಕಂಗೆಟ್ಟು ||
ಹುಚ್ಚುಗೊಂಡಿಹ ಲೌಕಿಕಾಂಗದೊ |
ಳೊಚ್ಚತಂಗೊಳ್ಳದ ಮಹಾತ್ಮರು |
ಸ್ವಚ್ಛವಾಗಿಯೆ ಕೇಳ್ವುದೀ ಸದ್ಗುರು ರಹಸ್ಯವನು || ೧ ||

ನಾಹಮೆಂದೇ ಸ್ವಪ್ನ ಕಲ್ಪಿತ |
ಕೋಹಮೆಂದು ಚಿದಾವಭಾಸನು |
ಸೋಹಮೆಂದೇ ಪಾರಮಾರ್ಥಿಕನಾದನದಱಿಂದ ||
ಊಹಿಸಲ್ಕಾ ಜೀವ ಮೂಱಱ |
ಗಾಹುಗಳ ನೀನಱಿವುದೆಂದು ವಿ |
ದೇಹರೂಪಂ ಬೆಸಸಿದಂ ಕೃಪೆಯಿಂ ನಿಜಾತ್ಮಜಗೆ || ೨ ||

ಎಂದ ಮಾತನು ಕೇಳಿ ವಿಸ್ಮಯ |
ದಿಂದಲೀ ಜೀವತ್ರಯಂಗಳು |
ವೊಂದು ದೇಹದೊಳಾವ ಪರಿಯಿಂದಾವ ಠಾವಿನೊಳು ||
ಒಂದನೊಂದಭಿಯೋಗವಾಗದೆ |
ಹೊಂದಿ ತೋಱುಸುತಿಪ್ಪ ವಿಧವಂ |
ತಂದೆ ಸದ್ಗುರುನಾಥ ಕರುಣಿಸಿ ಕಾಯಬೇಕೆಂದ || ೩ ||

ವರ ಕುಮಾರಕ ಕೇಳು ಜೀವಗ |
ಳಿರವೆ ತತ್ತತ್ಕರ್ಮ ಫಲದಿಂ |
ಪೊರೆದ ದೇಹದೊಳಿಪ್ಪವವ ನೀನಱಿವುದೆಂದೆನಲು ||
ಗುರುವೆ ನಾನದ ಬಲ್ಲೆನಾದರೆ |
ಶರಣುವೊಗುವೆನೆ ನಿಮಗೆ ಕೇಳೆಂ |
ದಿರದೆ ಬಿನ್ನಯಿಸಿದರೆ ಸದ್ಗುರುನಾಥನಿಂತೆಂದ || ೪ ||

ಕರ್ಮವೊಂದೇ ಮೂಱುತೆಱದಿಂ |
ಪೊಣ್ಮಿ ತೋಱುತ್ತಿಹುದವಿದ್ಯೆಯ |
ನೆಮ್ಮಿ ನಿಮಿಷದಿ ಜಡಜಡಾಜಡವಜಡವೆಂದೈದೆ ||
ಹಮ್ಮಿ ಹಸರಿಸುತಿಂತು ಜೀವನ |
ಧರ್ಮದಿಂ ಲಕ್ಷಿಸಿದವನಲಾ |
ಮರ್ಮವಂ ತಿಳಿಯೆನುತ ಸದ್ಗುರುನಾಥನಿಂತೆಂದ || ೫ ||

ಜೀವವೊಂದೇ ವ್ಯಾವಹಾರ |
ಕ್ಕೋವಿ ಮೂಱೆನಿಸಿದುದು ಸೋಯಂ |
ದೇವದತ್ತನೆನಿಪ್ಪ ಗುರುಮತದಂತೆ ಗತಿಮತಿಯ ||
ಭಾವದಂತಂಭೋಜಮಿತ್ರನ |
ಧಾವತಿಯ ತೆಱನಂತೆ ಕರ್ಮದಿ |
ತೀವಿ ಜೀವರು ಜೀವನಿಂ ಕರ್ಮತ್ರಯಗಳೆಂದ || ೬ ||

ಪಾವನಾತ್ಮಕ ಗುರುವೆ ಕೇಳ್ವೆ |
ಜೀವನಿಂ ಕರ್ಮಗಳು ಕರ್ಮದಿ |
ಜೀವರುಗಳೆಂದೆನ್ನೊಳಗೆ ಬೆಸಸಿದಿರಿ ಮತ್ತೀಗ ||
ಆವ ಕರ್ಮದೊಳಾವ ಜೀವನು |
ತೀವಿಕೊಂಡಿಹನೆಂಬ ಭೇದವ |
ನೋವಿ ಶೇಷಾಮಾತ್ರವಿಲ್ಲದೆ ಗುರುವೆ ಪೇಳೆಂದ || ೭ ||

ಬಾಲಕನೆ ಕೇಳ್ ಪಂಚಕೋಶದ |
ಮೇಳದಿಂ ಜಡ ದೃಶ್ಯ ದುಃಖಕ |
ರಾಳಿಯಿಂದಲಶುದ್ಧತರದಿಂದಿರದ ನಿತ್ಯದೊಳು ||
ಜಾಳಿಸಿದ ದೇಹವನು ತಾನೆಂ |
ದೂಳಿತದ್ಗಾತ್ರಾನುವಶದಿಂ |
ಕೀಲಿಸಿರಲುಂ ಸ್ವಪ್ನ ಕಲ್ಪಿತ ಜೀವನೆನಿಸಿದನು || ೮ ||

ಜಡವೆನಿಸಿಕೊಂಡಿತ್ತು ಚೇತನ |
ವಿಡಿದು ಶುದ್ಧವದಾಯ್ತು ಷಡುರಸ |
ವಿಡಿದಸತ್ಯವದಾಯ್ತು ರೂಪಿಗೆ ಬಂದು ದುಃಖವನು ||
ಕೊಡುವುದಾಗಿಯೆ ದುಃಖಕರದೊಳ |
ಗಿಡಿದಿಹುದು ಕಾಣಿಸಿಯೆ ದೃಶ್ಯದ |
ಗಡಣವಹುದೀ ದೇಹವೆಂದನು ದೇಶಿಕೋತ್ತಮನು || ೯ ||

ಮಸಿಯ ಹಿಡಿದವನಂತೆ ಪಾಪಿಯ |
ಶಿಶುವನೆತ್ತಿದನಂತೆ ಮೋಹಿಸಿ |
ವಿಷಮಯಾನ್ನವನುಂಬನಂತೀ ದೇಹ ತಾನೆಂದು ||
ವಿಷಯದೊಳ್ಕುಕ್ಕುರಿಸಿ ಮದದಿಂ |
ನೆಸದು ನಾನಾಭವ ಭಯಂಗಳ |
ನುಸುಳಿ ಬರುತಿಪ್ಪವನು ತಾನೇ ಸ್ವಪ್ನಕಲ್ಪಿತನು || ೧೦ ||

ಇಂತು ಜಡ ಕರ್ಮದೊಳು ವರ್ತಿಸೆ |
ಸಂತತಂ ಕೇಳ್ಸ್ವಪ್ನಕಲ್ಪಿತ |
ಮುಂತೆ ಕರ್ಮ ವಿಕಲ್ಪದಿಂ ತಾನೇ ಚಿದಾಭಾಸ ||
ನಂತೆ ತೋಱು ಜಡಾಜಡದೊಳ |
ಸ್ವಾಂತವಾಚರಿಸುವನೆನಲ್ಕವ |
ನಂತುವಂ ತಿಳಿಯೆನುತ ಸದ್ಗುರುನಾಥನಿಂತೆಂದ || ೧೧ ||

ಹಿರಿದು ಸುಕೃತವ ಹಿಂದೆ ಮಾಡೀ |
ಧರಣಿಪಂ ನಾನಾದೆನಿದಱೊಳ |
ಗಱುಯೆನೆಂದವಿಚಾರದಿಂದುನ್ಮತ್ತವೃತ್ತಿಯೊಳು ||
ವರವಿಧಾನವ ಭಾವಮಾಗಿರು |
ತಿರಲು ಮುಂದೆನಗ ಫಲವೆಂಬವ |
ನುರುಚಿದಾಭಾಸಕನು ಕೇಳೆಂದೊರೆದ ದೇಶಿಕನು || ೧೨ ||

ಸುದತಿಯರ್ನೆಲನೊಡವೆ ಮಕ್ಕಳು |
ತುದಿಗೆ ನೆರವಲ್ಲೆಂದು ತನ್ನೊಳ್ |
ಕುದಿದು ಕೋಟಲೆಗೊಂಡು ನಿಯಮವ್ರತ ತಪಃಕ್ರಿಯೆಯಿಂ ||
ಪುದಿದು ನಾಕಾಪೇಕ್ಷೆಯೆಂದಿರ |
ದೊದವಿ ತನುವಂ ದಂಡಿಸುಹವೆಂ |
ಬುದು ಚಿದಾಭಾಸಕನ ಮತವೆಲೆ ಕಂದ ಕೇಳೆಂದ || ೧೩ ||

ವ್ಯಾಪಕನೆ ಕೇಳ್ ಸ್ವಪ್ನಕಲ್ಪಿತ |
ಪಾಪಕರ್ಮದಿ ವರ್ತಿಸುತ ಮ |
ತ್ತೀ ಪರಿಯಲೀ ಪುಣ್ಯಕರ್ಮವ ತಾಳೆನೆಂದೆನಲು ||
ಪಾಪಕಾದಿಯೆ ಪುಣ್ಯಪುಣ್ಯಕೆ |
ಪಾಪವೇ ಮೊದಲಾಗಿ ಕಲ್ಪಿತ |
ವೀ ಪರಿಯಲಾದಂ ಚಿದಾಭಾಸಕನು ಕೇಳೆಂದ || ೧೪ ||

ಎನೆ ಚಿದಾಭಾಸನು ಜಡಾಜಡ |
ದನುವಿನಿಂ ವಿಹರಿಸುತ ತಾನಿರ |
ದನಿತಱೊಳಗೆಚ್ಚತ್ತು ಜಡಕರ್ಮಪ್ರವರ್ತನೆಯ ||
ಅನುಕರಿಸಿ ಕೇಳ್ ಪಾರಮಾರ್ಥಿಕ |
ನೆನಿಸಿ ವರ್ತಿಸುತಿಪ್ಪನೆನುತ |
ಲ್ತನಯನೊಳ್ ಬೆಸಸಿದನಖಂಡಾದ್ವಯ ರಸಾರ್ಣವನು || ೧೫ ||

ಹೊತ್ತಿಹೊಗವುದರಾನಲಗೆ ಹ |
ತ್ತೊತ್ತಿ ಮುಱುವ ಕಳತ್ರ ಸುತರಿಗೆ |
ಮುತ್ತಿ ಮುಸುಱುವ ಧಾತುಜಂಗಳಿಗ್ಯೆದೆ ಭವದೊಳಗೆ ||
ಸತ್ತು ಹುಟ್ಟುವ ಬೇವಸಕೆ ಬೇ |
ಸತ್ತು ತನ್ನೊಳು ಮೋಕ್ಷವಂ ಬಯ |
ಸುತ್ತಲಿಪ್ಪವ ಪಾರಮಾರ್ಥಿಕನೆಂದ ದೇಶಿಕನು || ೧೬ ||

ಇಹಕೆ ಪರವೇ ಲಕ್ಷ್ಯ ಪರಕೇ |
ಇಹವೆ ಪುನರಪಿ ಲಕ್ಷ್ಯಕರ್ಮಗ |
ಳಿಹಗೆ ತಮ್ಮೊಳು ತಾವೆ ಲಕ್ಷ್ಯಗಳಪ್ಪವೆಂದೆನುತ ||
ಇಹಪರಗಳೆಂಬುಭಯವಂ ನಿ |
ರ್ವಹಿಸಿ ತನ್ನೊಳು ಮೋಕ್ಷವಂ ಬಯ |
ಸುಹವದೇ ಕೇಳ್ ಪಾರಮಾರ್ಥಿಕ ಜೀವನನುಮತವು || ೧೭ ||

ಸದಮಲಾತ್ಮನೆ ಕೇಳು ಕರ್ಮದಿ |
ಪುದಿದು ಫಲಪದದಾಸೆಯಿಂ ಜ |
ನ್ಮದಿ ವಿತಸ್ಥಿತನಹ ಚಿದಾಭಾಸಂಗೆ ಮತ್ತೀಗ |
ಇದುಮಹಂಭಾವನೆಯಲಯಿಸಿದ |
ತುದಿಯ ಕೇವಲಮುಕ್ತಿ ವಾಂಛಿತ |
ಮದಯ ತಾನೆಹಗಾದುದೆಂದನು ದೇಶಿಕೋತ್ತಮಗೆ || ೧೮ ||

ತನಯ ಕೇಳ್ಬೈ ಕನಸಿನಿಂದಲಿ |
ಜನಿಸಿದೆಚ್ಚಱು ಕನಸನಳಿವಂ |
ತನಿತ ತಿಳಿಯಲವಿದ್ಯೆಯಿಂ ವಿದ್ಯಾನಲಂ ಜನಿಸಿ ||
ಘನತಮಸ್ಸಂಜನಿತ ಮಾಯಾ |
ವನವ ಸುಡದೆಹಗಹಗೆ ಚಿನ್ಮಾ |
ತ್ರನು ವಿವೇಕದಿ ಪಾರಮಾರ್ಥಿಕ ಜೀವನೆನಿಸಿದನು || ೧೯ ||

ತರಳ ಕೇಳದುಕಾರಣದಿ ನಿ |
ರ್ಧರಿಸಲೀ ಪರಮಾರ್ಥ ಜೀವಂ |
ಬೆರಸುವಂ ಪರಬೊಮ್ಮದೊಳಗುಳಿದಿರ್ದ ಜೀವಗಳು ||
ತಿರುಗುತಿಹವಶ್ರಾಂತ ಹಮ್ಮಿಂ |
ಪೊರೆದು ನಾನಾ ಯೋನಿಯೊಳು ವಿ |
ಸ್ತರಿಸಲೆಡೆಗುಡದ್ಯೆದೆ ತಿಳಿಯೆಂದೊರೆದ ದೇಶಿಕನು || ೨೦ ||

ಕಷ್ಟರುಜೆಯುಳಿದವನು ಸುಖಮಂ |
ಮುಟ್ಟೆ ಬಯಸುವ ತೆಱದಿ ಸಂಸೃತಿ |
ಗೆಟ್ಟ ಪರಮಾರ್ಥಿಕನು ಬೊಮ್ಮವ ಬಯಸುವಂತಾಗಿ ||
ನಿಟ್ಟಿಸಲಿಕವ ತಾನೆ ಬೊಮ್ಮದ |
ಘಟ್ಟೆಯಲ್ಲವೆ ಪೇಳೆನಲ್ ಕೃಪೆ |
ಹುಟ್ಟೆ ನಿಜಶಿಷ್ಯಂಗೆ ಸದ್ಗುರುನಾಥನಿಂತೆಂದ || ೨೧ ||

ತನುವ ತಾನಲ್ಲೆಂಬ ಮಾತ್ರದಿ |
ತನುಗುಣಂಗಳು ಸೋಂಕದಿಹವೇ |
ತನುವಿನೊಳಗಿಪ್ಪನ್ನ ದುಃಖವಿನಾಶಿ ದುರ್ವಿಷಯಿ ||
ಎನಿಸುತಿಹ ಕಾರಣದೊಳವ ಚಿ |
ದ್ಘನ ಪರಾಪರ ಬೊಮ್ಮವೆಂತಹ |
ನೆನುತ ನಿಜತನಯಂಗೆ ಪೇಳಿದ ದೇಶಿಕೋತ್ತಮನು || ೨೨ ||

ಅಕ್ಕಟಕ್ಕಟ ಹುಳಿತ ಶುದ್ಧಕೆ |
ದುಃಖವುಂಟೆ ನಾತಗೊಳ್ಪಗೆ |
ದುಃಖವಲ್ಲದೆ ತಿಳಿಯಲಂತೀ ದೇಹದೊಳು ಸಿಕ್ಕಿ |
ಕೊಕ್ಕರಿಸಿ ಕೊರಗುತ್ತ ದುಃಖ |
ಕ್ಕಿಕ್ಕೆಯಹ ಪರಮಾರ್ಥ ಜೀವನ |
ತರ್ಕ್ಯ ಬೊಮ್ಮಕ್ಕೆಂತು ಸರಿಯೈ ಮಗನೆ ಕೇಳೆಂದ || ೨೩ ||

ವಿಷಯಮುಂ ಚೇಷ್ಟಿಸುವ ಕಾರಣ |
ವಿಷಯಿಯೆನಿಸಿದನಿರವೆ ಭರದಿಂ |
ನಸಿದು ಕೆಡುವೀ ದೇಹವಿಡಿದು ವಿನಾಶಿಯೆನಿಸಿದನು ||
ಶಿಶುವೆ ಕೇಳದು ಕಾರಣದಿ ಷಡು |
ರಸಮಯಂಗಳ ನಾಶಿ ಬೊಮ್ಮ |
ಕ್ಕಸುರಲಹುದೇ ಪಾರಮಾರ್ಥಿಕ ಜೀವನೆಣೆಯೆಂದು || ೨೪ ||

ಎಂದ ಮಾತನು ಕೇಳಿ ಹರುಷದೊ |
ಳೊಂದಿ ಶಿಷ್ಯನು ದೇಶಿಕನನೊಲಿ |
ದಂದದಿಂ ಸದ್ಗುರುವೆ ಚಿದ್ಘನಗುರುವೆ ಮದ್ಗುರುವೆ |
ಹೆಂದದದ್ವಯ ಸುಖಗುರುವೆ ನಿ |
ಷ್ಪಂದ ಗುರುವೆ ನಿಜಾಂಕ ಗುರುವೆ ಸು |
ಖೇಂದ್ರ ಗುರುವೇ ಗುರುವೆಯೆನುತಿಂತೊಲಿದು ನುತಿಸಿದನು || ೨೫ ||

ಇತಿ ಸದ್ಗುರುರಹಸ್ಯೇ

ಜೀವತ್ರಯ ಭೇದನಾಮ

ಚತುರ್ಥೋಪದೇಶಂ ಮಂಗಳಂ

ಶ್ರೀ ಶ್ರೀ

ಪಂಚವೋಪದೇಶಂ

[ರಾಗ–ಶಂಕರಾಭರಣ–ಪಲ್ಲವಿ].

ಭಾ|| ಷ|| ವಾಸನೋದ್ರೇಕದಿ ವೃಥಾ ಪ್ರಾ |
ದೇಶಿಕತ್ವದಿ ಬಳಲುತಿರಲಾ |
ವಾಸನೆಯ ನಿರ್ವಾಸನೆಯ ಮಾಡಿದನು ದೇಶಿಕನು || ಪದ ||

ವೀತಕಲ್ಮಷರುಗಳು ವಿಷಯಗ |
ಳಾತುರಗಳಳಿದೈಕ್ಯ ಸುಖಿಗಳು |
ಜಾತಿ ವರ್ಣಾಶ್ರಮತಪೋವ್ರತವೆಂಬ ಭವದೊಡಕ |
ನೀತಿಗಳದು ನಿಜಾನುಭಾವದೊ |
ಳೋತು ಸುಖಿಸುತ್ತಿಹ ಮಹಾತ್ಮರು |
ಪ್ರೀತಿಯಿಂದಲಿ ಕೇಳ್ವುದೀ ಸದ್ಗುರುರಹಸ್ಯವನು || ೧ ||

ಸತ್ತು ಸದಸತ್ತಾಯ್ತು ತಿಳಿವಡೆ |
ಚಿತ್ತು ಚಿದಚಿತ್ತಾಯ್ತು ಮತ್ತಾ |
ನಿತ್ಯಸುಖವೇ ಸುಖವಸುಖವಾಯಿತ್ತು ವಾಸನೆಯಿಂ ||
ಯುಕ್ತಿಯಿಂದಾ ವಾಸನೆಯ ಕಿ |
ತ್ತೆತ್ತಿ ಕೆಡಿಸಲ್ಕೀ ಜಗವು ತಾ |
ಸತ್ತು ಚಿತ್ತಾನಂದರಸವೆಲೆ ಕಂದ ಕೇಳೆಂದ || ೨ ||

ರೂಪುನಾಮಗಳಿಂದ ವಾಸನೆ |
ಲೇಪಿಸಿಹುದು ತದಾಭಿಮಾನಾ |
ರೂಪದಿಂ ಪರಮಾತ್ಮನೀ ಸುಖದುಃಖವೃತ್ತಿಯೊಳು ||
ವ್ಯಾಪಿಸಿಯೆ ನಾನಾ ವಿಕಾರದ |
ಕೂಪದೊಳ್ಕುಕ್ಕುರಿಸಿ ಭವದೊಳು |
ಲೋಪನಾಗುತ್ತಿಪ್ಪನೆಲೆ ಸಚ್ಛಿಷ್ಯ ಕೇಳೆಂದ || ೩ ||

ಕನಸು ಕಲ್ಪನೆ ಶಂಕೆ ವಿಷರು |
ಗ್ವಿನಯ ಋಣಧನಪುಣ್ಯಪಾಪಗ |
ಳಿನಿತು ಶೇಷಾಮಾತ್ರದಿಂ ಪಸರಿಸಿಯೆ ಮಡಲಿಡುದು ||
ಘನತರಗಳಹವೆನಲಿಕಾ ವಾ |
ಸನೆಯ ಮಹಿಮೆಯನೇನ ಪೇಳುವೆ |
ತನಯ ಕೇಳೆಂದೊರೆದನಾ ಸದ್ಗುರುರಹಸ್ಯದಲಿ || ೪ ||

ಅದು ನಿಮಿತ್ತದಿ ವಾಸನೋದ್ರೇ |
ಕದಿ ಕಣಾ ಸಂಸಾರ ಸಂಭ್ರಮ |
ದುದಯವದಱಿಂ ಜನನ ಮರಣಸ್ಥಿತಿಗಳೆಂದೆಂಬ ||
ಹದನನಱಿದು ಮಹಾನುಭಾವ |
ಭ್ಯುದಯದಿಂ ವಾಸನೆಯ ಮೂಲವ |
ಕೆದಱಿ ಕೆಡಿಸುವನವನೆ ಜಾಣನು ಮಗನೆ ಕೇಳೆಂದ || ೫ ||

ಗುರುವೆ ಬಿನ್ನಹ ವಾಸನೆಯು ತಾ |
ತ್ವರಿಯವಾವುದು ಬೆಸಸೆನಲ್ಸ |
ತ್ಕರುಣದಿಂ ವಾಸನೆಯು ತಾನೇ ಮಾಯವಾ ಮಾಯಾ ||
ಸ್ಫುರಣೆಯೇ ಹಂಕೃತಿಯವರೊಳು |
ದ್ಗರಣೆ ತನ್ಮಾತ್ರಗಳು ತತ್ಪರಿ |
ಪರಿದು ಭೂತಂಗಳಿಗೆ ಭೂತೋತ್ಪಾತವೀ ಜಗವು || ೬ ||

ತಂದೆ ಚಿತ್ತಯಿಸಯ್ಯ ಬಳಿವಿಡಿ |
ದೊಂದಱಿಂದೊಂದೊಂದು ಕುಳಕಗ |
ಳೆಂದಡವಕೆಲ್ಲವಕೆ ಕಾರಣಭೂತವಾಗಿರ್ದ ||
ಚೆಂದವಾಸನೆಯಿಂ ಚಮತ್ಕೃತಿ |
ಯಿಂದಲಱಿದದ ತಿಂದು ತೇಗುವ |
ದಂದದನುಭವವಿತ್ತು ಕರುಣಿಸಿ ಕಾಯಬೇಕೆಂದ || ೭ ||

ಅಸ್ತಿ ಭಾತಿಪ್ರಿಯಸನಾಮ |
ಸ್ವಾರ್ತ್ಥರೂಪೆಂಬೈದಱೊಳು ಪೂ |
ರ್ವತ್ರಯಂ ಬ್ರಹ್ಮಾಂಶುಗಳು ಮಿಕ್ಕೆರಡು ಮಾಯಾಂಶ ||
ಪ್ರತ್ಯಗಾನುಭವಪ್ರಮಾಣದೊ |
ಳುತ್ತರಾಂಶಗಳಳಿಯಲುಂ ಪೂ |
ರ್ವತ್ರಯಂಗಳೊಳೊಂದುವವು ಸಚ್ಛಿಷ್ಯ ಕೇಳೆಂದ || ೮ ||

ನುಡಿಗಗೋಚರವಾಗಿ ತೋರ್ಪೀ |
ಯೆಡೆಯದೆರೆ ಘಟ ಕಟಕದಿಂದಿರ |
ದಡಗಿದುವು ಮೊದಲಪ್ಪ ಜಲ ಮೃದ್ರುಕ್ಮವೆಂತಂತೆ ||
ಜಡಮತಿಗಳೀ ನಾಮರೂಪಿನ |
ಬೆಡಗಿನೊಳ್ಬೆಱಗಾಗಿ ಬೊಮ್ಮವ |
ನೆಡಹಿಕಾಣರದೇನನೆಂಬೆನು ಸತ್ಯಸಂಭ್ರಮವ || ೯ ||

ದೇಶಿಕೋತ್ತಮ ಕೇಳು ಮಾಯಾ |
ವೇಷವಹತನುವಳಿವುದವಱಿಂ |
ಮೀಸಲಪ್ಪಂಶತ್ರಯಂಗಳಿ ನಿಲುವವೆಂದೆನಲು ||
ಆಸುರಕ್ರಿಯೆಯಿಂದ ತನುವಂ |
ಕೀಸಿ ಬಿಸುಡಲು ನೀವು ಪೇಳ್ದಾ |
ಶೇಷವಹ ಪರಬೊಮ್ಮನಿಲ್ಲವದೇಕೆ ಹೇಳೆಂದ || ೧೦ ||

ತನ್ನ ತನುವೆಂಬಾಗ ತನುವಿಂ |
ಗನ್ಯವಾಗಿಹ ತನ್ನ ನಱಿಯದೆ .
ಭಿನ್ನಭಾವಭ್ರಮೆಯ ಬಳಕೆಗಳಿಂದ ಮಮಕರಿಸಿ ||
ಗನ್ನಗತಕದೊಳಿರ್ದು ಭವದೊ |
ಳ್ಬನ್ನಬಡುವರೆ ಹೇಸದಿಹ ಸಾ |
ಮಾನ್ಯಮತಿಯಿಂದೇನು ಫಲ ಸಚ್ಛಿಷ್ಯ ಕೇಳೆಂದ || ೧೧ ||

ಘಟವ ಕಾಂಬ ಮನುಷ್ಯ ತಾನಾ |
ಘಟಕೆ ಹೊಱಗಹನೋ ವಿಚಾರಿಸೆ |
ಘಟವೆಯಹನೋ ಮರುಳೆ ಕೇಳ್ ಕಾರಣವ ಮಱೆದೆಯಲ ||
ಅಟಮಟ ಪ್ರಕಟಪ್ರಪಂಚಿಂ |
ನಟಿಸಿ ತೋರ್ವೀ ದೇಹಮುಂ ನೀ |
ದಿಟ ವಿಚಾರಿಸಿ ನೋಡಲಾನಲ್ಲೆಂದು ನಿಶ್ಚಯಿಸು || ೧೨ ||

ಕುಣಪಗಳು ಮುಂದಿರುತಿರಲು ಮ |
ತ್ತಣುಗಸತಿಯರ ಕಾಣೆನಕ್ಕಟ |
ಯೆಣಿಕೆಗೊಬ್ಬನೆಯಾದೆನೆಂದೆಂಬುಚಿತ ವಚನಗಳ ||
ಬಣಿತೆಯಂ ಭಾವಿಸಲು ಕರಕಂ |
ಕಣಕೆ ಕನ್ನಡಿ ಏತಕ್ಕೆ ನಿನ |
ಗೆಣೆಯದಾವುದು ಲೋಕದೊಳು ಪೇಳೆಂದ ದೇಶಿಕನು || ೧೩ ||

ಜಡಮತಿಗಳುಂಟೇ ವಿಚಾರಿಸಿ |
ನುಡಿದು ಪೇಳಲ್ಕೆನ್ನ ಮೀಱುವ |
ಪೊಡೆಯರುಂಟೇ ಬ್ರಹ್ಮಬೋಧೆಗೆ ನಿಮ್ಮನತಿಗಳೆವ ||
ತಡಗಡಿದೆ ನಿಮ್ಮಿಂದಹಮ್ಮಂ |
ಪೊಡವೆ ಕರ್ಮದ ಬಾಯನೆಂದು |
ಗ್ಘಡಿಸತೊಡಗಿದನಮುನ ಹರುಷೋತ್ಕರುಷವಾಪರಿಸೆ || ೧೪ ||

ಪಾಹಿ ಚಿತ್ಕಬಳೀಕೃತಾಂಗನೆ |
ಪಾಹಿ ಚಿದ್ಘನಸಾರಗೌರನೆ |
ಪಾಹಿ ಚಿತ್ಪರಿಪೂರ್ಣ ಮಹಿಮಾರ್ಣವ ಸುಧಾಕರನೆ ||
ಪಾಹಿ ಚಿತ್ಕಮಳಾರ್ಕತೇಜನೆ |
ಪಾಹಿ ಚಿದ್ಗಗನಸ್ವಭಾವನೆ |
ಪಾಹಿ ಸದ್ಗುರು ಬಸವ ಮಹದೈಕ್ಯಾಂಗ ಮಾಂ ಪಾಹಿ || ೧೫ ||

ಇತಿ ಸದುರುರಹಸ್ಯೇ

ವಾಸನೋದ್ರೇಕನಿರಸನಂ ನಾಮ

ಪಂಚಮೋಪದೇಶಂ

ಷಷ್ಠೋಪದೇಶಂ

[ರಾಗ-ಮಾಲಹರಿ-ಪಲ್ಲವಿ]

ಭಾ॥ ಷ॥ ಮನದ ಗುಂಪಂ ಕೆಡಿಸಿ ಭವದೊಳು ।
ಜಿನುಗುತಿಹುದಂ ಬಿಡಿಸಿ ನಿಶ್ಚಲ ।
ದನುವಿನಿಂ ನೆಲೆಗೊಳಿಸಿದನು ಶಿಶುವಂ ಗುರೂತ್ತಮನು ॥ ಪಡ ॥

ಹಿಂದೆ ಮಾಡಿದ ಸುಕೃತ ದುಷ್ಕೃತ ।
ದಿಂದಲೀ ತನುವೆನಗೆ ಲಭಿಸಿ ।
ತ್ತೆಂದು ತನ್ನೊಳು ತಾನಿರದೆ ಪರಮಾರ್ಥದಿಂ ತಿಳಿದು ॥
ಬಂಧನಕ್ಕಾಸ್ಪದವಿದೆಂದೀ ।
ಬೆಂದ ಕರ್ಮವನಳಿದ ಪರಮಾ ।
ನಂದ ಸುಖಿಗಳು ಕೇಳ್ವುದೀ ಸದ್ಗುರು ರಹಸ್ಯವನು ॥ ೧ ॥

ಸೃಷ್ಟಿಮಯುವಹ ನಾಮರೂಪಂ ।
ಮುಟ್ಟಿ ವಿಹರಿಸುತಿರ್ಪ ಮನದಿಂ ।
ಹುಟ್ಟಿ ಹೊಂದುವ ಪರಮ ಬಾರದ ಬಟ್ಟೆಯೊಳು ಬಂದು ॥
ಕೆಟ್ಟೆನೆಂಬುದನಱಿದು ಬಳಿಕಾ ।
ದುಷ್ಟಮನಮಂ ಗುರುರಹಸ್ಯದಿ ।
ನಿಟ್ಟೊರಸಲುಂ ಸರಮ ಪರತಃಪರವೆಯಾಗಿಹನು ॥ ೨ ॥

ಮನದ ಸಂಚಲದಿಂದ ಸಂಸೃತಿ ।
ಜನಿಸಿತ್ತೈ ಲಹರೀತರಂಗದಿ ।
ಮನದ ಸಂಚಲವಳಿಯಲಾ ಸಂಸೃತಿಯ ಸಡಗರವು ॥
ಇನಿತು ತೋಱಿಕೆಯಿಲ್ಲ ಮಧ್ಯಂ ।
ದಿನದಿನನ ತೆಱನಂತೆ ಕೇಳೆಂ ।
ದೆನುತ ನಿಜತನಯಂಗೆ ಪೇಳಿದ ದೇಶಿಕೋತ್ತಮನು ॥ ೩ ॥

ಕರ್ಮಯೋಗಾಭ್ಯಾಸದಿಂದಲಿ ।
ನಿರ್ಮಲರ ಸತ್ಸಂಗದಿಂದಲಿ ।
ವರ್ಮಬೋಧಾದೀಕ್ಷೆಯಿಂದೆಂತಾದಡೀ ಮನವ ॥
ನಿರ್ಮಿಸಿಯೆ ನಿಜತತ್ವದೊಳು ತನು ।
ಧರ್ಮವಂ ನೀಗಾಡಿ ಬಳಿಕಲಿ ।
ಸುಮ್ಮನಿರುತಿಹನಾವನವನು ಮುಮುಕ್ಷುವಹನೆಂದ ॥ ೪ ॥

ಹರಹರಾ ಮನವೆಂಬ ಮಾರಿಯ ।
ಹುರಿಹುಗಿಲಿನಿಂದಾನು ಭವದೊಳು ।
ತಿರುಗುತಿರ್ದೆನಲಾಯೆನುತ ಬೆಱಗಾಗುತಾ ಮನವ ॥
ನಿರಸನವ ಮಾಡುವರೆ ಮನದಾ ।
ಚರಣೆಯೆಂತುಟದೆಲ್ಲಿಹುದು ತ ।
ತ್ಕುಱುಹದಾವುದು ಬೆಸಸೆನಲ್ಕಿಂತೆಂದ ದೇಶಿಕನು ॥ ೫ ॥

ಅಱಿವೆಯೊಳ್ಮನವಿಲ್ಲ ಕೇವಲ ।
ಮಱವೆಯೊಳ್ಮನವಿಲ್ಲದೆಂತೆನ ।
ಲುಱುವ ಜಾಗ್ರಸುಷುಪ್ತಿಯೊಳ್ಕನಸಿಲ್ಲವೆಂತಂತೆ ॥
ಅಱಿವು ಮಱವೆಯ ಬೆರಕೆಯೊಳಗಾ ।
ಬಱಿಯ ಜಾಗ್ರಸುಷುಪ್ತಿವೆರಕೆಗ ।
ಳಿಱುಬಿನೊಳು ತೋಱುವವು ಮನಕನಸೆಂದ ದೇಶಿಕನು ॥ ೬ ॥

ಎನಲು ಸಮ್ಯಗ್ಗೋಚರೀ ಕೃತ ।
ಮನವನಾತ್ಮವನಾತ್ಮವೆಂಬುದು ।
ಮನವ ವಸ್ತುವ ವಸ್ತುವೆಂಬುದು ಮನ ವಿಚಾರಿಪಡೆ ॥
ನೆನಹಿನೊಳ್ನೆನಹಪ್ಪುದದು ಮನ ।
ತನುವಿನೊಳ್ತನುವಪ್ಪುದದು ಮನ ।
ವಿನಿತು ಗುಣವುಳ್ಳುದು ಕಣಾ ಮನವೆಂದ ದೇಶಿಕನು ॥ ೭ ॥

ಮನವೆ ತತ್ವಿದ್ವಾದನಾತ್ಮಕ ।
ನೆನಿಸಿ ತನುವಾಯಿತ್ತದೆಂತೆನೆ ।
ಮನಬರಲ್ಕಿದಮೆಂಬ ದೇಹಕ್ಕುಂಟು ವಿಹರಣೆಯು ॥
ಮನವೆ ತಾ ಬರದಿರಲು ತನುವಿಂ ।
ಗಿನಿತು ವಿಹರಣೆಯಿಲ್ಲವದಱಿಂ ।
ಮನವೆನಲ್ತನು ತನುವೆನಲ್ಮನ ಕೇಳು ಸಚ್ಛಿಷ್ಯ ॥ ೮ ॥

ಮನವೆನಲ್ತನು ತನುವೆನಲ್ಕಾ ।
ಸನೆಯು ವಾಸನೆಯೆನಲು ಜಗ ಜಗ ।
ವೆನಲು ತಾನೇ ನಾಮರೂಪುಗಳಿಂತು ತನ್ನೊಳಗೆ ॥
ಇನಿತು ಭೇದಾಮಾತ್ರವಿಲ್ಲದೆ ।
ಕನಸಿನಿಂದಲಿ ಹಬ್ಬಿ ತೋರ್ಕಾ ।
ಮನವನಳಿಯಲು ತೋಱಲಿಲ್ಲೆಲೆ ಮಗನೆ ಕೇಳೆಂದ ॥ ೯ ॥

ಬೆಗಡನಿಕ್ಕಿತು ಬೊಮ್ಮವಾದಿಗೆ |
ನಗೆಗೆಡೆಯ ಮಾಡಿತ್ತು ಮೌನಿಗೆ |
ಹಗಲುಗತ್ತಲೆಯಾಯ್ತು ವೇದವಿದರ್ಗೆ ತಾಪಸಗೆ ||
ತಗಹನಿಕ್ಕಿತು ಸಿದ್ಧಸಾಧಕ |
ರುಗಳಿಗಗಣಿತವಪ್ಪುದೀ ಮನ |
ಮಗನೆ ಕೇಳ್ಕೊಗಿದರೆ ಹೆಚ್ಚುವ ಕೋಟಿಯಂದದಲಿ || ೧೦ ||

ಉಪಮಿಸಲ್ಕೀನೆಂಬ ಮನಮುಂ |
ಜಪವಿಧಾನ ವಿಶಿಷ್ಟತಪದಿಂ |
ವ್ಯಪಗತವ ಮಾಡಲ್ಕದೇನೊಂದರಿದೆ ಹೇಳೆನಲು ||
ಅಪುನನದ್ವಯನನಘನಘಟಿತ |
ನಪರಿಮಿತನದ್ವಯನಸಾಧ್ಯಂ |
ಕೃಪೆಯ ಮಾಡಿಯೆ ಬೆಸಸಿದಂ ಶಿಶುವಿಂಗೆ ನಸುನಗುತ || ೧೧ ||

ಎಲೆ ಮರುಳೆ ಕೃತ್ರಿಮದ ಸರ್ಪನ |
ತೊಲಗಿಸಲು ದುಂದುಭಿಯ ಹೊಯ್ದರೆ |
ಹೊಳಕಲಹುದೇ ಮಗನೆ ಎನುತ ಕೃಪಾರ್ದ್ರಚಿತ್ತದಲಿ ||
ತಿಳಿಯಲಿಲ್ಲದ ಮನವ ತಿಳಿವಿಂ |
ದಳಿಯದೀ ಯೋಗಾಂಗ ವಿಧಿಯಿಂ |
ತಲೆಯ ತಾಟಸಿಕೊಂಡರಹುದೇ ಮಗನೆ ಕೇಳೆಂದ || ೧೨ ||

ಬೆಟ್ಟವೆನಗಿದಿರುತ್ತರಂಗಳ |
ಕೊಟ್ಟತೆಂದಾಕ್ಷೇಪದಿಂ ಮೊಱೆ |
ಯಿಟ್ಟು ಹಲರಂ ನೆರಹಲಲ್ಲಿಯ ಹಿರಿಯರಾ ಗಿರಿಯ ||
ಕೆಟ್ಟು ಬೈದರೆ ಬೈಯ್ಯಿತಿಂತಿದು |
ದೃಷ್ಟವಾಯಿತ್ತೆಂದು ಗಿರಿಯಂ |
ಹಿಟ್ಟುಗುಟ್ಟಿದರೇನನೆಂಬೆನು ಬಯಲ ಬಳಲಿಕೆಯ || ೧೩ ||

ಗುಮ್ಮನೆಂದರೆ ಬಾಲಕನು ತಾ |
ಹಮ್ಮಯಿಸಿ ಕೆಡುವಂತವಿದ್ಯೆಯ |
ನೆಮ್ಮಿದುದ್ಭ್ರಾಮಕರುಗಳ್ಮೊದಲಿಲ್ಲದೀ ಮನದ ||
ವರ್ಮ ಕರ್ಮವನಱಿವೆವೆನುತವೆ |
ತಮ್ಮ ಕಲ್ಪನೆಯಿಂದ ತಾವೇ |
ಉಮ್ಮಳಿಸುತಿಹರೇನನೆಂಬೆನು ಬಯಲ ಬಳಲಿಕೆಯ || ೧೪ ||

ಕಲ್ಪನೆಯಲಿಂತೊಗೆದ ಮನವ ವಿ |
ಕಲ್ಪದಿಂದಪ್ಪಳಿಸದಂತದ |
ನೊಪ್ಪವಿಟ್ಟು ವಿವಾದದಿಂ ಮನವಂ ವೃಥಾ ನಿಶಿಯ ||
ಕಪ್ಪುಗೊರಡಂ ಕಂಡು ತಸ್ಕರ |
ನಪ್ಪನೆಂದವಿವೇಕಿಗಳ್ಕಟ |
ಹೆಪ್ಪಳಿಸಿದರದೇನನೆಂಬೆನು ಬಯಲ ಬಳಲಿಕೆಯ || ೧೫ ||

ಚೋರ ಮುನ್ನುಂಟಾಗಿ ಕೊರಡಂ |
ಚೋರನೆಂಬರು ಮುನ್ನಲಿಲ್ಲದ |
ಚೋರನಂ ದಿಟವೀಗ ಕೊರಡೊಳ್ತೋಱಲಿಲ್ಲಾಗಿ |
ಪಾರಮಾರ್ಥದಿ ಮನವು ಮುನ್ನ ವಿ |
ಚಾರಿಸಲ್ಕಿನಿತಿಲ್ಲದಿರ್ದಡೆ |
ತೋಱಲೆಂತೀಗೆನ್ನೊಳೆಲೆ ಗುರುನಾಥ ಹೇಳೆಂದ || ೧೬ ||

ಅಹುದು ನೀನಹುದಮಮ ಪ್ರಶ್ನೆಯ |
ನಿಹಿಗೆ ಮಾಡಲು ಬೇಡವೇ ನಾ |
ನೆಹಗೆ ಹೇಳಿದರಹಗೆ ತಪ್ಪದೆನುತ್ತಲುಂ ಬಱದೆ ||
ಸೊಹೆಗೆ ಕೇಳದೆ ಬಳಿವಿಡಿದು ತ |
ದ್ವಿಹಿತವಾಗಿಯೆ ವರ್ಮವಂ ಮು |
ಟ್ಟುಹವಿದಚ್ಚರಿಯೆನುತ ಶಿಶುವಂ ನುತಿಸುತಿಂತೆಂದ || ೧೭ ||

ಮುನ್ನ ಮನವುಂಟಾಗಿ ಬಳಿಕಲಿ |
ನಿನ್ನೊಳುಂಟೇ ತಿಳಿಯೆ ಮೊದಲೊ |
ಳ್ನಿನ್ನೊಳುಂಟೆಂದಱಿದು ಬಳಿಕಲಿ ಮುನ್ನಲುಂಟೆಂದು ||
ನಿನ್ನೊಳಱಿದೆಯೊ ಮಗನೆ ಹೇಳೆನೆ |
ಮುನ್ನಲುಂಟಾಗಿಪ್ಪ ಮನದಿಂ |
ದೆನ್ನೊಳುಂಟಲ್ಲದೆ ವೃಥಾ ಮತ್ತೊಂದನೆನಲಹುದೆ || ೧೮ ||

ವಿಕಳಗೊಂಡೆಯೊ ಮರುಳೆ ಕೇಳಾ |
ಶಕನ ಕಾಲದೊಳುಳ್ಳ ಹುಚ್ಚಿನ |
ಲಕಟ ಧೂರ್ತಫಲಂಗಳಂ ಸೇವಿಸಿದ ತನ್ನೊಳಗೆ ||
ಪ್ರಕಟಿಸಿರದೇಕದು ನಿಮಿತ್ತಂ |
ಸ್ವಕತಮಸ್ಸಂಜನಿತವಲ್ಲದೆ |
ಮಕರಿಸಲ್ಮನ ಮುನ್ನಲುಂಟೇ ಮಗನೆ ಕೇಳೆಂದ || ೧೯ ||

ಜಡ್ಡುಮತಿಗಳು ಪಾರಮಾರ್ಥದ |
ಛಡ್ಡೆಯಿನಿತಿಲ್ಲದರು ಕರ್ಮದ |
ಜಿಡ್ಡಿನೊಳು ಜಿನುಗುವ ಬಹಿರ್ಮುಖರುಗಳು ಭವಭವದ ||
ಹೆಡ್ಡರೆಲ್ಲರು ನೆರೆದು ತಮ್ಮೊಳ |
ಗಡ್ಡನೀಳಕೆ ತೆಗೆದು ಮನವಂ |
ದೊಡ್ಡಿತೆನಿಸಿದರೇನನೆಂಬೆನು ಬಯಲ ಬಳಲಿಕೆಯ || ೨೦ ||

ಕೇಳು ರಜಕೀ ಶೋಕದೊಲು ಮನ |
ಹೇಳಹೇಳಲು ದೊಡ್ಡಿತಾಗಿಯೆ |
ಭಾಳನೇತ್ರಾದಿಗಳನೇಡಿಸಿ ಕಾಡಿತೆಂದೆನಲು ||
ಕಾಳುಮತಿಗಳನಾರುಬಲ್ಲರು |
ಬಾಲಕನೆ ಕೇಳೆಂದು ಗುರು ಸ |
ಲ್ಲೀಲೆಯಿಂ ಸೂಚಿಸಲಿಕಿಂತೆಂದಂ ಗುರೂತ್ತಮಗೆ || ೨೧ ||

ಅಸಮಬಲ ಚಿತ್ತೈಸು ಮನಮಂ |
ವಿಷಮನೇತ್ರಂಗಳಿಯಲರಿದೆನೆ |
ಮುಸಕಮಯಮಪ್ಪೆನ್ನನಾರ್ಬಲ್ಲರು ವಿಚಾರಿಪೊಡೆ ||
ಬೆಸಸುವರೆ ಮನವಳಿವುದೊಂದಂ |
ಬೆಸಸಿ ನೀವೆನಗಲ್ಲದಿರಲೀ |
ಕೊಸಱಿಗಿನ್ನಾನಾಱೆನೆಂದನು ದೇಶಿಕೋತ್ತಮಗೆ || ೨೨ ||

ಹರಿವ ನೀರೊಳಗಹಿಯ ಗತಿಯಂ |
ಪರಿಕಿಸುವ ತೆಱನಂತೆ ಮನದಾ |
ಚರಣೆಯೆಂಬುದು ದೇಹದೊಳಗಂತಾಗಿ ನಿನಗಾನು ||
ಒರೆದೊರೆದು ಹೇಳಿದರೆ ನಿನಗಿಂ |
ತುಱುಸದಿಪ್ಪೀ ಮನವ ನೆಮ್ಮಿಂ |
ದಱುಹಬೇಕೆಂದೆನುಹವನುಚಿತವೆಂದ ದೇಶಿಕನು || ೨೩ ||

ಹಿರಿದು ಬಡವನ ಮಗಳ ಪೃಥ್ವೀ |
ಶ್ವರನು ತಂದಂತಕ್ಕಟಕ್ಕಟ |
ಬೆಱೆಯಬಾರದು ಹಮ್ಮುಸುಮ್ಮನಿರಲ್ಕುದಾಸೀನ ||
ಪರಿಹರಿಸಲಳವಲ್ಲವಾ ಪರಿ |
ಗುರುವೆ ನಿಮ್ಮಯ ಕರುಣವೆನ್ನಯ |
ಹರಣವಲ್ಲದೆ ಬೇಱೆ ಮಾತಿನ್ನೇಕೆ ಹೇಳೆಂದ || ೨೪ ||

ಅರಸು ಮುನಿದಾಳಿಂಗೆ ನಾಡೆ |
ಲ್ಲರು ಮುನಿದ ಬಡವೊಕ್ಕಲಿಂಗುಱೆ |
ಪುರುಷಮುನಿದ ಕಳತ್ರಕಕ್ಕಟ ಬೇಱೆ ಗತಿಯುಂಟೆ ||
ಗುರುವೆ ನೀವೆನ್ನೊಳಗೆ ಮುನಿದರೆ |
ಪರಿಹರಿಸ ಗತಿಯುಂಟೆ ಹೇಳೆಂ |
ದಿರದೆ ಚರಣದ ಮೇಲೆ ಬಿದ್ದಂ ದೈನ್ಯಪರನಾಗಿ || ೨೫ ||

ಶಿರಬಿಗಿದು ಬೆಮರೊಗೆದು ಕಂಬನಿ |
ಸುರಿದು ತನು ಘಾಡೈಸಿ ಪುಳಕಂ |
ಹುರಿಯೊಡೆದು ಹೊಯಿವಳ್ಳಿಯಿಂದುಸಿರಿಕ್ಕುತುಬ್ಬಸದಿಂ ||
ಪರಿಹರಿಸಲರಿದೆನಿಸಿ ಕಂಪಂ |
ದೊರೆಕೊಳುತ್ತಿರೆ ಬಳಿಕ ಶಿಶುವಂ |
ಕರಗಳಿಂ ಮೊಗದೆತ್ತಿದಂ ಭರದಿಂದ ದೇಶಿಕನು || ೨೬ ||

ಪರನುಪುರುಷನು ನೀನಲ್ಲೈ ಸ |
ದ್ಗುರು ಪರಾಯಣ ನೀನಲ್ಲೈ ಮ |
ತ್ಸರಮದಾಹಂಕಾರರಹಿತನು ನೀನಲ್ಲೈ ಎನುತ ||
ಪೊರಸುವೆನು ಸಂಹರಿಸುವೆನು ಕೇಳ್ |
ಪರದೊಳಾ ಮನವೆನ್ನ ಮುಂದಿ |
ನ್ನಿರಬಹುದೆ ನೋಡೀಗಲೆನುತಿಂತೆಂದ ದೇಶಿಕನು || ೨೭ ||

ಉಳುಮೆ ತೋಱಿಕೆ ಸತ್ಪ್ರಿಯಂಗಳ |
ಬಳಸಿಕೊಂಡಿಹ ನಾಮರೂಪಂ |
ತಿಳಿದು ಮಾಯಾಂಶಂಗಳೆಂದವನುಳಿದು ಗುರುಮತದಿಂ ||
ಒಳಗೆ ಸಚ್ಚಿತ್ಸುಖಪದಾರ್ಥದೊ |
ಳಳವಡಿಸಿ ಮನಮಂ ಸದಾಸಂ |
ಚಲಿಸದಿರು ನೀನೆಂದು ಪೇಳಿದ ದೇಶಿಕೋತ್ತಮನು || ೨೮ ||

ತುದಿಯವೆರಡಂಶವನುಪೇಕ್ಷಿಸಿ |
ಮೊದಲ ಸಚ್ಚಿತ್ಸುಖದಿ ಮನವಂ |
ಹುದುಗೊಳಿಸಿ ಕಲಿತಂಗೆ ಸರ್ವವಿರಕ್ತಿಯಳವಟ್ಟು ||
ಇದಮಹಂಬುದ್ಧಿಯನು ವಹಿಸಿಯೆ |
ಹದುಳವಿಪ್ಪುದು ಮನವು ಗೋಸ್ತ್ರಂ |
ಭದೊಳು ಸಿಕ್ಕಿದ ಕಾಕನಂತುಟು ಮಗನೆ ಕೇಳೆಂದ || ೨೯ ||

ಬಳಿಕಲಾ ಕಾಲದಲಿ ಸಚ್ಚಿ |
ತ್ಸುಲಲಿತಾನಂದಾದ್ವಯಾಮೃತ |
ಜಲಧಿಯೊಳ್ಮುಳುಗಲ್ನಿವಾತ ಜ್ಯೋತಿಯಂದದಲಿ ||
ಬೆಳಗುತಿಹುದು ಮನಃಕರಣ ಸಂ|
ದಳಿದುಳಿದು ತನ್ನೊಳಗೆ ತಾನೇ |
ಬಳಸಿಕೊಂಡುಱ್ ತುಂಬಿ ತುಳುಕದೆ ಮಗನೆ ಕೇಳೆಂಪ || ೩೦ ||

ಎಂದ ಮಾತನು ಕೇಳಿ ಪರಮಾ |
ನಂದವೃಂದೋತ್ಸಾಹದೊಳು ತಾ |
ಸಂದಳಿದು ಸಮ್ಯಕ್ ಶಿವಾನುಭವ ಪ್ರಮಾಣದೊಳು ||
ನಿಂದು ಸರ್ವಭ್ರಾಂತನಳಿದುಳಿ |
ದಂದು ಬಳಿಕಲಿ ಗುರುವರೇಣ್ಯನ |
ಚಂದಚಂದದಿ ನುತಿಸುತಿರ್ದನನನ್ಯ ಭಾವದೊಳು || ೩೧ ||

ಹಿಟ್ಟುಗುಟ್ಟಿದೆ ಮನವ ಕರ್ಮದ |
ಕಟ್ಟೆಹಱಿದೆನು ಬಳಿಕ ಜನ್ಮದ |
ತೊಟ್ಟೆಕಳಚಿದೆನಮಮ ಮಾಯೆಯೆನಿಪ್ಪ ವೇಶಿಯನು ||
ಅಟ್ಟಿಯಾಡಿದೆ ಸರ್ವಶಂಕೆಯ |
ಸುಟ್ಟೆನಿಮ್ಮ ಸುಧಾಸಮೇತದ |
ದೃಷ್ಟಿಮಾತ್ರದೊಳೆಂದು ಪೇಳಿದ ದೇಶಿಕೋತ್ತಮಗೆ || ೩೨ ||

ಇತಿ ಸದ್ಗುರುರಹಸ್ಯೇ
ಮನೋನಿರೂಪಣಂ ನಾಮ
ಷಷ್ಠೋಪದೇಶಃ
ಶ್ರೀ ಶ್ರೀ

ಸಪ್ತಮೋಪದೇಶಂ

[ರಾಗ-ಭೈರವಿ-ಪಲ್ಲವಿ]

ಭಾ|| ಪ|| ಚಿತ್ತಿನೊಳು ಪ್ರತಿಬಿಂಬಿಸಿರುತಿಹ |
ವೃತ್ತಿಯಂತುವನಱುಹಿ ಶಿಷ್ಯಗೆ |
ವಸ್ತುನಿರ್ದೇಶವನು ಪೇಳಿದ ದೇಶಿಕೋತ್ತಮನು || ಪದ ||

ಸದಮಲಾತ್ಮಕರುಗಳು ಸದ್ಗುರು |
ಪದಪಯೋರುಹನಿಷ್ಠರುಗಳೊದ |
ವಿದ ತಮಸ್ಸಂಜನಿತ ಮಾಯಾಮಥನ ಕಾರಣರು ||
ಹೃದಯದೊಳಗೇನೊಂದ ನೆನೆಯದೆ |
ಪದುಳವಿಪ್ಪ ಮಹಾನುಭಾವ |
ರ್ಮುದದಿ ಕೇಳುವುದೀ ಮಹಾ ಸದ್ಗುರು ರಹಸ್ಯವನು || ೧ ||

ತನುವ ತಾನೆಂಬನ್ನ ಬರಲೀ |
ಜನನ ಮರಣವನಳಿಯಬಾರದು |
ಜನನ ಮರಣವನಳಿಯದಿರಲೀ ಪುಣ್ಯಪಾಪಗಳ ||
ಅನುವಿಡಿಯಬೇಕವಱ ದೆಸೆಯಿಂ |
ತನಗೆ ದುಃಖಗಳಹವು ಪುನರಪಿ |
ಜೆನುಗುತಿಪ್ಪನುಭವದೊಳವ ಕೇಳೆಂದ ದೇಶಿಕನು || ೨ ||

ತುನುವಿಡಿದ ಕಾರಣದೊಳೆನಗೀ |
ಜನನಮರಣಗಳಾದುವಲ್ಲದೆ |
ತನುಗೆಡಲ್ಕನನಾದಿಗಳ್ತಾವಿಲ್ಲವಪ್ಪುದಱಿಂ ||
ತನುವನಳಿಯಲು ಬೇಕು ಬೇಹರೆ |
ಘನಗುರುವೆ ನಿಮ್ಮಿಂದಲಲ್ಲದ |
ಡೆನಗೆ ಶಕ್ಯವೆ ಪೇಳೆನಲ್ಕಿಂತೆಂದ ದೇಶಿಕನು || ೩ ||

ದೇಹವಿದು ನಾನೆಂದಜಸ್ರಂ |
ಮೋಹಿಸುತ್ತಿರಲಿಪ್ಪುದೀ ತನು |
ದೇಹವಿದು ನಾನಲ್ಲ ಶುದ್ಧಜ್ಞಾಪ್ತಿಯಾನೆನಲು ||
ಹೋಹುದಾ ಕ್ಷಣಬಿಟ್ಟ ಸತಿಯಂ |
ತೋಹೊ ದೇಹವಿದಿಂತಿದಕೆ ಸಂ |
ದೇಹವಿಲ್ಲ ಕಣಾಯೆನಲ್ಕಿಂತೆಂದ ದೇಶಿಕನು || ೪ ||

ಗುರುವರಿಯ ಚಿತ್ತಯಿಸು ದೇಹದೊ |
ಳಿರುತಲಾ ಸುಜ್ಞಾನಿಯಾದರೆ |
ಪರಿಹರಿಸಲೆಂತಯ್ಯ ಮುಟ್ಟುವ ದೇಹ ಗುಣಗಣವ ||
ಬಱಿದೆ ಬಳಲಿಸಬೇಡವೆನಗಿದ |
ನಱುಹ ಬೇಕೆಂದೆನುತ ಗುರುವಿಂ |
ಗಿರದೆ ಬಿನ್ನಯಿಸಿದರೆ ಸದ್ಗುರುನಾಥನಿಂತೆಂದ || ೫ ||

ನಿನ್ನ ಭೋಗಾಸಕ್ತಿ ಕೆಡದಿ |
ಪ್ಪನ್ನವರಲೀ ದೇಹವಿಪ್ಪುದು |
ನಿನ್ನ ಭೋಗಾಪೇಕ್ಷೆ ಕೆಟ್ಟಾಕ್ಷಣದೊಳೀ ದೇಹ ||
ನಿನ್ನ ಬಿಡುವುದು ಬಳಿಕ ತನುಗುಣ |
ನಿನ್ನನಲವುದು ಹುಸಿ ಕಣಾ ಕೇ |
ಳಿನ್ನಿದಕೆ ದೃಷ್ಟಾಂತಜಾಲವನೆಂದ ದೇಶಿಕನು || ೬ ||

ಮುಕುರ ಬಿಂಬದೊಲಭ್ರಘನದೊಲ್ |
ಪ್ರಕಟ ಚಕ್ಷುತಮಸ್ಸಿನಂತಾ |
ಸತಕನಿದ್ರಾಪುರುಷನೊಲು ಮಾರುತರಜಾದಿಯೊಲು ||
ಯುಕುತಿಯಂ ತಿಳಿಯಲಿಕೆ ಭಿನ್ನ |
ಪ್ರಕೃತಿಗಳು ತಾ ಸತ್ಯವೇಕಟ |
ವಿಕಳದೇಹವಿದಾರು ನೀನಾರೆಂದ ದೇಶಿಕನು || ೭ ||

ಮತ್ತೆ ಕೇಳು ಜಪಪ್ರಸೂನದ |
ಹತ್ತೆ ಚಂದ್ರೋಪಲವಿರಲ್ಕದು |
ಹತ್ತುವುವೆ ತದ್ರಾಗ ಬಿಂಬಿಸಿ ತೋಱುತೆಂದೆನಲು ||
ಕೃತ್ತಿಮದ ದೇಹೇಂದ್ರಿಯಗಳನಿ |
ಮಿತ್ತ ನಿನ್ನಂ ಹೊದ್ದದಿದು ಸ |
ತ್ಯೋಕ್ತ ಶಾಸನವಪ್ಪುದೆಲೆ ಸಚ್ಛಿಷ್ಯ ಕೇಳೆಂದ || ೮ ||

ತನುಜಡಂ ನೀನಜಡ ಮತ್ತಾ |
ತನುವನಂತಗಳೇಕ ನೀನಾ |
ತನುಲಯಂ ನೀನಲಯ ತನು ತಾ ದೃಶ್ಯ ನೀ ದೃಕ್ಕು ||
ಇನತಮೋಪ್ರಜದಂತೆ ತನುವಿಗೆ |
ನಿನಗೆ ಯೋಗವದೆಂತಹುದು ಚಿ |
ದ್ಘನ ಪರಾವರನಾಗಿ ನೀತನುವಲ್ಲ ನಿಶ್ಚಯಿಸು || ೯ ||

ಇಕ್ಷು ತಿಲ ಪಶುಕಾಷ್ಠಘಟಪಟ |
ಲಕ್ಷಣಗಳಾಗಿಹವು ತಿಳಿದು ನಿ |
ರೀಕ್ಷಿಸಲ್ಮುಖ್ಯಾರ್ಥ ಸಾಕ್ಷಾತ್ಕಾರವೆಂತಂತೆ ||
ಅಕ್ಷಯಾನುಪಮಾದ್ವಯಿತ ನಿ |
ರ್ಲಕ್ಷ್ಯವಹ ನಿನಗೀ ಶರೀರಂ |
ಲಕ್ಷ್ಯವಲ್ಲದೆ ಮುಖ್ಯವಲ್ಲಲ್ಲೆಂದು ನಿಶ್ಚೈಸು || ೧೦ ||

ನೇತ್ರದಿಂ ಕಾಣಿಸುವ ದೃಶ್ಯಕೆ |
ನೇತ್ರದೃಕ್ಕೆಂತಾಪರಿಯಲಾ |
ನೇತ್ರದಿಂದೊಳಗಱುವ ಮನ ದೃಕ್ ದೃಶ್ಯ ತಾನೇತ್ರ ||
ನೇತ್ರವಾರೂಪಾ ಮನಸ್ಸಿಂ |
ಬೀತ್ರಿವಿಧ ವಿಷಯಕ್ಕೆ ತಿಳಿಯಲ್ |
ಸೂತ್ರಧಾರಕ ನೀನಲ್ತೆ ಸಚ್ಛಿಷ್ಯ ಕೇಳೆಂದ || ೧೧ ||

ಮುದಡನಿವನೆಂದೆನ್ನದಿರಿ ನಾ |
ಗದಿದು ನಿಮ್ಮಂ ಕೇಳಲೆಂತ್ರಕ |
ಹದನನಱುದಾಡಿಸುವನೆಂದೆಂಬಾಗಲಾ ಯಂತ್ರಿ ||
ಮೊದಲು ತಾನುವಿಕಾರಿಯಹನೆಂ |
ಬುದು ವಿಚಾರಿಸೆ ಸತ್ಯವಲ್ಲಾ |
ಸದಮಲಾತ್ಮನೆ ಬೆಸಸೆನಲ್ಕಿಂತೆಂದ ದೇಶಿಕನು || ೧೨ ||

ಚಲಿಸವೇ ಸೂಜಿಗಳಯೋಪಲ |
ಬಲದಿ ಚಲಿಸದವೆನಲಯೋಪಲ |
ದೊಳು ವಿಕಾರತೆಯುಂಟೆ ಕೇಳೈ ನಿನ್ನ ನಿಕಟದೊಳು ||
ಬಳಸಿಕೊಂಡಿಹ ದೇಹ ನಿನ್ನಯ |
ಬೆಳಗಿನಿಂ ಸಂಚಲಿಸಲಿಲ್ಲದೆ |
ತಿಳಿಯೆ ನಿನಗೆ ವಿಕಾರವುಂಟೇ ಮಗನೆ ಕೇಳೆಂದ || ೧೩ ||

ತಂದೆ ಸದ್ಗುರುನಾಥ ಎನಗಿ |
ನ್ನೊಂದು ಸಂಶಯ ತೋಱುತಿದೆ ನಾ |
ನಿಂದು ಬೆಸಗೊಳಲಮ್ಮೆ ನಿಮ್ಮನೆನಲ್ಕೆ ನಸುನಗುತ ||
ಕಂದ ಬೆಸಸೈ ಬೆಸಸು ನೀನೇ |
ನೆಂದುದಂ ನಿರ್ವಹಿಸುವೆವು ಕೇ |
ಳೆಂದೆನಲ್ಬಿನ್ನೈಸುತಿರ್ದನು ದೇಶಿಕೋತ್ತಮಗೆ || ೧೪ ||

ಎಲೆಲೆ ಸದ್ಗುರುನಾಥ ಎನ್ನೊ |
ಳ್ಚಲನೆಯಿಲ್ಲದ ದೇಹವೆನ್ನಿಂ |
ಚಲಿಸುತಿಹುದೆಂದೆನ್ನೊಳಗೆ ಪೇಳಿದಿರಿ ಮತ್ತೀಗ ||
ನಳಿನಸಖನುದಯಕ್ಕೆ ತನುವಿದು |
ಚಲಿಸುಗಿನನಸ್ತಮಿಸಲೀ ತನು |
ವಳಿವುದೆಂದೀ ಕೃತ್ಯದಿಂ ಫಲವೇನು ಹೇಳೆಂದ || ೧೫ ||

ಮಂದಮತಿ ಕೇಳೆಲವೊ ಭಾಸ್ಕರ |
ನೊಂದು ನೇತ್ರಕ್ಕಧಿಪನೆನಲುಳಿ |
ದಿಂದ್ರಿಯಂಗಳನಾರು ಚೇಷ್ಟಿಸುತಿಪ್ಪರದು ಬೇಡ ||
ಹೆಂದಗತ್ತಲೆಯೊಳ್ಪ್ರವರ್ತಿಸು |
ವಂದುಕೆಲವು ಮೃಗದ್ವಿಜಾತಿಗೆ |
ಮುಂದೆ ಮುಂದಿರುತಿಪ್ಪನೇ ರವಿ ಕೇಳು ಸಚ್ಛಿಷ್ಯ || ೧೬ ||

ಒಡೆಯ ಚಿತ್ತೈಸಯ್ಯ ಕಾನನ |
ದೆಡೆಯ ಮೃಗಪಕ್ಷಿಗಳ ವಾರ್ತೆಯ |
ತಡಹವೇತಕ್ಕಕಟ ಮೈಮಱದೊಱಗಿದೆನ್ನೊಳಗೆ ||
ಬಿಡುಬಿಡಾ ಮಾತೇಕೆ ನೇತ್ರ |
ಕ್ಕೊಡೆಯ ರವಿಯೆನಲುಳಿದಿಹಾಕ್ಷಗ |
ಳಿಡಿದ ಸುಪ್ತಿಯೊಳಾಗಿರಲ್ಚಲಿಯಿಸುವವೇಕೆಂದ || ೧೭ ||

ಈ ಪರಿಯ ಬೆಸಗೊಂಬ ಸತ್ಯಾ |
ಳಾಪವೀ ಸುವಿವೇಕವೀ ಮತ |
ವೀಪರೀಕ್ಷಕತನಗಳಿಂದಪರೋಕ್ಷ ವಿದ್ಯೆಯೊಳು ||
ವ್ಯಾಪಿಸಿಹ ಪರಿಲೇಸೆಲೈ ಮಝು |
ಭಾಪುನೀನಹುದೆಂದು ಶಿಷ್ಯನ |
ನಾ ಪರಬ್ರಹ್ಮಸ್ವರೂಪಂ ನುತಿಸುತಿಂತೆಂದ || ೧೮ ||

ಅಱಿವೆನಿನ್ನೊಳಗಿಲ್ಲ ಕೇವಲ |
ಮಱವೆ ನಿನ್ನೊಳಗಿಲ್ಲ ಮತ್ತಾ |
ಅಱಿವು ಮಱವೆಯ ಬೆಱಕೆ ನಿನ್ನೊಳಗಿಲ್ಲವೆಂತೆನಲು ||
ಬಱಿಯ ಬೆಳಗಿನ ಬೆಳಗೆ ನಿನಗೊಂ |
ದುಱುವ ವಿಗ್ರಹವಾದ ಕಾರಣ |
ವರ ಕುಮಾರಕ ಕೇಳೆನುತ ಪೇಳಿದನು ದೇಶಿಕನು || ೧೯ ||

ವರದ ಚಿತ್ತೈಸಾದರೆನಗೀ |
ಗುಱುವ ಬೆಳಗೀ ತನುವೆನಲ್ಕೀ |
ಮಱವೆ ಅಱಿವುಗಳೆಲ್ಲಿ ಬಂದವೆನಲ್ಕೆ ನಸುನಗುತ ||
ತರಳ ಕೇಳ್ಜಾಗ್ರಾದ್ಯವಸ್ಥೆಗ |
ಳಿರವನಱಿಯಲು ಬೇಕೆನಲು ವರ |
ಗುರವೆ ನಾನವನೇನಬಲ್ಲೆನು ನೀವೆ ಬೆಸಸೆಂದ || ೨೦ ||

ಸ್ಥೂಲದೇಹದೊಳೊಂದಹಂತೆ ವಿ |
ಶಾಲವಾಗಿರೆ ಜಾಗ್ರಮತ್ತಾ |
ಸ್ಥೂಲವಾಸನೆವಿಡಿದು ಸಂಕೋಚಿಸಲಹಂಕಾರ ||
ಬಾಲಕನೆ ಕೇಳ್ ಸ್ವಪ್ನವಪ್ಪುದು |
ಹೇಳಲೇನಾಹಂತೆ ಮಱವೆಯೊ |
ಳಾಳಿಹೋದರೆ ಸುಪ್ತಿಯಪ್ಪುದು ಕೇಳು ಸಚ್ಛಿಷ್ಯ || ೨೧ ||

ದಶವಿಧೇಂದ್ರಿಯದೊಳ್ ಪ್ರವರ್ತಿಸಿ |
ದಶವಿಷಯ ಭೋಗಾನುವಶದಿಂ |
ಪಸರಿಸುತ ವಿಸಟಂಬರಿದುವೆಗ್ಗಳಿಸುತಾಹಂತೆ ||
ಮಸಳಿಸುತ್ತಿಹುದಱಿವುದುಱೆ ತಾ |
ಮಸದೊಳೊಂದಿರುತಿಪ್ಪುದೆಂದರೆ |
ಶಿಶುವರನೆ ನಿನಗೇನು ಪೇಳೆಂದೊರೆದ ದೇಶಿಕನು || ೨೨ ||

ಇಂತು ಜಾಗ್ರಾದಿಗಳೊಳೊಲಿದೋ |
ರಂತೆ ವರ್ತಿಸುತಿಪ್ಪಹಂತೆಗೆ |
ಮುಂತೆ ಸಾಕ್ಷಿಜ್ಯೋತಿಯಲಿ ನೀನಿಪ್ಪೆ ನಿಶ್ಚಯದಿ ||
ಅಂತು ಕಾರಣ ಮಗನೆ ನಿನ್ನೊಳು |
ಸಂತತಂ ಜಾಗ್ರಾದಿಗಳು ಪೊಗ |
ವಂತುಟಿದು ಪರಮಾರ್ಥ ಕೇಳೆಂದೊರೆದ ದೇಶಿಕನು || ೨೩ ||

ತಂದೆ ಚಿತ್ತಯಿಸಯ್ಯ ನಾನಿ |
ನ್ನೊಂದ ಕೇಳುವೆನೆನಗವಸ್ಥೆಗ |
ಳೊಂದವೆಂಬುದನೆನಗೆ ನಿಶ್ಚಯವಾಗಿ ಪೇಳೆನಲು ||
ಕಂದ ಕೇಳ್ಜಾಗ್ರಾದ್ಯವಸ್ಥೆಗ |
ಳಂದವಿಟ್ಟದನಱಿದು ಪೇಳ್ವುದ |
ಱಿಂದವಸ್ಥೆಗಳಿಂತು ನಿನಗಿಲ್ಲೆಂದ ದೇಶಿಕನು || ೨೪ ||

ಲೋಕರವಿಯಿಂ ಚೇಷ್ಟೆಯೆನಲಾ |
ಲೋಕವೇ ಕಾರಣವಲಾ ಕೇಳ್ |
ಲೋಕರ ವಿಲೋಚನಕೆ ಮನವೇ ಕರ್ತೃರೂಪನಲ ||
ಲೋಕರವಿಲೋಚನ ಮನಕ್ಕಾ |
ಲೋಕಿಸಲ್ಕವಿಕಾರಿಯಪ್ಪ ದೃ |
ಗ್ರೈಕರೂಪನು ನೀನಲ್ತೆ ಸಚ್ಛಿಷ್ಯ ಕೇಳೆಂದ || ೨೫ ||

ಲೋಕನಾಥನೆ ಕೇಳು ನಾನಾ |
ಶೋಕ ಮೋಹೋದ್ರೇಕದಿಂದಲ |
ನೇಕ ಜನ್ಮಂಗಳೊಳು ವರ್ತಿಸುತಿರ್ಪ ದೇಹವನು ||
ಸ್ವೀಕರಿಸಿಕೊಂಡಿರ್ದು ಮತ್ತಿ |
ನ್ನೇಕವಹ ಪರಿಯಂತುಟಾನೆಂ |
ದೀಕ್ರಮದಿ ಬಿನ್ನೈಸಲಾ ಗುರುನಾಥನಿಂತೆಂದ || ೨೬ ||

ಹಲವವಸ್ಥೆಯೊಳೊಂದು ದೇಹವಿ |
ದಳಿದು ತತ್ತದ್ರೂಪವಾದರೆ |
ತಿಳಿವ ನೀನೊಂದೇ ಪರಿಯಲಿಪ್ಪಂತೆ ಭವದೊಳಗೆ ||
ಎಳತಟಂಗೊಳುತಿಪ್ಪುದೀ ತನು |
ಬಳಿವಿಡಿವುತಭ್ರಾಂತ ಘಟದೊ |
ಳ್ಸುಳಿವ ಲೋಚನದಂತೆ ನೀನಿಹೆಯೆಂದ ದೇಶಿಕನು || ೨೭ ||

ವೃತ್ತಿಚಿತ್ತುಗಳೆಂದು ತಮ್ಮೊಳ |
ಗಿತ್ತೆಱನು ಕೇಳ್ ಪಾರಮಾರ್ಥದಿ |
ವೃತ್ತಿಯೆಂದಡುಪಾಧಿ ಚಿತ್ತುವೆನಲ್ಕೆ ಪರಬೊಮ್ಮ ||
ವೃತ್ತಿಜನಿಯಿಸುಗಳಿಗು ನಿಮುಷಕೆ |
ವೃತ್ತಿಯೊಳ್ ಪ್ರತಿಬಿಂಬಿಸಿರುತಿಹ |
ಚಿತ್ತು ನಿಶ್ಚಲವೆಂದು ಪೇಳಿದ ದೇಶಿಕೋತ್ತಮನು || ೨೮ ||

ಕೃತ್ತಿಮದ ಘಟವಳಿದರೇನೋ |
ವೃತ್ತಿಕೆಗೆ ಕೇಳ್ನಾಮರೂಪಿಂ |
ವ್ಯಕ್ತವಾಗಿಯೆ ಷಡ್ವಿಕಾರೋಪೇತಮಾಗಿಪ್ಪ ||
ಮಿಥ್ಯೆಯಹ ತನುವಳಿಯಿತೆಂದರೆ |
ಸತ್ಯನದ್ವಯನಮಲನೆನಿಸುವ |
ನಿತ್ಯಮುಕ್ತಚಿದಾತ್ಮ ನಿನಗೇನೆಂದ ದೇಶಿಕನು || ೨೯ ||

ಬೊಮ್ಮವೊಂದಂ ಕುಱಿತು ಕರ್ಮವೆ |
ಕರ್ಮವಂ ಬೆಸಲಪ್ಪುದೆಂತೆನೆ |
ಕರ್ಮಿಗಳ ಬಸುಱಲ್ಲಿ ಕರ್ಮವು ಬಂದ ತೆಱನಂತೆ ||
ಬೊಮ್ಮವೆಂದಿನ ಪರಿಯಲಿಪ್ಪುದು |
ವರ್ಮವಱಿಯದ ಮೂಢರುಗಳಾ |
ಬೊಮ್ಮ ಹುಟ್ಟಿತು ಹೊಂದಿತೆಂಬರು ಕೇಳು ಸಚ್ಛಿಷ್ಯ || ೩೦ ||

ಜನುಗಿದೆಲ್ಲಿಯದೆಂದು ಮನದೊ |
ಳ್ಕನಲದಿರಿ ನಾನೊಂದ ಕೇಳುವೆ |
ನೆನಗೆ ಜನನಾದಿಗಳು ಲೇಪಿಸನೆನಲಿಕದನೆನ್ನ ||
ಮನಕೆ ಮಂಗಲವಾಗಿ ಪೇಳೆಂ |
ದೆನಲು ಹರುಷಿತನಾಗಿ ತನ್ನಯ |
ತನಯನೊಳ್ಪೇಳಿದನು ಭವವನದಾವ ಶಿಖಿಮಯನು || ೩೧ ||

ಮುನ್ನಲಿವ ಪುಣ್ಯಾಧಿಕನು ಮಿಗೆ |
ಮುನ್ನಲಿವ ಪಾಪಿಷ್ಠನೆಂದಿವ |
ನೆನ್ನಲೇಕೋ ಪ್ರಾಗಭಾವವೆ ಸಹಜವಾಗುಹರೆ ||
ಮುನ್ನಲುಂಟಾಗಿಪ್ಪ ಕಾರಣ |
ವಿನ್ನು ನಾಶವ ಭಾವವೆಂದೇ |
ನಿರ್ಣಯಿಸೆ ಪರವಸ್ತು ನಿನ್ನಿಂದನ್ಯವಲ್ಲೆಂದ || ೩೨ ||

ಕುಂಭನಿಕುರುಂಭಗಳು ಸಿಂಧುವಿ |
ನಂಬುಮಧ್ಯದಿ ನೋಡೆಲೆಹಗವು |
ತುಂಬಿಕೊಂಡಿಹವೆಹಗ ತರ್ಕೈಶ್ವರ್ಯಚಿದ್ಬ್ರಹ್ಮ ||
ವೆಂಬ ವಿಮಲಾದ್ವಯ ಮಹಾ ಕ |
ಲ್ಪಾಂಬುವಂ ಕಬಳೀಕರಿಸಿ ಕೊಂ |
ಡಿಂಬಿನಿಂ ಬ್ರಹ್ಮಾಂಡವಿಂತು ವಿಜೃಂಭಿಸುತ್ತಿಹುದು || ೩೩ ||

ಸಚ್ಚಿದಾನಂದೈಕ ರಸವೇ |
ನುಚ್ಚುನುಱಿಯಾದಂತೆ ತನುಗಳ |
ಹೆಚ್ಚೆ ತನ್ನಯ ಹೆಚ್ಚು ತನುಗಳ ಕುಂದೆ ಕುಂದಾಗಿ ||
ಹಚ್ಚೆ ಹಾಕಿದ ತೆಱದಿ ವಿಶ್ವದೊ |
ಳುಚ್ಚ ನೀಚಗಳಾದುವಲ್ಲದೆ |
ತುಚ್ಛವಹ ತನುವಳಿಯೆ ಬ್ರಹ್ಮವಖಂಡವಾಗಿಹುದು || ೩೪ ||

ಬೆಂಕೆ ನೆಱೆದೊಂಕೂಡೆ ಕೇಳು ನೃ |
ಗಾಂಕ ಹೊನಲಿಂ ಹೋಹನೊಳ ಹೊಱ |
ಯಿಂಕೆ ಸಂಚರಿಸುತ್ತಲಿಹುದಾಕಾಶ ಭರದಿಂದ ||
ಕೊಂಕ ಸರಳುದ ಭಾಂಡವೆಂಬಿವ |
ಱಂಕೆಯಿನಿತಂ ಬಗೆಯದೆಲೆಲೆ ನಿ |
ಜಾಂಕವಹ ಪರವಸ್ತುಗೀ ತನುವಿಡಿದ ಕಾಲದಲಿ || ೩೫ ||

ಎಂದ ಮಾತನು ಕೇಳಿ ಹರುಷದೊ |
ಳೊಂದ್ಯಥೋಚಿತ ಭಾವ ಭಕ್ತಿಗ |
ಳಿಂದ ಸಾಷ್ಟಾಂಗ ಪ್ರಣತನಾಗುತಲಿ ಕೈಮುಗಿದು |
ನಿಂದು ಬಳಿಕಲಿ ನುತಿಸಿದಂ ಭವ |
ಸಿಂಧು ವಡಬನ ಶಿವಕಥಾರ್ಣವ |
ಚಂದ್ರ ರೂಪನ ಸಾಂದ್ರ ಮಹಿಮನ ದೇಶಿಕೇಂದ್ರನನು || ೩೬ ||

ಜಯ ಮಹಾತ್ಮನೆ ಜಯ ಶಿವಾತ್ಮನೆ |
ಜಯ ಸುಖಾತ್ಮನೆ ಜಯಪರಾತ್ಮನೆ |
ಜಯ ನಿಜಾತ್ಮನೆ ಜಯ ಚಿದಾತ್ಮನೆ ಜಯ ಜಗನ್ಮಯನೆ ||
ಜಯ ಷಡಂಗನೆ ಜಯ ಷಡರ್ತ್ಥನೆ |
ಜಯ ನಿರಂಶನೆ ಜಯ ವಿಶುದ್ಧನೆ |
ಜಯಯೆನುತ ನುತಿಸಿದನು ಶಿಷ್ಯನು ದೇಶಿಕೋತ್ತಮನ || ೩೭ ||

ಇತಿ ಸದ್ಗುರುರಹಸ್ಯೇ

ವಸ್ತುನಿರ್ದೇಶನಾಮ

ಸಪ್ತಮೋಪದೇಶಂ ಮಂಗಳಂ

ಶ್ರೀ ಶ್ರೀ

ಅಷ್ಟಮೋಪದೇಶಂ

[ರಾಗ-ವಸಂತ ಭೈರವಿ-ಪಲ್ಲವಿ].

ಭಾ|| ಷ|| ದುಃಸ್ವಭಾವವ ಬಿಡಿಸಿ ತನ್ನ ನಿ |
ಜ ಸ್ವರೂಪವ ಪೇಳಿ ಪರಸು ಸು |
ಖ ಸ್ವರೂಪನ ಮಾಡಿದಂ ಶಿಶುವಂ ಗುರೂತ್ತಮನು || ಪಪ ||

ಅಱಿವೆನೆಂದೆಂಬವಗಸಾಧ್ಯವ |
ದಱಿಯದವನೆಂತಱಿವನೆಂದಿರ |
ದಱಿವುತಾಮಱವಱಿವೆಯಂ ಸುಜ್ಞಾನಶಸ್ತ್ರದಲಿ ||
ಹಱಿಗಡಿದು ಸದ್ಭಾವವೊಂದಂ |
ಕಱಿಗೊಳಿಸಿ ಕರುವಿಟ್ಟ ಶರಣ |
ತ್ರೃಱಹುಗುಡದಾಲಿಸುವುದೈ ಸದ್ಗುರು ರಹಸ್ಯವನು || ೧ ||

ಅಱಿವ ಮಱವರೆ ಮಱವೆಯೊಳಗಿ |
ಪ್ಪಱಿವ ಬಿಡದಂತಱಿದು ಮತ್ತಾ |
ಮಱಹ ಮಱವರೆ ಮಱವೆಯೊಳಗಿಪ್ಪಱಿವು ಕೆಡದಂತೆ ||
ಮಱವವಂ ನಿಜಬಂಧದಱಿವಂ |
ಹಱಿದು ಕಱಿಗೊಂಡಱತ ಬೆಳಗಿನ |
ಬೆಱಗಿನೊಳ್ಬೆಱಗಹನಲ್ಲೈ ಸಚ್ಛಿಷ್ಯ ಕೇಳೆಂದ || ೨ ||

ಮಱವೆಗಱಿವೇ ಲಕ್ಷ್ಯ ಅಱಿವಿಗೆ |
ಮಱವೆ ತಾನೇ ಲಕ್ಷ್ಯ ಮತ್ತಾ |
ಮಱವೆಗಱಿವೆಗಹಂ ವಿಲಕ್ಷಣವೆಂಬ ಲಕ್ಷ್ಯವನು ||
ಹಱಿವವಂ ನೆಱೆ ತನ್ನ ತಾನೇ |
ಮಱದವಂ ಸಂಸೃತಿಯ ಬೇರಂ |
ಕೊಱದವಂ ಬೆಱಗಾದವಂ ಕೇಳೆಂದ ದೇಶಿಕನು || ೩ ||

ಮಱವೆಯಂ ಮಮಕರಿಸಿ ಸಂಸೃತಿ |
ಯಱಿವೆಯಿಂ ಹಱಿವಾಗಿ ತನ್ನಂ |
ಮಱವಱಿವ ತನ್ನಱಿವೆ ತನ್ನಿಂದಳಿದು ತಾನುಳಿದು ||
ಬೆಱಕೆಯಿಲ್ಲದ ಬೇಱೆ ತೋಱಿಸ |
ದಿರವದೇ ಪರಿಪೂರ್ಣದಿರವೆಂ |
ದೊಱೆದನಾ ದೇಶಿಕನು ನಿಜತನಯಂಗೆ ಮುದದಿಂದ || ೪ ||

ಮಱದೆನೆಂಬವನಱಿವು ಮಱಹಂ |
ಕುಱಿತದಱಿವಿಂಗಡರಿ ಲಕ್ಷಿಪು |
ದಱಿದೆನೆಂಬನ ಮಱವೆಯಱಿವಂ ಕುಱಿತು ಮಱಹಿಂಗೆ ||
ಕುಱುಹೆನಿಪ್ಪುದಱಿಂದಲಾ ಮಱ |
ದಱಿವೆಯಂ ಮಱದುಱುವ ತನ್ನಂ |
ತೆಱಹುಗೊಂಡವ ತಾನಲ್ತೆ ಪರಿಪೂರ್ಣನಹನೆಂದ || ೫ ||

ತನ್ನ ತಾನಱಿವಾಗ ತನ್ನಿಂ |
ದನ್ಯವಹ ತಾನುಂಟೆ ಅಱಿವಿಗೆ |
ಮುನ್ನ ಸಾಕ್ಷಿಯೆನಿಪ್ಪ ತಾನೇ ಸತ್ಯವೆಂದೆನುತ ||
ಭಿನ್ನಭಾವಭ್ರಮೆಯ ಬಳಕೆಯ |
ಮನ್ನಿಸಿಯೆ ತಾ ಸುಮ್ಮನಿರಲಿಕ |
ನನ್ಯ ವಿಗ್ರಹವಪ್ಪನೆಲೆ ಸಚ್ಛಿಷ್ಯ ಕೇಳೆಂದ || ೬ ||

ಅಱಿವೆನೆನೆ ಕುಱುಹಿಲ್ಲ ತನ್ನಂ |
ಮಱವೆನೆನೆ ತೆಱಹಿಲ್ಲವದಱಿಂ |
ದಱಿವೆ ಮಱವೆನೆನಲ್ಕೆ ಹಱವಿನಿತಿಲ್ಲಮಪ್ಪುದಱಿಂ ||
ಅಱಿವೆ ಮಱವೆಗಳೆಂಬ ತನ್ನೊಳ |
ಹೊಱಗಳಿದು ತಾ ನಿಂದ ನಿಲವದು |
ನಿರುಪಮುದಖಂಡೈಕರಸವೆಲೆ ಮಗನೆ ಕೇಳೆಂದ || ೭ ||

ದ್ರಷ್ಟುವಿಡಿದಿಹ ದೃಶ್ಯದೃಶ್ಯ |
ದ್ರಷ್ಟುವಿಡಿದಿಹ ದರ್ಶದೃಶ್ಯ |
ದ್ರಷ್ಟುದರುಶನವಿಂತು ತಮ್ಮೊಳು ಕುಳಕಮಪ್ಪುದಱಿಂ ||
ದ್ರಷ್ಟುವಳಿಯಲದೃಶ್ಯದರ್ಶನ |
ನಿಟ್ಟಿಸಲ್ಕಿನಿತಿಲ್ಲವದಱಿಂ |
ಶ್ರೇಷ್ಠವಹ ಪರಬೊಮ್ಮ ತಾನೇ ಮಗನೆ ಕೇಳೆಂದ || ೮ ||

ತನಗೆ ತಾನೇ ದ್ರಷ್ಟುವೆನಿಸ |
ಲ್ತನಗೆ ತಾನೇ ದೃಶ್ಯವೆನಿಸ |
ಲ್ತನಗೆ ತಾನೇ ದರ್ಶವೆನಿಸಲದೇಂ ಪ್ರಯೋಜನವೈ ||
ಅನಿತಱಿಂ ಪ್ರತ್ಯೇಕನಾಮಂ |
ತನಗೆ ತಾನೇ ದೊಱಕಲೆನುತ |
ಲ್ತನಯನೊಳ್ಬೆಸಸಿದನು ಸದ್ಗುರುನಾಥನೊಲವಿಂದ || ೯ ||

ತನ್ನಭಾವದ ನಟನೆ ತನಗೇ |
ಭಿನ್ನವೆನಿಸಿಯೆ ಮೂಱು ತೆಱನಿಂ |
ದೆನ್ನಲಾಯ್ತ್ರೈದ್ರಷ್ಟು ದರ್ಶನ ದೃಶ್ಯವೆಂದ್ಯೈದೆ ||
ತನ್ನಭಾವದ ನಟನೆಯಂ ತಾ |
ನಿರ್ಣಯಿಸಲುಂ ತಾನೆ ತಿಳಿಯಲ |
ನನ್ಯಬೋಧಾರ್ಣವನಲ್ತೆ ಸಚ್ಛಿಷ್ಯ ಕೇಳೆಂದ || ೧೦ ||

ಇಂತು ತ್ರಿಪುಟಿ ಘಟೋಪಟೋಪರಿ |
ಸಂತತಂ ಲಕ್ಷಿಸುವ ನೀನೇ |
ಸ್ವಾಂತವೃತ್ತಿ ವಿಹೀನನೆಂದೆನಲಿರದೆ ಕೈಮುಗಿದು ||
ಅಂತಕಾಂತಕ ಗುರುವೆ ನೀವೆಂ |
ದಂತುಟೇ ಮತವೆನೆಗೆ ತ್ರಿಪುಟೇ |
ಪಂಥದನುವಂ ಬೆಸಸೆನಲ್ಕಿಂತೆಂದ ದೇಶಿಕನು || ೧೧ ||

ತರಳ ಕೇಳ್ಕೈ ದ್ರಷ್ಟುವೆಂದರೆ |
ಪರಮ ದೃಶ್ಯವೆನಲ್ಕೆ ಜೀವಂ |
ದರುಶನವೆನಲ್ಕಾವುಭಯ ಸಂದಾಯಿತಂ ಬುದ್ಧಿ |
ಬಱಿಮುಖರ್ಗಿದನಱಿಯಲೆಂತಹು |
ದಱಿದುಕೋ ನೀನೆಂದು ಸದ್ಗುರು |
ವರ ರಹಸ್ಯದೊಳೊರೆದನಾಹಾ ತನ್ನ ಲೀಲೆಯಲಿ || ೧೨ ||

ಅಱಿವೆ ನಿನ್ನೊಳಗಿಲ್ಲ ಕೇವಲ |
ಮಱವೆ ನಿನ್ನೊಳಗಿಲ್ಲ ಮತ್ತಾ |
ಮಱವೆಯಱಿವೆಯ ಸಂಧಿ ನಿನ್ನೊಳಗಿಲ್ಲವೆಂತೆನಲು ||
ಬಱಿಯ ಸಂವಿದ್ರೂಪ ನಾನೆಂ |
ದುಱಿವ ಸರ್ಪನ ತಲೆಯ ಸಾಧಿಸಿ |
ಹಱಿಯ ಹೊಡದವನಾಗಿ ನೀ ಪರಿಪೂರ್ಣನಹೆಯೆಂದ || ೧೩ ||

ಎಂದು ಸದ್ಗುರುನಾಥ ಮುದದಿಂ |
ಕಂದನಂ ಬೋಧಿಸುತ ಮತ್ತಿಂ |
ತೆಂದನೀಪರಿ ಕಥಿಸುತಿರೆ ಕಥೆಯಂ ಮಹತ್ವದಲಿ ||
ಮುಂದೆ ಸಂದಳಿದೈಕ್ಯ ಪರದೊಳ |
ಗೆಂದು ನೀ ಸುಖವಿಪ್ಪೆ ಹೇಳೆಂ |
ದೊಂದಿ ಬೆಸಸಲ್ ನುತಿಸುತಿರ್ದನು ದೇಶಿಕೋತ್ತಮನು || ೧೪ ||

ಶರಣು ತತ್ವಮಸೀತಿ ವಾಕ್ಯನೆ |
ಶರಣು ಲಿಂಗಾಂಗೈಕ್ಯರೂಪನೆ |
ಶರಣು ಜೀವ ಪರಾತ್ಮ ತಾದಾತ್ಮ್ಯೈಕ ಶಿವಕರನೆ ||
ಶರಣು ಶಕ್ತಿ ಶಿವಾನುಬಂಧನೆ |
ಶರಣು ಪಂಚಾರ್ಥಪ್ರಯುಕ್ತನೆ |
ಶರಣು ಸದ್ಗುರು ಬಸವಯೆನುತಿಂತೊಲಿದು ನುತಿಸಿದನು || ೧೫ ||

ಇತಿ ಸದ್ಗುರುರಹಸ್ಯೇ
ಸ್ವಾತ್ಮನಿರೂಪಣಂ ನಾಮ
ಅಷ್ಟಮೋಪದೇಶಂ
ಶ್ರೀ ಶ್ರೀ

ನವಮೋಪದೇಶಂ

[ರಾಗ–ಶುದ್ಧಭೈರವಿ–ಪಲ್ಲವಿ]

ಭಾ|| ಷ|| ತನ್ನ ವಿಸ್ಮೃತಿಯಿಂದ ತಾ ತನ |
ಗನ್ಯನೆಂದರೆ ತಿಳುಹಿ ಬಳಿಕಲ |
ನನ್ಯ ಬೋಧೆಯ ಪೇಳಿದಂ ಶಿಶುವಿಂಗೆ ದೇಶಿಕನು || ಪ ||

ನೋಡುವೆಡೆಯೊಳು ನುಡಿಸುವೆಡೆಯೊಳು |
ಕೂಡುವೆಡೆಯೊಳು ನಿತ್ಯ ಕೃತ್ಯವ |
ಮಾಡುವೆಡೆಯೊಳು ಹಾಡುವೆಡೆಗಳೊಳಾಡುವೆಡೆಗಳೊಳು ||
ಖೋಡಿಯೋಗದೆ ಬೇಡನಾಗದೆ |
ಗಾಢಿಸಿಯೆ ನಿಜ ಲಕ್ಷ್ಯದೊಳಗೋ |
ಲಾಡುತಿಪ್ಪರು ಕೇಳ್ವುದೈ ಸದ್ಗುರು ರಹಸ್ಯವನು || ೧ ||

ಆನು ನೀನೆಂದೆಂಬುದೊಂದಭಿ |
ಧಾನವಂ ಕಡೆಗೊಳಿಸಿ ಸಮ್ಯ |
ಜ್ಞಾನದಿಂ ನೋಡಲು ಜಗದ್ಬ್ರಹ್ಮೈಕ್ಯವಾಗಿಹುದು ||
ನೀನು ಸದಮಲ ಸ್ವಚ್ಛಭಾವ |
ಜ್ಞಾನದಿಂದೀ ಜಗವನೋಡೆನೆ |
ಸಾನುರಾಗದೊಳೆಂದ ಶಿಷ್ಯನು ದೇಶಿಕೋತ್ತಮಗೆ || ೨ ||

ಹುಸಿ ನುಸುಳು ಮದವಾಸೆ ಜಡ ತಾ |
ಮಸ ವಿಷಯ ಸುಖದುಃಖ ರೂಪಿನ |
ಹಸರಮಪ್ಪೀ ಜಗವ ಬೊಮ್ಮಾಕಾರವಹುದೆಂದು ||
ಒಸೆದು ಕಲ್ಪಿಸಿ ಭಾವಿಸಲು ನಿ |
ರ್ವಿಷಯ ಬೊಮ್ಮವದೆಂತಹುದು ಕೇ |
ಳ್ಮಸಿಯ ಕಾವಲೆಯಂ ವೃಥಾ ಶಶಿಯೆನಲು ಶಶಿಯಹುದೆ || ೩ ||

ಪ್ರತ್ಯಗುದ್ಭವ ಪಿತ್ತ ನೆತ್ತಿಯ |
ಸುತ್ತಿದವನೆತ್ತೆತ್ತ ನೋಡಲಿ |
ಕತ್ತ ಪಿತ್ತಚ್ಛಾಯೆಯೇ ತಾತ್ಪರ್ಯವೆಂತಂತೆ ||
ಸತ್ಯ ಸಮ್ಯಜ್ಞಾನ ಮಾರ್ಗವ |
ಕೆತ್ತು ಕೃತ್ರಿಮರಂಧ್ರದಿಂ ನೋ |
ಡುತ್ತಲಿರಲೀ ವಿಶ್ವ ವಿದ್ರೂಪಾಗಿ ಕಾಣಿಸುಗು || ೪ ||

ಸುಟ್ಟು ಶೋಷಣಗೈವ ಪರಿಯಂ |
ನಟ್ಟು ಕಾಯ್ವಾ ತಪದಿ ತಾ ಹಿ |
ಮ್ಮೆಟ್ಟಲೊಲ್ಲದೆ ಬೆಟ್ಟ ಬಿಸಿಲಿಂ ಬೇವುತದೆಯೆಂಬ ||
ದುಷ್ಟಮತಿಯವನಂತೆ ತನ್ನಂ |
ಮುಟ್ಟವಿಸದಿದಿರಿಟ್ಟ ಮುಕುರವ |
ಹಿಟ್ಟುಗಳೆದುದಱಿಂದಲೇಂ ಫಲ ಕೇಳು ಸಚ್ಛಿಷ್ಯ || ೫ ||

ಅಂತು ಕಾರಣವೀ ಜಗಂ ತಾ |
ನೆಂತು ನೋಡಿದರಂತಹುದು ಕೇ |
ಳ್ಭ್ರಾಂತ ಮಗನೇ ತಿಳಿಯೆನಲ್ಕಿಂತೆಂದನುಚಿತದಲಿ ||
ಅಂತಕಾಂತಕ ಗುರುವೆ ನಾನೋ |
ರಂತೆ ದಿವ್ಯಜ್ಞಾನ ಸುಧೆಯಂ |
ಸಂತತಂ ಸೇವಿಸಲು ಜಗಕೆಂತಹುದು ತತ್ಸುಖವು || ೬ ||

ಉರುತರ ಸ್ವಾತ್ಮಪ್ರಭಾ ಚಿ |
ದ್ಭರಿತವಲ್ಲೆನಲೇಕೆ ಜಗವಂ |
ಪರಮ ಶುದ್ಧ ಜ್ಞಾನಿಯಾದರೆ ಸಾಲದೇ ತಾನು ||
ಧರೆಯ ವಿಸ್ತೀರ್ಣಕ್ಕೆ ಚರ್ಮವ |
ಹರಹಲೇತಕೆ ಮರುಳೆ ಪೇಳ್ನಿಜ |
ಚರಣ ಮಾತ್ರಕೆ ಚರ್ಮವಿರುತಿರಲೆಂದ ದೇಶಿಕನು || ೭ ||

ತೋಯವಂ ಪರಿಹರಿಸಿ ತೆರೆಗಾಂ |
ಗೇಯವಿಲ್ಲದೆ ಕಟಕ ಮಕುಟ ವಿ |
ಹಾಯಮುಮನತಿಗಳೆದು ರಂಭಾ ಚಿತ್ರಮೃತ್ತಿಕೆಯ ||
ದಾಯವನು ನೀಕರಿಸಿ ಘಟನಿ |
ರ್ದಾಯಕೆಂತಹುದಾ ಪರಿಯ ನಿ |
ರ್ಮಾಯವಹ ಪರಬೊಮ್ಮವಿಲ್ಲದೆ ಜಗವದೆಂತಹುದೈ || ೮ ||

ಎಲ್ಲಿ ತೆರೆಯಿಹುದಲ್ಲಿ ಜಲಮಯ |
ವೆಲ್ಲಿ ಘಟವಿಹುದಲ್ಲಿ ಮೃಣ್ಮಯ |
ವೆಲ್ಲಿಕಟಕವದಲ್ಲಿ ಕಾಂಚನಮಯವದಾಗಿಹುದು ||
ಎಲ್ಲಿ ಬೊಂಬೆಗಳಲ್ಲಿ ದಾರುಮ |
ಯೆಲ್ಲಿ ಜಗವಿಹುದಲ್ಲಿ ತಿಳಿವರೆ |
ಸಲ್ಲಲಿತ ಸದಮಲವಖಂಡ ಬ್ರಹ್ಮಮಯವೆಂದ || ೯ ||

ಅನಲ ಕಾಷ್ಠವನನಿಲ ಶುಷಿರವ |
ನಿನಹವ ವನ ಕಣವ ಜೀವಂ |
ತನುವನುರು ದೀಪತ್ರವರ್ತಿಯನರ್ಥವಕ್ಷರವ ||
ಇನಿತನಗಲಿರವಂತುಟಾ ಪರಿ |
ತನಯ ಕೇಳ್ಪರವಸ್ತು ವಿಶ್ವವ |
ನನುವಿಡಿದು ಕುಳಕದೊಲು ನಟಿಸಿಹುದೆಂದ ದೇಶಿಕನು || ೧೦ ||

ಕಂದ ಕೇಳ್ ಕರ ಕಷ್ಟವಹ ಕ |
ರ್ಮೇಂದ್ರಿಯಂಗಳು ಶಿಷ್ಟವಹ ಬು |
ದ್ಧೀಂದ್ರಿಯಂಗಳು ಬೆರಸಿ ಭೇದಾಮಾತ್ರವಿರದಿಪ್ಪ ||
ಚಂದದಿಂ ಪರವಸ್ತು ಜಗದೊಳು |
ಸಂದಳಿದಖಂಡೈಕ ರಸದಿಂ |
ನಿಂದಿಹುದು ನಿಜದಿಂದಲೆಂದನು ದೇಶಿಕೋತ್ತಮನು || ೧೧ ||

ಚಿತ್ಕಡಲ ಕಲಕಿನೊಳು ತೆರೆ ನೊರೆ |
ಯುತ್ಕರುಷಿಸಿದವೆಂದರವು ತಾ |
ಚಿತ್ಕಡಲದಲ್ಲದೆ ವೃಥಾ ಮತ್ತೊಂದು ತೆಱನಹವೆ ||
ಮಿಕ್ಕು ತನ್ನ ಮಹಾ ವಿನೋದದೊ |
ಳುಕ್ಕಿ ಪರಮಂ ನಾಮ ರೂಪಿನ |
ಮಾಳ್ಕೆಯಿಂ ಪಸರಿಸಲಿಕೀ ಜಗವೆಂತು ಬೇಱಹುದೈ || ೧೨ ||

ಸಚ್ಚಿದದ್ವಯ ಸುಖಮಹೋದಧಿ |
ಯಚ್ಚರಿಯವದನೇನ ಹೇಳುವೆ |
ನಚ್ಯುತಪ್ರಮುಖಾದಿಗಳು ತಪವಿದ್ದು ತತ್ತಟದ ||
ತುಚ್ಛ ಮಾತ್ರವ ಕಂಡು ಪಡದ |
ಸ್ವರ್ಚ್ಛವಹ ಷಡ್ಗುಣವನೆನಲಾ |
ಹೆಚ್ಚುಗೆಯ ಚಿತ್ಸಿಂಧು ನಿನಗಿಂದನ್ಯವಲ್ಲೆಂದ || ೧೩ ||

ಸತ್ಯರೂಪನೆ ಕೇಳು ವೃತ್ತಿ |
ವ್ಯಕ್ತವಾಗಿಹನಾವ ವೃತ್ತಿ |
ಸ್ವಾರ್ಥವಹ ಪರಬೊಮ್ಮವೆಂತಹೆನಯ್ಯ ಯೆಂದೆನಲು ||
ಹತ್ತನೆಯ್ಯ ನರನಂತೆ ಸಾಪನಿ |
ಮಿತ್ತಲುದಿಸಿರ್ದಲ್ಲಮನನಱಿ |
ವೃತ್ತಿರಲ್ಪರವಸ್ತು ನಿನ್ನಿಂದನ್ಯವಿಲ್ಲೆಂದ || ೧೪ ||

ಭೇದವುಂಟೇ ಬೆಲ್ಲದಿಂ ಸಂ ।
ಪಾದಿಸಿದ ಪನಸೀಳೆ ನಿಂಬ ಫ ।
ಲಾದಿಯಾದವಕಾಪರಿಯ ಪರಮಂಗೆಯೂ ನಿನಗು ।
ಆದಿಮಧ್ಯವಸಾನದೊಳು ಪ್ರತಿ ।
ಪಾದಿಸಲ್ಕಿನಿತನ್ಯವಿಲ್ಲೆಂ ।
ದೋದವೇಶ್ರುತಿತತಿಗಳೇಕೋ ದೇವನೆಂದೆನುತ ॥ ೧೫ ॥

ಮಗನೆ ನಿನ್ನ ಮಹತ್ವವೆಂಬುದು ।
ಗಗನದಿಂ ವಿಸ್ತೀರ್ಣವೆಂದರೆ ।
ಬಗೆಯಲಿನ್ನೊಂದನ್ಯವಿಹುದುಂಟೆಂದು ತೋಱುವರೆ ॥
ನೆಗಳವೇ ಗಂಧರ್ವಪಟ್ಟಣ ।
ವೊಗೆಯವೇ ಮೃಗತೃಷ್ಣೆಗಳ್ಮೊರ ।
ಡಿಗಳೊಳಾಪರಿ ಮಿಥ್ಯೆಯಲ್ಲದೆ ತಥ್ಯವಲ್ಲೆಂದ ॥ ೧೬ ॥

ಎಂದ ಮಾತನು ಕೇಳಿ ಪರಮಾ ।
ನಂದ ಸಾಂದ್ರಾಮೃತ ಪಯೋಧಿಯೊ ।
ಳೊಂದಿರುಮೆಯೊಳ್ಪುಷ್ಪಫಲಗಳು ಬಿದ್ದ ತೆಱನಾಗಿ ॥
ನಿಂದು ತನ್ನ ಮಹತ್ವದೊಳು ತಾ ।
ಸಂದಳಿದು ಸಮರಸದಿ ನಿಜಯೋ ।
ಗೀಂದ್ರನಂ ನುತಿಸಿದನನನ್ಯಾಳಾಪದಿಂದೊಲಿದು ॥ ೧೭ ॥

ನಿತ್ಯಮುಕ್ತಸುಖಾತ್ಮ ಜಯಜಯ ।
ಪ್ರತ್ಯಗಾನುಭವೈಕ ಜಯಜಯ ।
ಸತ್ಯನದ್ವಯನಮಲ ಜಯಜಯ ಜಾಡ್ಯಮಯಮಾಯ ॥
ಮತ್ತಗಜ ಪಂಚಾಸ್ಯ ಜಯಜಯ ।
ನಿಸ್ತರಂಗ ಸುಖಾಬ್ಧಿ ಜಯ ಜಯ ।
ಕರ್ತುಮತ್ತ್ರಭುರೂಪ ಗುರುಬಸವೇಶ ಜಯಜಯತು ॥ ೧೮ ॥

ಲೀಲೆಯಿಂದಿನ್ನೂರ ಮೂವ ।
ತ್ತೇಳುಪದನಂ ಸಾಂಗಮಾಗಿ ಸ ।
ಮೇಳದಿಂ ನವಮೋಪದೇಶ ಪರಿಪ್ರಮಾಣಗಳಿಂ ।
ಹೇಳಿ ಶಿಷ್ಯನ ಸಂದಸಂಶಯ ।
ಜಾಳಮಂ ಬಱೊಕ್ಕೈದು ತನ್ನನಿ ।
ಶಾಲಸುಖದೊಳಗೈಕ್ಯವಂ ಮಾಡಿದನು ದೇಶಿಕನು ॥ ೧೯ ॥

ಇತಿ ಸದ್ಗುರುರಹಸ್ಯೇ

ನವಮೋಪದೇಶಂ

ಶ್ರೀ ಶ್ರೀ